ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 31 ಬುಧವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 136 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com   ಜಾಹೀರಾತು: ad@mysurumithra.com

ಮೈಸೂರಲ್ಲಿ ಭಕ್ತಿಭಾವದ ಗೌರಿ ಹಬ್ಬ

ಹೊಸ ವಸ್ತ್ರ ತೊಟ್ಟು ಮಹಿಳೆಯರು, ಯುವತಿಯರ ಸಂಭ್ರಮ



ಮೈಸೂರಿನ ಬೋಗಾದಿ ವಿನಾಯಕನ ದೇವಸ್ಥಾನದಲ್ಲಿ ಭಕ್ತಿ ಭಾವದಿಂದ ಮಹಿಳೆಯರು ಗೌರಿ ಹಬ್ಬ ಆಚರಿಸಿದರು.

ಮೈಸೂರು, ಆ.30(ಆರ್‌ಕೆಬಿ)– ಹಿಂದೂಗಳ ಪವಿತ್ರ ಹಬ್ಬಗಳಲ್ಲಿ ಒಂದಾದ ಗಣೇಶ ಹಬ್ಬದ ಹಿಂದಿನ ದಿನ ಆಚರಿಸಲಾಗುವ ಗೌರಿ ಹಬ್ಬವನ್ನು ಮೈಸೂರಿನಲ್ಲಿ ಮಹಿಳೆಯರು ಭಕ್ತಿಭಾವ ಮತ್ತು ಸಂಭ್ರಮದಿಂದ ಆಚರಿಸಿದರು.

ಪಾರ್ವತಿ ದೇವಿಯ ಅವತಾರವಾದ ಗೌರವ ಸಮರ್ಪಿತವಾದ ಈ ಹಬ್ಬದಲ್ಲಿ ಗಣೇಶನ ತಾಯಿ ಗೌರಿ ಅಥವಾ ಪಾರ್ವತಿ ದೇವಿಯನ್ನು ಭಕ್ತಿ ಭಾವದಿಂದ ಪೂಜಿಸಲಾಗುತ್ತದೆ. ಗೌರಿ ಆಶೀರ್ವಾದ ಪಡೆಯಲು ಮಹಿಳೆಯರು ಭಕ್ತಿಯಿಂದ ಸ್ವರ್ಣ ಗೌರಿ ವ್ರತ ಆಚರಿಸುವ ಮೂಲಕ ಸಂತೋಷದ ವೈವಾಹಿಕ ಜೀವನ ಪಡೆಯಬಹುದು ಎಂಬ ನಂಬಿಕೆಯಿಂದ ಗೌರಿಯನ್ನು ಭಕ್ತಿಭಾವದಿಂದ ಪೂಜಿಸುವುದು ರೂಢಿ. ವಿವಾಹಿತ ಮಹಿಳೆಯರು ತವರಿಗೆ ಬರುವಂತೆ ಈ ದಿನ ಗೌರಿ ಬರುತ್ತಾಳೆ. ಮರುದಿನವೇ ಗಣೇಶನು ತನ್ನ ತಾಯಿ ಗೌರಿಯನ್ನು ಕೈಲಾಸ ಪರ್ವತದ ನಿವಾಸಕ್ಕೆ ಕರೆದೊಯ್ಯಲು ಬರುತ್ತಾನೆ ಎಂಬ ನಂಬಿಕೆ ಇದೆ.

ಮೈಸೂರಿನಲ್ಲಿ ಮಹಿಳೆಯರು ಮಂಗಳವಾರ ಮುಂಜಾನೆ ಬೇಗ ಎದ್ದು, ಮಡಿ ಉಟ್ಟು, ಹೊಸ ವಸ್ತ್ರಗಳನ್ನು ಧರಿಸಿ, ಮನೆಯ ಮುಖ್ಯ ದ್ವಾರದಲ್ಲಿ ತೋರಣ ಕಟ್ಟಿ, ಪೂಜಾ ಕೋಣೆಯಲ್ಲಿ ಗೌರಿಯ ಮಣ್ಣಿನ ಅಥವಾ ಅರಿಶಿನದ ಮೂರ್ತಿಯನ್ನಿಟ್ಟು ಅಲಂಕರಿಸಿ, ಪೂಜಿಸಿದರು. ಮನೆಯಲ್ಲಿ ಗೌರಿಯನ್ನು ಕೂರಿಸಿ, ಭಕ್ತಿಯಿಂದ ಪೂಜಿಸಿದರೆ ಸುಖ, ಸಂಪತ್ತು, ಸಂತೋಷ, ಸಮೃದ್ಧಿ ಲಭಿಸುತ್ತದೆ ಎಂಬ ನಂಬಿಕೆಯಿಂದ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

'ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ, ಶರಣ್ಯೇ ತ್ರಯಂಬಿಕೇ ಗೌರಿ ನಾರಾಯಣೀ ನಮೋಸ್ತುತೆ' ಎಂಬ ಮಂತ್ರ ಪಠಿಸಿದರು. ದೇವಾಲಯಗಳಿಗೆ ತೆರಳಿ ಗೌರಿಗೆ ಬಾಗಿನ ಸಮರ್ಪಿಸಿ ತಮ್ಮ ಇಷ್ಟಾರ್ಥಗಳ ಈಡೇರಿಸುವಂತೆ ಬೇಡಿಕೆ ಸಲ್ಲಿಸಿದರೆ, ಯುವತಿಯರು ಉತ್ತಮ, ಸುಗುಣ ಸಂಪನ್ನನಾದ ವರನನ್ನು ಕರುಣಿಸುವಂತೆ ಪ್ರಾರ್ಥಿಸಿದರು.

ಗಜಮುಖನೆ ಗಣಪತಿಯೆ ನಿನಗೆ ವಂದನೆ...

ಗಣೇಶ ಚತುರ್ಥಿಗೆ ಮೈಸೂರಲ್ಲಿ ಸಿದ್ಧತೆ


ಮೈಸೂರು,ಆ.30(ಆರ್‌ಕೆಬಿ)–ಗೌರೀ ಪುತ್ರ, ಏಕದಂತ, ಸಂಕಷ್ಟಗಳ ನಿವಾರಕ, ವಿಘ್ನ ವಿನಾಶಕ ಗಣೇಶನನ್ನು ಬುಧವಾರ ಬರಮಾಡಿಕೊಳ್ಳಲಾಗುತ್ತಿದೆ. ಎಲ್ಲೆಡೆ ನಾನಾ ವಿಧದ, ವಿವಿಧ ಆಕಾರದ ಗಣೇಶ ಮೂರ್ತಿಗಳನ್ನು ತಮ್ಮ ಮನೆಗಳಲ್ಲಿ, ಬೀದಿಗಳಲ್ಲಿ ಪ್ರತಿಷ್ಠಾಪಿಸಿ, ಪೂಜಿಸಲು ಭಕ್ತರು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಪರಿಸರ ಸ್ನೇಹಿ ಗಣಪನನ್ನೇ ಪ್ರತಿಷ್ಠಾಪಿಸುವಂತೆ ಎಲ್ಲೆಡೆ ಪ್ರಚಾರ ಮಾಡಿರುವ ಹಿನ್ನೆಲೆಯಲ್ಲಿ ಬಹುತೇಕ ಕಡೆಗಳಲ್ಲಿ ಮಣ್ಣಿನ ಗಣೇಶ ಮೂರ್ತಿಗಳ ಮಾರಾಟ ಭರದಿಂದ ಸಾಗಿದೆ. ಬುಧವಾರ ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ತಮ್ಮ ಮನೆಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲು ಭಕ್ತರು ತಮಗಿಷ್ಟವಾದ ಅಳತೆಯ ಗಣೇಶನನ್ನು ಖರೀದಿಸಿ ಕೊಂಡೊಯ್ಯುತ್ತಿರುವ ದೃಶ್ಯ ಇಂದು ಸಾಮಾನ್ಯವಾಗಿತ್ತು.

ಭಾದ್ರಪದ ಮಾಸ ಶುಕ್ಲ ಪಕ್ಷದ ಚತುರ್ಥಿಯಂದು ಗಣೇಶನು ಜನಿಸಿದನೆಂಬ ಪೌರಾಣಿಕ ನಂಬಿಕೆ ಪ್ರಕಾರ ಈ ದಿನದಂದು ಗಣೇಶ ಹಬ್ಬ ಆಚರಿಸಲಾಗುತ್ತದೆ. ಅಲ್ಲದೆ ಮೈಸೂರಿನ ವಿವಿಧೆಡೆ 10 ದಿನಗಳ ಗಣೇಶ ಮಹೋತ್ಸವವನ್ನು ಆಚರಿಸಲು ಸಿದ್ಧತೆ ಕೈಗೊಂಡಿದ್ದಾರೆ.

ಗಣೇಶನ ಪೂಜಾ ವಿಧಾನ

ಮುಂಜಾನೆ ಸೂರ್ಯೋದಯಕ್ಕೆ ಮುನ್ನ ಎದ್ದು, ಸ್ನಾನಾದಿಗಳನ್ನು ಮಾಡಿ, ಶುಭ್ರ ವಸ್ತ್ರ ಧರಿಸಿ, ಪೂಜಾ ಸ್ಥಳಗಳನ್ನು ಶುದ್ಧೀಕರಿಸಬೇಕು. ದೇವರ ಮಂಟಪ ಅಥವಾ ಮೇಜು ಇನ್ನಿತರೆ ಎತ್ತರದ ಸ್ಥಳದಲ್ಲಿ ಕೆಂಪು ಬಟ್ಟೆ ಹಾಸಬೇಕು. ಮಧ್ಯ ಭಾಗದಲ್ಲಿ ಸ್ವಲ್ಪ ಅಕ್ಕಿ ಹರಡಿ, ಅದರ ಮೇಲೆ ಗಣೇಶ ಮೂರ್ತಿಯನ್ನು ಇರಿಸಬೇಕು. ಗಣೇಶನ ಸೊಂಡಿಲು ಎಡ ಭಾಗದಲ್ಲಿದೆ ಮತ್ತು ಮೂರ್ತಿಯ ಬಣ್ಣವು ಕೆಂಪು ಇಲ್ಲದಿದ್ದರೆ ಬಿಳಿ ಬಣ್ಣದಲ್ಲಿದೆ ಎಂದು ಖಚಿತಪಡಿಸಿಕೊಳ್ಳಬೇಕು. ನಂತರ ಗಣೇಶನಿಗೆ



ಸಾಂಪ್ರದಾಯಿಕ ನೈವೇದ್ಯಗಳನ್ನು ಇರಿಸಿ, ಭಕ್ತಿಯಿಂದ ಪೂಜಿಸಬೇಕು.

ಗಣೇಶನನ್ನು ಒಲಿಸಿಕೊಳ್ಳಲು ಶ್ಲೋಕ ಪಠಿಸಿ, ಸಾಮೂಹಿಕವಾಗಿ ಕುಳಿತು ಪೂಜಿಸಿ, ನಮಸ್ಕರಿಸಬೇಕು. ತಮ್ಮ ಇಷ್ಟಾರ್ಥಗಳನ್ನು ನೆರವೇರಿಸುವಂತೆ ಪ್ರಾರ್ಥಿಸಬೇಕು. ಇದು ಗಣೇಶ ಚತುರ್ಥಿಯಂದು ನಡೆಸಲಾಗುವ ಪೂಜಾ ವಿಧಾನ. ನಂತರ ಗಣೇಶ ಮೂರ್ತಿಯನ್ನು ಮನೆಗಳಲ್ಲಿ ಬಕೆಟ್‌ನಲ್ಲಿಯೋ ಅಥವಾ ನೀರಿರುವ ಸೂಕ್ತ ಸ್ಥಳದಲ್ಲಿ ವಿಸರ್ಜಿಸಬೇಕು.



ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರು ಮೈಸೂರಿನ ಪಡುವಾರಹಳ್ಳಿ ಗಣಪತಿ ದೇವಸ್ಥಾನದಲ್ಲಿ ಮಹಿಳೆಯರಿಗೆ ಬಳೆ ತೊಡಿಸುವ ವ್ಯವಸ್ಥೆ ಮಾಡುವ ಮೂಲಕ ಗೌರಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು. ಈ ವೇಳೆ ದೇವಸ್ಥಾನದ ಅಧ್ಯಕ್ಷ ರಾಮಚಂದ್ರಪ್ಪ, ಶ್ರೀನಿವಾಸ್, ನಾಗರಾಜು, ರಾಮಸ್ವಾಮಿ, ಯೋಗೇಶ್, ಭೀಮಕೃಷ್ಣ, ಸುನಿಲ್, ಸುರೇಂದ್ರ ಒಂಟಿಕೊಪ್ಪಲು ಗುರುರಾಜ್ ಮತ್ತು ಸ್ನೇಹಿತರು ಉಪಸ್ಥಿತರಿದ್ದರು.



ಗೌರಿ ಗಣೇಶ ಹಬ್ಬದ ಪ್ರಯುಕ್ತ ಮೈಸೂರಿನ ಶಾರದಾದೇವಿನಗರದಲ್ಲಿ ಮಹಿಳೆಯರಿಗೆ ಚಿತ್ರ ನಿರ್ಮಾಪಕ, ಯುವ ಉದ್ಯಮಿ ಸಂದೇಶ್ ಬಾಗಿನ ಅರ್ಪಿಸಿದರು. ಈ ವೇಳೆ ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ಬಿ.ಎಂ.ರಘು, ಶಿವಾಜಿರಾವ್, ಲಯನ್ಸ್ ಕ್ಲಬ್ ಆಫ್ ಮೈಸೂರು ಚಾಮುಂಡಿ ಸಂಸ್ಥೆ ಅಧ್ಯಕ್ಷ ರವಿಕುಮಾರ್ ಇನ್ನಿತರರಿದ್ದರು.

ಮೂರು ಜಿಲ್ಲೆಗಳಲ್ಲಿ 2 ಸಾವಿರ ಕಿ.ಮೀ. ಸಂಚರಿಸಿದ ಸಾವರ್ಕರ್ ರಥಯಾತ್ರೆ

● 10 ಲಕ್ಷಕ್ಕೂ ಅಧಿಕ ಜನತೆಗೆ ತಲುಪಿದ ಸಾವರ್ಕರ್ ಸಂದೇಶ ● ರಥಯಾತ್ರೆ ಉದ್ದೇಶ ಸಾರ್ಥಕ; ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಯಶಸ್ವಿನಿ ಅಭಿಮತ



ಮೈಸೂರು, ಆ.30 (ಪಿಎಂ)–ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ ಆ.23ರಿಂದ ಎಂಟು ದಿನಗಳ ಕಾಲ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ನಡೆದ 'ಸಾವರ್ಕರ್ ರಥಯಾತ್ರೆ'ಯು 2 ಸಾವಿರ ಕಿ.ಮೀ. ಸಂಚರಿಸಿ 10 ಲಕ್ಷಕ್ಕೂ ಅಧಿಕ ಜನತೆಯನ್ನು ತಲುಪುವ ಮೂಲಕ ಯಶಸ್ವಿಯಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಯಶಸ್ವಿನಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.23ರಂದು ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಥಯಾತ್ರೆಗೆ ಚಾಲನೆ ನೀಡಿದರು. ಮೂರು ಜಿಲ್ಲೆಗಳ ಪ್ರತಿ ತಾಲೂಕು ಹಾಗೂ ಹೋಬಳಿಗಳಲ್ಲಿ ಸಾರ್ವಜನಿಕರು ಅತ್ಯಂತ ಪ್ರೀತಿಯಿಂದ ರಥಯಾತ್ರೆಯನ್ನು ಸ್ವಾಗತಿಸಿದರು ಎಂದರು.

ಪ್ರಮುಖ ವೃತ್ತಗಳಲ್ಲಿ ಸಾವರ್ಕರ್ ಅವರ ಬಗ್ಗೆ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಿಸಲಾಯಿತು. ಜೊತೆಗೆ ಸಾವರ್ಕರ್ ಅವರ ಪುಸ್ತಕಗಳನ್ನು ಮಾರಾಟ ಮಾಡಲಾಯಿತು. ರಥವಾಗಿ ವಿನ್ಯಾಸಗೊಳಿಸಿರುವ ವಾಹನದಲ್ಲಿ ಎಲ್‌ಇಡಿ ಪರದೆ ಮೂಲಕ ಸಾವರ್ಕರ್ ಅವರ ಕಿರುಚಿತ್ರ ಪ್ರದರ್ಶಿಸಲಾಯಿತು. ಆ ಮೂಲಕ ಲಕ್ಷಾಂತರ ಜನತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ವೀರ ಸಾವರ್ಕರ್ ಅವರ ತ್ಯಾಗ, ಸಂದೇಶದ ಕುರಿತು ತಿಳಿಸುವಲ್ಲಿ ರಥಯಾತ್ರೆಯ ಉದ್ದೇಶ ಸಾರ್ಥಕವಾಯಿತು ಎಂದು ತಿಳಿಸಿದರು.

ರಥಯಾತ್ರೆಗೆ ಸಹಕರಿಸಿದ ಮೂರು ಜಿಲ್ಲೆಗಳ ನಾಗರಿಕರು, ಪೊಲೀಸರು ಹಾಗೂ ಮಾಧ್ಯಮದವರಿಗೆ ಪ್ರತಿಷ್ಠಾನದಿಂದ ವಂದನೆ ಅರ್ಪಿಸುತ್ತೇವೆ. ರಥಯಾತ್ರೆ ಆರಂಭದ ಸಂದರ್ಭದಲ್ಲಿ ಅನೇಕರು ಶಾಂತಿ–ಸುವ್ಯವಸ್ಥೆಗೆ ಧಕ್ಕೆ ಉಂಟಾಗಬಹುದೆಂಬ ಅನುಮಾನ ವ್ಯಕ್ತಪಡಿಸಿದ್ದರು. ಆದರೆ ಮೂರು ಜಿಲ್ಲೆಗಳ ಜನತೆ ಅತ್ಯಂತ ಶಾಂತಿ ಮತ್ತು ಪ್ರೀತಿಯಿಂದ ಸಹಕರಿಸಿ ರಥಯಾತ್ರೆ ಯಶಸ್ವಿಗೊಳಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ರಥಯಾತ್ರೆ ಸಂಯೋಜಕ ರಜತ್ ಮಾತನಾಡಿ, ರಥಯಾತ್ರೆಗೆ ನಿರೀಕ್ಷೆಗೂ ಮೀರಿ ನಾಗರಿಕರಿಂದ ಬೆಂಬಲ ವ್ಯಕ್ತವಾಗಿದೆ. ಮೈಸೂರಿನಲ್ಲಿ ಚಾಲನೆ ದೊರೆತ ದಿನ 200 ಬೈಕ್‌ಗಳಲ್ಲಿ ಸಾವರ್ಕರ್ ಅಭಿಮಾನಿಗಳು ರಥಯಾತ್ರೆಯೊಂದಿಗೆ ಸಾಗಿದರು. ಉದಾತ್ತ ಚಿಂತನೆ ಹೊಂದಿದ್ದ ಸಾವರ್ಕರ್ ಸ್ವಾತಂತ್ರ್ಯ ಹೋರಾಟದ ಜೊತೆಗೆ ಸಮಾಜ ಸುಧಾರಣೆಯಲ್ಲಿಯೂ ತೊಡಗಿಸಿಕೊಂಡಿದ್ದರು. ಅವರ ಕೊಡುಗೆ ಅಪಾರವಾಗಿದ್ದು, ರಥಯಾತ್ರೆ ಮೂಲಕ ಅವರನ್ನು ಜನತೆಗೆ ತಲುಪಿಸಿದ ತೃಪ್ತಿ ಇದೆ. ಇಂದು ಸಂಜೆ ರಥಯಾತ್ರೆಯ ಸಮಾರೋಪ ಸಮಾರಂಭ ನಡೆಯಲಿದೆ ಎಂದರು. ಪ್ರತಿಷ್ಠಾನದ ಕಾರ್ಯಕರ್ತರಾದ ರಾಕೇಶ್‌ಭಟ್, ಶಿವಕುಮಾರ್, ಕೆ.ಎಂ.ನಿಶಾಂತ್, ರಥಯಾತ್ರೆಯ ಮತ್ತೊಬ್ಬ ಸಂಯೋಜಕ ಸಂದೇಶ್ ಗೋಷ್ಠಿಯಲ್ಲಿದ್ದರು.

ಪರಿಸರ ಸ್ನೇಹಿ ಗಣೇಶಮೂರ್ತಿ ವಿತರಣೆ

ಮೈಸೂರು, ಆ.30(ಆರ್‌ಕೆಬಿ)– ಗಣೇಶ ಹಬ್ಬದ ಅಂಗವಾಗಿ ಕೆಆರ್‌ಎಂ ಫೌಂಡೇಷನ್ ವತಿಯಿಂದ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಅಗ್ರಹಾರ ಶಂಕರಮಠ ರಸ್ತೆಯ ಮನೆ ಮನೆಗೆ ತೆರಳಿ ಉಚಿತವಾಗಿ ಜೇಡಿ ಮಣ್ಣಿನ ಗೌರಿ–ಗಣೇಶ ಮೂರ್ತಿಗಳ ವಿತರಿಸಲಾಯಿತು. ಕಾಂಗ್ರೆಸ್ ಯುವ ಮುಖಂಡ ಎನ್.ಎಂ. ನವೀನ್ ಕುಮಾರ್ ಗಣೇಶ ಮೂರ್ತಿಗಳನ್ನು ವಿತರಿಸಿದರು. ಮರಗಳನ್ನು ಕಡಿಯುವುದು, ಭೂಮಿಗೆ ರಾಸಾಯನಿಕ ಬಳಸುವುದು, ಪ್ಲಾಸ್ಟಿಕ್ ಬಳಕೆ ಇನ್ನಿತರೆ ಕಾರಣಗಳಿಂದ ಪ್ರಕೃತಿಗೆ ಹಾನಿ ಉಂಟು ಮಾಡಿರುವ ಹಿನ್ನೆಲೆಯಲ್ಲಿ ಇಡೀ ವಾತಾವರಣ ಕಲುಷಿತಗೊಳ್ಳುತ್ತಿದೆ. ಪ್ರಕೃತಿಯ ಮುನಿಸಿಗೆ ಒಳಗಾಗಿ ಹವಾಮಾನ ವೈಪರೀತ್ಯದಿಂದ ನಾನಾ ರೀತಿಯ ತೊಂದರೆ ಅನುಭವಿಸುವಂತಾಗಿದೆ. ಹಾಗಾಗಿ ಪ್ರತಿಯೊಬ್ಬರು ಎಚ್ಚೆತ್ತು, ಪರಿಸರ ರಕ್ಷಣೆಗೆ ಪಣ ತೊಡಬೇಕು. ಮುಂದಿನ ಪೀಳಿಗೆಗೆ ಪರಿಸರವನ್ನು ಕೊಡುಗೆಯಾಗಿ ನೀಡಲು ಮುಂದಾಗಬೇಕು ಎಂದರು.



ಸುಜೀವ್ ಫೌಂಡೇಶನ್ ಅಧ್ಯಕ್ಷ ರಾಜಾರಾಂ ಮಾತನಾಡಿ, ಗಣೇಶ ಹಬ್ಬದಲ್ಲಿ ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಗಣೇಶನ ಬದಲಿಗೆ ಮಣ್ಣಿನ ಗಣೇಶ ಮೂರ್ತಿಗಳನ್ನೇ ಸ್ಥಾಪಿಸಿ ಪೂಜಿಸಬೇಕು. ಹಬ್ಬದ ಜೊತೆ ಜೊತೆಗೆ ಪರಿಸರವನ್ನೂ ಸಂರಕ್ಷಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು. ಈ ವೇಳೆ ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಮುಖಂಡರಾದ ಜಿ.ರಾಘವೇಂದ್ರ, ಹರೀಶ್ ನಾಯ್ಡು, ಎಸ್.ಎನ್.ರಾಜೇಶ್, ವಿನಯ್ ಕಣಗಾಲ್ ಇನ್ನಿತರರು ಉಪಸ್ಥಿತರಿದ್ದರು.

ಸುತ್ತೂರಲ್ಲಿ ಶ್ರೀ ವೀರಭದ್ರೇಶ್ವರ ಉತ್ಸವ



ಸುತ್ತೂರು,ಆ.30–ಸುತ್ತೂರು ಶ್ರೀಕ್ಷೇತ್ರ ಮಠದ ಆವರಣ ಹಾಗೂ ವೀರಭದ್ರೇಶ್ವರ ಗುಡ್ಡದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ಶ್ರೀ ವೀರಭದ್ರೇಶ್ವರ ಜಯಂತ್ಯೋತ್ಸವದ ಪ್ರಯುಕ್ತ ರುದ್ರಾಭಿಷೇಕ ವಿಶೇಷ ಪೂಜೆ, ಉತ್ಸವಮೂರ್ತಿ ಮೆರವಣಿಗೆ ಮಂಗಳವಾರ ನೆರವೇರಿತು. ನೂರಾರು ಭಕ್ತಾದಿಗಳು ಭಾಗವಹಿಸಿದ್ದರು.

ದಸರಾ ಪ್ರಾಯೋಜಕತ್ವ: ನಾಳೆ ಸಭೆ

ಮೈಸೂರು,ಆ.30(ಪಿಎಂ)–ದಸರಾ ಮಹೋತ್ಸವ ಪ್ರಯುಕ್ತ ಆಯೋಜಿಸುವ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡುವ ಸಂಬಂಧ ಸೆ.1ರಂದು ಆಸಕ್ತ ಸಂಘ–ಸಂಸ್ಥೆಗಳ ಸಭೆ ಹಮ್ಮಿಕೊಳ್ಳಲಾಗಿದೆ. ಸಾಂಪ್ರದಾಯಿಕ ಹಾಗೂ ವೈಭವಯುತ ದಸರಾ ಆಚರಿಸಲು ಕಾರ್ಯಕ್ರಮಗಳನ್ನು ರೂಪಿಸುವಂತೆ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ದಸರಾ ಉನ್ನತ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅದರಂತೆ ಸೆ.26ರಿಂದ ಅ.5ರವರೆಗೆ ವೈಭವಯುತ ಕಾರ್ಯಕ್ರಮಗಳನ್ನು ಆಯೋಜಿಸಲು ದಸರಾ ಕಾರ್ಯಕಾರಿ ಸಮಿತಿ ಸಭೆಯು ತೀರ್ಮಾನ ಕೈಗೊಂಡಿದೆ.

ಹಾಗಾಗಿ ನವರಾತ್ರಿಯ ದಿನಗಳಲ್ಲಿ ಆಯೋಜಿಸಲಾಗುವ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡಲು ಆಸಕ್ತಿ ಹೊಂದಿರುವ ಕೈಗಾರಿಕೆಗಳು, ಸರ್ಕಾರಿ ಸ್ವಾಮ್ಯ ಮತ್ತು ಖಾಸಗಿ ಬ್ಯಾಂಕ್‌ಗಳು ಸೇರಿದಂತೆ ಸಂಘ–ಸಂಸ್ಥೆಗಳ ಸಭೆಯನ್ನು ಅಂದು ಮಧ್ಯಾಹ್ನ 12ಕ್ಕೆ ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಆಸಕ್ತ ಸಂಘ–ಸಂಸ್ಥೆ, ಕೈಗಾರಿಕೆ ಸೇರಿದಂತೆ ಇತರೆ ಸಂಸ್ಥೆಗಳ ಪ್ರತಿನಿಧಿಗಳು ಆಗಮಿಸಿ ತಮ್ಮ ಸಲಹೆ–ಸೂಚನೆ ಹಾಗೂ ಪ್ರಾಯೋಜಕತ್ವ ಸಂಬಂಧ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿಗಳೂ ಆದ ದಸರಾ ವಿಶೇಷಾಧಿಕಾರಿ ಡಾ.ಬಗಾದಿ ಗೌತಮ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಇನ್ನೂ ಐದು ದಿನ ಮಳೆ ಸಾಧ್ಯತೆ

ಕೊಡಗಲ್ಲಿ ಭಾರೀ, ಮೈಸೂರು, ಮಂಡ್ಯ, ಚಾ.ನಗರದಲ್ಲಿ ಸಾಧಾರಣ

ಮೈಸೂರು,ಆ.30(ಆರ್‌ಕೆಬಿ)–ಹವಾಮಾನ ಮುನ್ಸೂಚನೆ ಪ್ರಕಾರ ಇನ್ನೂ ಐದು ದಿನ ಕೊಡಗು ಜಿಲ್ಲೆಯಲ್ಲಿ ಸಾಧಾರಣದಿಂದ ಭಾರೀ ಹಾಗೂ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಸಾಧಾರಣ ಮಳೆ ಬರುವ ಸಾಧ್ಯತೆ ಇದೆ.



ಕೊಡಗು ಜಿಲ್ಲೆಯಲ್ಲಿ ಆ.31ರಿಂದ ಸೆ.4ರವರೆಗಿನ ಅವಧಿಯಲ್ಲಿ ಆ.31ರಂದು 50 ಮಿ.ಮೀ., ಸೆ.1ರಂದು 28, 2ರಂದು 15, 3ರಂದು 6, 4ರಂದ 13 ಮಿ.ಮೀ. ಮಳೆಯಾಗಲಿದೆ. ಈ ಅವಧಿಯಲ್ಲಿ ಗರಿಷ್ಠ 23 ಡಿಗ್ರಿ ಸೆಲ್ಸಿಯಸ್, ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ. ಈ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಕ್ರಮವಾಗಿ 15, 15, 13, 8, 11 ಮಿ.ಮೀ., ಚಾಮರಾಜನಗರ ಜಿಲ್ಲೆಯಲ್ಲಿ ಕ್ರಮವಾಗಿ 18, 18, 21, 9, 10 ಮಿ.ಮೀ., ಮಂಡ್ಯ ಜಿಲ್ಲೆಯಲ್ಲಿ ಕ್ರಮವಾಗಿ 15, 15, 11, 4, 7 ಮಿ.ಮೀ. ಮಳೆಯಾಗುವ ಸಂಭವವಿದೆ. ಈ ಅವಧಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 28ರಿಂದ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ 30 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ನಾಗನಹಳ್ಳಿ ಗ್ರಾಮೀಣ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ದೀರ್ಘಾವಧಿ ಹವಾಮಾನ ಮುನ್ಸೂಚನೆ ಪ್ರಕಾರ ಸೆ.2ರಿಂದ 8ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಸ್ವಾತಂತ್ರ್ಯ ಹೋರಾಟಗಾರ ಬಿ.ಲಿಂಗಯ್ಯ ನಿಧನ



ಮೈಸೂರು,ಆ.30– ಸ್ವಾತಂತ್ರ್ಯ ಹೋರಾಟಗಾರರೂ ಆದ ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಬಿ.ಲಿಂಗಯ್ಯ (95) ವಯೋಸಹಜ ಅನಾರೋಗ್ಯದಿಂದ ಸೋಮವಾರ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಮುನಿಯಮ್ಮ



ಮೈಸೂರಿನ ವಿದ್ಯಾರಣ್ಯಪುರಂನ 4ನೇ ಮುಖ್ಯ ರಸ್ತೆ, 24ನೇ ತಿರುವಿನ ನಿವಾಸಿ ವರದರಾಜು ಅವರ ಧರ್ಮಪತ್ನಿ ಮುನಿಯಮ್ಮ (75) ಮಂಗಳವಾರ ಮುಂಜಾನೆ ನಿಧನರಾದರು.

ಮೃತರು ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ. ಬುಧವಾರ ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.08.2022 ಬುಧವಾರ, ಮಳೆ ನಕ್ಷತ್ರ : ಪುಬ್ಬ, 31.08.2022 ರಿಂದ 13.09.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ಥಿ, ನಕ್ಷತ್ರ : ಚಿತ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35ನಖ ಶಿಖಾಂತ –ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಸಿ. ವಿಶ್ವನಾಥ್, ಕೆ.ಬಿ. ಸುನೀತಾ ಆಚಾರ್ಯ, ವ್ಯಾಖ್ಯಾನ– ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 10.00 ಹರಿಕತೆ 'ಶಮಂತ ಕೋಪಾಖ್ಯಾನ', ಪ್ರಸ್ತುತಿ– ಬೇಲೂರು ಹೆಚ್.ಎ.ವಸಂತಲಕ್ಷ್ಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ವೃಂದಗಾನ, 12.45 ಲಾಕ್‌ಡೌನ್ ಕಥಾ ನಾಟಕ, ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, 'ನಿರ್ಧಾರ'. ಮೂಲಕಥೆ– ನಳೀನಿ ಭೀಮಪ್ಪ, ನಾಟಕ ರೂಪ– ಜಿ.ಎಲ್. ತ್ರಿಪುರಾಂತಕ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಮನೆ ಮನೆ ಗಣೇಶ–ಭಾಗವಹಿಸುವವರು ವಿಜಯಾಶಂಕರ್ ಹಾಗೂ ಸಂಧ್ಯಾ ಸೀತಾರಾಂ, ಪ್ರಸ್ತುತಿ– ಕೆ.ಬಿ. ಮೀನಾ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಶಾಂತಾ ಡಿ.ಕಿಣಿ, 7.00 ದುಬೈನಲ್ಲಿ ನಡೆಯಲಿರುವ ಏಷಿಯಾ ಕಪ್2022 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ವಿನಾಯಕ ಚೌತಿ, ವರಸಿದ್ಧಿ ವಿನಾಯಕ ವ್ರತ, ಸಹಸ್ರ ಮೋದಕ ಹೋಮ, ಗಣಪತಿ ನವರಾತ್ರಿ ಪ್ರಾರಂಭ, ಶ್ರೀ ಪಾದವಲ್ಲಭ ಜಯಂತಿ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮೈಸೂರು ಗಣೇಶ ಉತ್ಸವ ಸಮಿತಿ:** ಗಣೇಶ ಉತ್ಸವ, ಸಂಜೆ 6 ರಿಂದ ವಿದುಷಿ ಟಿ.ಎಸ್. ಶ್ರೀಲಕ್ಷ್ಮೀಕುಮಾರ್ ಮತ್ತು ಶಿಷ್ಯವೃಂದ, ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಅವರಿಂದ ಭರತನಾಟ್ಯ, ಸಂಜೆ 7 ರಿಂದ ವಿದುಷಿ ನಾಗಲಕ್ಷ್ಮೀ ನಾಗಾರ್ಜುನ್ ಮತ್ತು ಶಿಷ್ಯ ವೃಂದ, ಚಂಪಕ ಅಕಾಡೆಮಿ ಅವರಿಂದ ಗಣೇಶ ವಂದನ, ಸಂಜೆ 8 ರಿಂದ ಕಿತ್ತೂರು ರಾಣಿ ಚನ್ನಮ್ಮ ಬಿರುದು ವಿಜೇತೆ ಡಾ. ವಿ. ಮಾಲಿನಿ ಅವರಿಂದ ಹರಿಕಥೆ–ವಿನಾಯಕ ವಿಜಯ, ಸ್ಥಳ: ಮಾಧವ ಕೃಪ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ ಹಾಗೂ ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** ಗೌರಿ–ಗಣೇಶ ಹಬ್ಬದ 42ನೇ ವಾರ್ಷಿಕೋತ್ಸವ, ಬೆಳಗ್ಗೆ 4ಕ್ಕೆ ಮಹಾಗಣಪತಿಗೆ ಪಂಚಾಮೃತಾಭಿಷೇಕ, ರುದ್ರಾಭಿಷೇಕ, ಗಣಪತಿ ಸ್ಥಾಪನೆ, ಸಂಜೆ 7ಕ್ಕೆ 1008 ಮೋದಕಗಳಿಂದ ಮಹಾಗಣಪತಿ ಹೋಮ ಮತ್ತು 108 ತೆಂಗಿನ ಕಾಯಿಗಳಿಂದ ವಿದ್ಯಾಗಣಪತಿ ಹೋಮ, 8.30ಕ್ಕೆ ಮಹಾಮಂಗಳಾರತಿ, ಬೆಳಗ್ಗೆ 10.30ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ, 6ನೇ ಮುಖ್ಯ ರಸ್ತೆ, ವಿನಾಯಕನಗರ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಗಮಕ ಕಾರ್ಯಕ್ರಮ, ಸಂಜೆ 6.45 ರಿಂದ ವಿದ್ವಾನ್ ರಂಗಸ್ವಾಮಿ ಅವರಿಂದ ನಾಗಸ್ವರ, ವಿದ್ವಾನ್ ಕೇಶವ ಮೋಹನ್–ವಯೋಲಿನ್, ವಿದ್ವಾನ್ ಆರ್.ನಾಗೇಶ್ –ತವಿಲ್, ವಿದ್ವಾನ್ ಸಾಯಿ ಶಿವು–ಮೃದಂಗ, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಮಹಾರುದ್ರಾಭಿಷೇಕ, ದೇವತಾ ಪ್ರಾರ್ಥನೆ, ಮಹಾ ಸಂಕಲ್ಪ, ಗಂಗಾಪೂಜೆ, ಗಣಪತಿಗಳಿಗೆ ತೈಲಾಭಿಷೇಕ, ಕ್ಷೀರಾಭಿಷೇಕ, ಪಂಚಾಮೃತ, ಮಹಾರುದ್ರಾಭಿಷೇಕ, ರಜತಕವಚಾಲಂಕಾರ, ವಿಶೇಷ ಹೂವಿನ ಅಲಂಕಾರ, ಮಹಾನೈವೇದ್ಯ, ಸಂಜೆ 4ಕ್ಕೆ ಮಹಾಮಂಗಳಾರತಿ, ಸಹಸ್ರಬಿಲ್ವದೂರ್ವ, ಕುಂಕುಮ ಅರ್ಚನೆ, ರಾಜೋಪಚಾರ, ರಾಷ್ಟ್ರಾಶೀರ್ವಾದ ತೀರ್ಥಪ್ರಸಾದ ವಿನಿಯೋಗ, ಸಾನ್ನಿಧ್ಯ : ವಿದ್ವಾನ್ ಶರತ್‌ಚಂದ್ರ ಸ್ವಾಮೀಜಿ, ಸ್ಥಳ: ಗಣಪತಿ ದೇವಸ್ಥಾನ ಟ್ರಸ್ಟ್, ಕೆ.ಆರ್. ಮೊಹಲ್ಲಾ, ತ್ಯಾಗರಾಜ ವೃತ್ತ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

1.09.2022 ಗುರುವಾರ, ಮಳೆ ನಕ್ಷತ್ರ : ಪುಬ್ಬ, 31.08.2022 ರಿಂದ 13.09.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ
ತಿಥಿ: ಭಾದ್ರಪದ, ನಕ್ಷತ್ರ : ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂಸಂಜೆ 5.00ಕ್ಕೆ 'ಒಂದೇ ಕಥೆ' ವಿವಿಧಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 10.00 ಆಲತ್ತೂರು ಸಹೋದರರು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 3.00 ರಾಗಲಹರಿ, ಪ್ರಸ್ತುತಿ– ಜಿ. ಪುಷ್ಪಲತಾ, ನಿರ್ಮಾಣ– ಎಸ್. ಸುಬ್ರಹ್ಮಣ್ಯ, 4.00 ಹಳ್ಳಿಹಾಡು–ಭಾಗವಹಿಸುವವರು ನಿಟ್ರೆ ಗ್ರಾಮದ ಮಹದೇವಯ್ಯ ಮತ್ತು ಸಂಗಡಿಗರು, 4.30 ಸಂಧ್ಯಾರಾಗ, 6.50 ಕೃಷಿರಂಗ–ಕಿಸಾನ್ ವಾಣಿ, 9.00 ಯುವವಾಣಿ–ಶಿಕ್ಷಕರ ದಿನಾಚರಣೆಯ ಸಂಬಂಧವಾಗಿ ವಿಶೇಷ ಚಿತ್ರ ಚಿತ್ತಾರ, ಪ್ರಸ್ತುತಿ– ಜಿ. ಭೈಶ್ರೀ, 9.30 ಕನ್ನಡ ಭಾರತಿ, 10.30 ಸವಿನೆನಪು

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಋಷಿಪಂಚಮಿ, ಚತುರ್ವೇದ ಸಭೆ, ಚತುರ್ವೇದ ಪಂಡಿತರಿಗೆ ಸನ್ಮಾನ, ಸಮಾರಾಧನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು:** ಸಮಾರೋಪ ಮತ್ತು ಬೀಳ್ಕೊಡುಗೆ ಕಾರ್ಯಕ್ರಮ, ಸಮಾರೋಪ ಭಾಷಣ : ಮೈಸೂರು ವಿವಿ ಸೆಂಟರ್ ಫಾರ್ ಇನ್‌ಫಾರ್ಮೇಷನ್ ಸೈನ್ಸ್ ಅಂಡ್ ಟೆಕ್ನಾಲಜಿ ಸ್ಥಾಪಕ ನಿರ್ದೇಶಕ ಪ್ರೊ. ಎ. ಬಾಲಸುಬ್ರಮಣಿಯನ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಗೌರವ ಅತಿಥಿಗಳು : ಖಜಾಂಚಿ ಶ್ರೀಶೈಲ ರಾಮಣ್ಣವರ್, ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಶ್ರೀ ಸಾಹುಕಾರ್ ಚೆನ್ನಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ಗಣೇಶ ಉತ್ಸವ ಸಮಿತಿ:** ಗಣೇಶ ಉತ್ಸವ, ಸಂಜೆ 6.15 ರಿಂದ ಸಂಗೀತ ಸಂಜೆ–ಕರ್ನಾಟಕ ಪೊಲೀಸ್ ವಾದ್ಯ, ಸಂಜೆ 7.30 ರಿಂದ ಕರ್ನಾಟಕ ಕಲಾಶ್ರೀ ಗುರು ಶ್ರೀ ಸತ್ಯನಾರಾಯಣ ರಾಜು ಮತ್ತು ಬಳಗದವರಿಂದ ನೃತ್ಯ, ಸ್ಥಳ: ಮಾಧವ ಕೃಪ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಗಮಕ ಕಾರ್ಯಕ್ರಮ, ಸಂಜೆ 6 ಗಂಟೆಗೆ 61ನೇ ವರ್ಷದ ಪಾರಂಪರಿಕ ಸಂಗೀತೋತ್ಸವದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪ್ರಕಾಶಕರು, ದಿ ಪ್ರಿಂಟರ್ಸ್ ಮೈಸೂರು ನಿರ್ದೇಶಕ ಶಾಂತಕುಮಾರ್, ಅಧ್ಯಕ್ಷತೆ : ಎಸ್‌ಪಿವಿಜಿಎಂಸಿ ಟ್ರಸ್ಟ್ ಅಧ್ಯಕ್ಷ ಜಗನ್ನಾಥ ಶೆಣೈ, ಉಪಸ್ಥಿತರು : ಮಾಜಿ ಶಾಸಕ ವಾಸು, ಸನ್ಮಾನ ಸಮಾರಂಭ : ವಾಣಿಜ್ಯ ತೆರಿಗೆ ಉಪ ಆಯುಕ್ತ ರಮೇಶ್ ನರಸಯ್ಯ ಅವರಿಗೆ, ಸಂಜೆ 6.45ರಿಂದ ವಿದ್ವಾನ್ ಟಿ.ಎಂ. ಕೃಷ್ಣ ಅವರಿಂದ ಗಾಯನ, ವಿದುಷಿ ಅಕ್ಕರೈ ಶುಭಲಕ್ಷ್ಮಿ–ವಯೋಲಿನ್, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ, ವಿದ್ವಾನ್ ವಾಳೈಪಲ್ಲಿ ಕೃಷ್ಣಕುಮಾರ್–ಘಟ, 61ನೇ ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 31 ಬುಧವಾರ 2022

ಸಂಪುಟ: 43 | ಸಂಚಿಕೆ: 136 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಭಾರೀ ಮಳೆಯಿಂದ ಮಂಡ್ಯ, ರಾಮನಗರ, ಬೆಂಗಳೂರು ಗ್ರಾಮಾಂತರ ವಿಭಾಗದಲ್ಲಿ ಜಲಪ್ರಳಯ

ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಪುನರ್‌ವಿನ್ಯಾಸ

● ಸರ್ಕಾರಕ್ಕೆ ಗುತ್ತಿಗೆದಾರರ ಭರವಸೆ ● ಇನ್ನು ನಾಲ್ಕು ತಿಂಗಳಲ್ಲಿ ಸುಸಜ್ಜಿತ ರಸ್ತೆ ಪೂರ್ಣ ● ಹಾಲಿ ದೋಷಗಳೆಲ್ಲವನ್ನೂ ಸರಿಪಡಿಸುವ ವಿಶ್ವಾಸ ● ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಂದಲೂ ಸದ್ಯದಲ್ಲೇ ಪರಿಶೀಲನೆ



ಬೆಂಗಳೂರು, ಆ.30 (ಕೆಎಂಶಿ)–ಬೆಂಗಳೂರು–ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿರುವ ಲೋಪ ದೋಷವನ್ನು ಸರಿಪಡಿಸಲು ಮತ್ತೆ ರಸ್ತೆ ಪುನರ್‌ವಿನ್ಯಾಸ ಮಾಡುವುದಾಗಿ ಗುತ್ತಿಗೆದಾರರು ಸರ್ಕಾರಕ್ಕೆ ಭರವಸೆ ನೀಡಿದ್ದಾರೆ.

ಕಳೆದ ಕೆಲವು ದಿನಗಳಿಂದ ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ ಜಿಲ್ಲೆಯಲ್ಲಿ ಬೀಳುತ್ತಿರುವ ಭಾರೀ ಮಳೆಯಿಂದ ಕೆರೆ ಕಟ್ಟೆಗಳು ತುಂಬಿದ ನೀರು ಈ ರಸ್ತೆಯನ್ನು ಆವರಿಸಿಕೊಂಡಿದೆ. ಇದರಿಂದ ಕೆಲವು ಸಂದರ್ಭಗಳಲ್ಲಿ ರಸ್ತೆ ಸಂಚಾರವನ್ನೇ ನಿರ್ಬಂಧಿಸಲಾಗಿದೆ. ರಸ್ತೆ ನಿರ್ಮಿಸುವ ಸಂದರ್ಭದಲ್ಲಿ ಇಂತಹ ಬೃಹತ್ ಮಳೆ ಎದುರಾದ ಸನ್ನಿವೇಶದಲ್ಲಿ ಸರಾಗವಾಗಿ ನೀರು ಹರಿದು ಹೋಗುವ ವಿನ್ಯಾಸವನ್ನು ಕೇಂದ್ರ ಭೂ ಸಾರಿಗೆ ಇಲಾಖಾಧಿಕಾರಿಗಳು ಮತ್ತು ಗುತ್ತಿಗೆದಾರರು ಪರಿಗಣಿಸಿರಲಿಲ್ಲ. ಪ್ರಸಕ್ತ ಬಿದ್ದಿರುವ ಮಳೆ ಗುತ್ತಿಗೆದಾರರ ಕಣ್ತೆರೆಸಿದೆ. ರಾಜ್ಯ ಸರ್ಕಾರದ ಆದೇಶದ ಮೇರೆಗೆ ರಸ್ತೆಯ ಕೆಲವು ಭಾಗಗಳಲ್ಲಿ ಪುನರ್‌ವಿನ್ಯಾಸ ಮಾಡಿ, ಎಷ್ಟೇ ದೊಡ್ಡ ಪ್ರಮಾಣದ ನೀರು ▶ 9ನೇ ಪುಟಕ್ಕೆ

ಬೆಂಗಳೂರು–ಮೈಸೂರು ಹೆದ್ದಾರಿ ಪ್ಲಾನ್ ಮಾಡಿದ ಇಂಜಿನಿಯರ್‌ಗೆ ಪದ್ಮಭೂಷಣ ಪ್ರಶಸ್ತಿ ನೀಡಬೇಕು



ಬೆಂಗಳೂರು, ಆ.30 (ಕೆಎಂಶಿ)–ಬೆಂಗಳೂರು–ಮೈಸೂರು ಹೆದ್ದಾರಿ ಪ್ಲಾನ್ ಮಾಡಿರುವ ಇಂಜಿನಿಯರ್‌ಗಳಿಗೆ ಮುಖ್ಯಮಂತ್ರಿಗಳು ಪದ್ಮಭೂಷಣ ಅಥವಾ ಬೇರೆ ಪ್ರಶಸ್ತಿ ಕೊಡಿಸಬೇಕು ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿ ಮಾಡುವಾಗ ಎತ್ತರ ಪ್ರದೇಶದಲ್ಲಿ ನೀರು ಯಾವ ರೀತಿ ಹೋಗಬೇಕು ಎಂಬುದರ ಬಗ್ಗೆ ಸಾಮಾನ್ಯ ಪ್ರಜ್ಞೆ ಇಟ್ಟುಕೊಂಡು ▶ 9ನೇ ಪುಟಕ್ಕೆ


ಮಳೆಯಿಂದ ಆಗಿರುವ ಹಾನಿಯನ್ನು ನಾವೆಲ್ಲರೂ ಸೇರಿ ಸರಿಪಡಿಸೋಣ




ಮೈಸೂರು, ಆ.30(ಜಿಎ)–ಬೆಂಗಳೂರು–ಮೈಸೂರು ದಶಪಥ ರಸ್ತೆಗಾಗಿ ಯಾವುದಾದರೂ ಕೆರೆ, ನಾಲೆಗಳು ಒತ್ತುವರಿಯಾಗಿದ್ದರೆ, ಸರ್ವೆ ಮಾಡಿಸಿ ಮಾಹಿತಿ ನೀಡಿ ನಾನು ಸರಿಪಡಿಸುತ್ತೇನೆ ಎಂದು ಸಂಸದ ಪ್ರತಾಪ್ ಸಿಂಹ ಭರವಸೆ ನೀಡಿದ್ದಾರೆ. ದಶಪಥ ರಸ್ತೆ ಮಾಡುವ ▶ 9ನೇ ಪುಟಕ್ಕೆ

ಎರಡು ದಿನ ಸುರಿದ ಭಾರೀ ಮಳೆಯಿಂದ ಅಪಾರ ಹಾನಿ

ರಾಮನಗರ, ಮಂಡ್ಯ, ಚಾಮರಾಜನಗರ, ಮೈಸೂರಲ್ಲಿ 2 ಸಾವಿರ ಕೋಟಿಯಷ್ಟು ನಷ್ಟ



ಬೆಂಗಳೂರು: ಕಳೆದ ಎರಡು ದಿನಗಳಿಂದ ರಾಜ್ಯದಲ್ಲಿ ಬೀಳುತ್ತಿರುವ ಭಾರೀ ಮಳೆಯಿಂದ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಇಂದಿಲ್ಲಿ ತಿಳಿಸಿದ್ದಾರೆ. ಸರ್ಕಾರಕ್ಕೆ ಬಂದಿರುವ ಪ್ರಾಥಮಿಕ ವರದಿಯಲ್ಲಿ ರಾಮನಗರ, ಮಂಡ್ಯ, ಚಾಮರಾಜನಗರ ಹಾಗೂ ಮೈಸೂರಿನ ಕೆಲವು ಭಾಗಗಳಲ್ಲಿ ನಿನ್ನೆ ಒಂದೇ ದಿನ ಎರಡು ಸಾವಿರ ಕೋಟಿ ರೂ.ನಷ್ಟು ಬೆಳೆ ▶ 9ನೇ ಪುಟಕ್ಕೆ



ಸಂಸದ ಪ್ರತಾಪ್ ಸಿಂಹ ಇಲ್ಲಿಗೆ ಬಂದರೆ ಸ್ವಿಮ್ ಮಾಡಬಹುದು



ಬೆಂಗಳೂರು, ಆ.30 (ಕೆಎಂಶಿ)–ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕಾಮಗಾರಿ ಅತ್ಯುತ್ತಮವಾಗಿದೆ ಎಂದು ಹೇಳಿರುವ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉತ್ತಮವಾದ ಕೆಲಸ ಏನಾಗಿದೆ ಎಂಬುದನ್ನು ಪ್ರತಾಪ ಸಿಂಹ ಬಂದು ನೋಡಲಿ. ಅವರೇ ನಿಂತು ಫೋಟೋ ತೆಗೆಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹಾಕಿಸಿಕೊಂಡಿದ್ದರು. ರಸ್ತೆ ನಿರ್ಮಾಣದ ಪ್ರತಿ ಹಂತದಲ್ಲೂ ಫೋಟೋ ತೆಗೆಸಿಕೊಂಡಿದ್ದರು. ▶ 9ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತ ಜನತೆಗೆ ಗೌರಿ–ಗಣೇಶ ಹಬ್ಬದ ಶುಭಾಶಯಗಳು

ಬಿಡುವು

ಗೌರಿ–ಗಣೇಶ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 1–9–2022ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಗಣೇಶೋತ್ಸವಕ್ಕೆ ಹೈಕೋರ್ಟ್ ಅಸ್ತು




ಬೆಂಗಳೂರು, ಆ.30–ಹುಬ್ಬಳ್ಳಿಯ ಈದ್ಗಾ ಮೈದಾನ (ರಾಣಿ ಚೆನ್ನಮ್ಮ ಮೈದಾನ)ದಲ್ಲಿ ಗಣೇಶೋತ್ಸವಕ್ಕೆ ರಾಜ್ಯ ಹೈಕೋರ್ಟ್ ಗ್ರೀನ್ ಸಿಗ್ನಲ್ ನೀಡಿದೆ.

ಹುಬ್ಬಳ್ಳಿ–ಧಾರವಾಡ ನಗರ ಪಾಲಿಕೆ ನೀಡಿದ್ದ ಆದೇಶವನ್ನು ಎತ್ತಿ ಹಿಡಿಯುವ ಮೂಲಕ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ನೇತೃತ್ವದ ಏಕ ಸದಸ್ಯ ಪೀಠ, ಗಣೇಶೋತ್ಸವಕ್ಕೆ ಪಾಲಿಕೆ ನೀಡಿದ್ದ ಅನುಮತಿ ಪ್ರಶ್ನಿಸಿ ಅಂಜುಮಾನ್ ಇಸ್ಲಾಂ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ.

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಗಣೇಶೋತ್ಸವ ಆಚರಣೆಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಅಂಜುಮಾನ್ ಇಸ್ಲಾಂ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡ ಹೈಕೋರ್ಟ್ ಎರಡು ಕಡೆಯ ವಾದ–ಪ್ರತಿವಾದವನ್ನು ಆಲಿಸಿ ರಾತ್ರಿ 11.30ರಲ್ಲಿ ತನ್ನ ತೀರ್ಪು ಪ್ರಕಟಿಸಿತು.

ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣೇಶೋತ್ಸವಕ್ಕೆ ಸುಪ್ರೀಂಕೋರ್ಟ್ ಬ್ರೇಕ್



ನವದೆಹಲಿ, ಆ.30– ಬೆಂಗಳೂರಿನ ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣೇಶೋತ್ಸವ ಆಚರಣೆಗೆ ಸುಪ್ರೀಂಕೋರ್ಟ್ ಅವಕಾಶ ನಿರಾಕರಿಸಿದ್ದು, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಿದೆ.

ಕರ್ನಾಟಕ ವಕ್ಫ್ ಮಂಡಳಿ ಸಲ್ಲಿಸಿದ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ, ಅಭಯ್ ಎಸ್. ಓಕಾ ಹಾಗೂ ಎಂ.ಎಂ.ಸುಂದರೇಶ್ ಒಳಗೊಂಡ ಪೀಠವು ಈ ಆದೇಶ ಹೊರಡಿಸಿದೆ. ಇದಕ್ಕೂ ಮುನ್ನ ಪ್ರಕರಣದ ವಿಚಾರಣೆ ನಡೆಸಿದ ▶ 9ನೇ ಪುಟಕ್ಕೆ


ವಾಲ್ಮೀಕಿ ಸಮುದಾಯದ ಬೇಡಿಕೆಯಂತೆ ಚುನಾವಣೆಗೆ ಮುನ್ನ ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಸರ್ಕಾರ ನಿರ್ಧಾರ



ಬೆಂಗಳೂರು, ಆ.30 (ಕೆಎಂಶಿ)–ರಾಜ್ಯ ವಿಧಾನಸಭಾ ಚುನಾವಣೆ ಸಮೀಪವಾಗುತ್ತಿರುವಂತೆ ವಾಲ್ಮೀಕಿ ಸಮುದಾಯದ ಬೇಡಿಕೆಯಂತೆ ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ತೀರ್ಮಾನಕ್ಕೆ ರಾಜ್ಯ ಸರ್ಕಾರ ಬಂದಿದೆ. 50ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವ ಈ ಸಮುದಾಯವನ್ನು ಓಲೈಸಿಕೊಳ್ಳಲು ಬೊಮ್ಮಾಯಿ ನೇತೃತ್ವದ ಸರ್ಕಾರ ಅವರಿಗಿರುವ ಶೇ.3ರಷ್ಟು ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸಲು ನಿರ್ಧರಿಸಿದೆ. ತಮಗೆ ನಿಗದಿಪಡಿಸಿರುವ ಮೀಸಲಾತಿ ಪ್ರಮಾಣವನ್ನು ಶೇಕಡ 3ರಿಂದ 7.5ಕ್ಕೆ ಹೆಚ್ಚಿಸುವಂತೆ ಆ ಸಮುದಾಯದ ಗುರುಗಳು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು, ಕಳೆದ ಕೆಲವು ದಿನಗಳಿಂದ ಹೋರಾಟ ಮಾಡುತ್ತಾ ಬಂದಿವೆ. ಸರ್ಕಾರ ಕೈಗೊಳ್ಳುತ್ತಿರುವ ನಿರ್ಧಾರದ ಸುಳಿವನ್ನು ಸಾರಿಗೆ ಸಚಿವ ಬಿ. ಶ್ರೀರಾಮುಲು ನೀಡಿದ್ದಾರೆ.

ಕೆಬಿಜೆಯವರ

ಛೂಮಂತ್ರ... ಛೂಮಂತ್ರ...



ಲಂಚಾವತಾರದಿಂದ ಈ ರಾಜ್ಯಕ್ಕೆ ಮುಕ್ತಿ ಎಂದು?

ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರನ್ನು ಕೇಳಿ

■ ಪುಟ–4

ನಿಮ್ಮ ಮನೆಯಲ್ಲೂ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿದ್ದೀರಾ...?



ಏನು ವಿಶೇಷ? ನಿಮ್ಮ ಮನೆಯ ಗಣೇಶನ ಆರಾಧನೆ ವೈಶಿಷ್ಟ್ಯತೆಯನ್ನು ಐದಾರು ವಾಕ್ಯದಲ್ಲಿ ಸಚಿತ್ರವಾಗಿ ನಮಗೆ ವಾಟ್ಸಾಪ್: 90080 54444 ಇಲ್ಲವೇ ಮೇಲ್– news@mysurumithra.comಗೆ ಕಳುಹಿಸಿ. ಅದನ್ನು ನಿಮ್ಮ 'ಮೈಸೂರು ಮಿತ್ರ'ನಲ್ಲಿ ಪ್ರಕಟಿಸುತ್ತೇವೆ. –ಸಂ.

ಯಾವುದೇ ಕಾರಣಕ್ಕೂ 'ಅನ್ನಭಾಗ್ಯ' ನಿಲ್ಲಿಸಲ್ಲ



ವಿಜಯಪುರ: ಯಾವುದೇ ಕಾರಣಕ್ಕೂ ಅನ್ನಭಾಗ್ಯ ಯೋಜನೆ ನಿಲ್ಲಿಸಲ್ಲ ಎಂದು ಸಚಿವ ಉಮೇಶ್ ಕತ್ತಿ ಸ್ಪಷ್ಟನೆ ನೀಡಿದ್ದಾರೆ. ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟ್ ಬಯಸಿದರೆ ಅನ್ನಭಾಗ್ಯ ಯೋಜನೆ ಬಂದ್ ಮಾಡಲಾಗುವುದು ಎಂಬ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ನಾನು ಆ ರೀತಿ ಎಲ್ಲಿಯೂ ಹೇಳಿಲ್ಲ. ಅನ್ನಭಾಗ್ಯ ಯೋಜನೆ ಯಾಕೆ ಬಂದ್ ಮಾಡ್ತಾರೆ?, ಅದು ನನ್ನ ಹೇಳಿಕೆಯಲ್ಲ. ಇದು ರಾಜಕೀಯ ಎಂದು ಗರಂ ಆದರು.



ನಕ್ಕರೆ ಅದೇ ಸ್ವರ್ಗ

ಸ್ನೇಹಿತ : "ನಿನ್ನ ಕತೆ ಕಾದಂಬರಿಗಳಿಗೆ ಒಳ್ಳೆಯ ಹೆಸರಿದೆಯಂತೆ. ಇತ್ತೀಚೆಗೆ ಯಾವುದಾದರೂ ಹೆಚ್ಚು ಮಾರಾಟವಾಗಿದೆಯೇ?"

ಆತ : "ಹೌದು. ನನ್ನ ವಾಚು, ಮನೆ ಕುರ್ಚಿ, ಮೇಜು, ಪಾತ್ರೆಗಳು ಮಾರಾಟವಾಗಿವೆ!"

ಮೈಸೂರು ಮಿತ್ರ

ಬುಧವಾರ, 31 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಂದು ಒಳ್ಳೆಯ ಗ್ರಂಥ. ಒಬ್ಬ ಪ್ರತಿಭಾವಂತನ ಸಾರ ಸಂಗ್ರಹ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ದುಡೀಲಿಲ್ಲ. ದುಃಖ ಪಡಲಿಲ್ಲ, ಇರೋದೆಲ್ಲಾ ನಂದೇ ಅಂದ

ನಿಮ್ಮ ಪತ್ರಗಳು

ಚಾಮರಾಜನಗರ ಜಿಲ್ಲಾ ಹೆರಿಗೆ ಆಸ್ಪತ್ರೆಯಲ್ಲಿ ಸಮಸ್ಯೆಗಳ ಸರಮಾಲೆ

ಮಾನ್ಯರೆ,

ಚಾಮರಾಜನಗರ ಜಿಲ್ಲಾ ಹೆರಿಗೆ ಆಸ್ಪತ್ರೆಯಲ್ಲಿ ಸಮಸ್ಯೆಗಳು ತಾಂಡವವಾಡುತ್ತಿದೆ. ಮುಖ್ಯವಾಗಿ ಹೆರಿಗೆಯಾದ ತಾಯಂದಿರಿಗೆ ಕುಡಿಯಲು ಬಿಸಿ ನೀರಿನ ವ್ಯವಸ್ಥೆಯಿಲ್ಲ. ಅದಕ್ಕಾಗಿ ಅವರ ಸಂಬಂಧಿಗಳು ಸಮೀಪದ ಟೀ ಅಂಗಡಿ, ಹೋಟೆಲ್‌ಗಳಲ್ಲಿ ಬಿಸಿ ನೀರು ಕಾಯಿಸಿಕೊಡುವಂತೆ ಬೇಡುವ ಪರಿಸ್ಥಿತಿಯಿದೆ. ಇನ್ನು ರಕ್ತದ ಕೊರತೆಯಿಂದ ಬಳಲುತ್ತಿರುವ, ನವಜಾತ ಶಿಶುಗಳಿಗೆ, ಗರ್ಭಿಣಿ ಸ್ತ್ರೀಯರಿಗೆ ರಕ್ತ ಒದಗಿಸಲು ಈ ಆಸ್ಪತ್ರೆಯಿಂದ ನಗರದ ಎಡಪುರ ಗ್ರಾಮದಲ್ಲಿರುವ ಜಿಲ್ಲೆಯ ಹೊಸ ಆಸ್ಪತ್ರೆಯ ರಕ್ತ ನಿಧಿ ಘಟಕಕ್ಕೆ ಅಲೆದಾಡಬೇಕಾಗಿದೆ. ಆದರೂ ಸಮಯಕ್ಕೆ ಸರಿಯಾಗಿ ರಕ್ತ ದೊರಕದೆ ರೋಗಿಗಳ ಪಾಡು ಹೇಳತೀರದಾಗಿದೆ.

ಆಸ್ಪತ್ರೆಗೆ ಬರುವಂತಹ ಗರ್ಭಿಣಿಯರು ಹಾಗೂ ಅವರ ಸಂಬಂಧಿಕರು ಕುಳಿತುಕೊಳ್ಳುವ ಸ್ಥಳವನ್ನು ಸ್ವಚ್ಛತಾ ಸಿಬ್ಬಂದಿ ಪ್ರತಿದಿನ ಗುಡಿಸಿ, ಒರೆಸಬೇಕು. ಆದರೆ ಒರೆಸುವಾಗ ಯಾವುದೇ ಕ್ರಿಮಿನಾಶಕ ದ್ರಾವಣವನ್ನು ಸಹ ಬಳಸುವುದಿಲ್ಲ. ಈ ಸ್ಥಳದಲ್ಲಿ ರಾತ್ರಿ ವೇಳೆ ಗರ್ಭಿಣಿಯರು, ಸಾರ್ವಜನಿಕರು ತಂಗುವುದು ಮತ್ತು ಮಲಗುವುದರಿಂದ ಹಲವು ಖಾಯಿಲೆಗಳಿಗೆ ದಾರಿಯಾಗಿದೆ.

ಈ ಹೆರಿಗೆ ಆಸ್ಪತ್ರೆಯ ಕೆಲ ಕೌಂಟರ್‌ಗಳಲ್ಲಿ ಸಿಬ್ಬಂದಿಗಳು ವಿನಾ ಕಾರಣ ರಸೀದಿ ಇಲ್ಲದೆ ಹಣ ಕೇಳುವುದು ಮತ್ತು ಕೆಲವು ಭದ್ರತಾ ಸಿಬ್ಬಂದಿ ಹೆರಿಗೆಯಾದ ಸ್ತ್ರೀಯರನ್ನು ವಾರ್ಡ್‌ಗಳಿಗೆ ಸಾಗಿಸಿದ್ದಕ್ಕಾಗಿ ಅವರ ಸಂಬಂಧಿಕರಿಗೆ ಹಣಕ್ಕಾಗಿ ಪೀಡಿಸುವುದುಂಟು.

ಮುಖ್ಯವಾಗಿ ಇದು ಹೆರಿಯಾದವರು, ಗರ್ಭಿಣಿ ಸ್ತ್ರೀಯರು ಇರುವ ಅತೀ ಸೂಕ್ಷ್ಮ ಪ್ರದೇಶ. ಇಲ್ಲಿ ರಾತ್ರಿ ವೇಳೆ ಎಲ್ಲರೂ ನಿದ್ರೆಗೆ ಜಾರಿರುತ್ತಾರೆ. ಅಪರಿಚಿತ ವ್ಯಕ್ತಿಗಳು ವಾರ್ಡಿನ ಒಳಗೆ ರಾಜಾರೋಷವಾಗಿ ಓಡಾಡಲು ಸ್ವಾತಂತ್ರ್ಯವಿದೆ. ಕಾರಣ ಭದ್ರತಾ ಸಿಬ್ಬಂದಿ ಕೊರತೆ ಇದೆ. ಹಾಗೊಂದು ವೇಳೆ ಮಹಿಳೆಯರ ಮೇಲೆ ದೌರ್ಜನ್ಯ, ಹಸುಗೂಸುಗಳ ಅಪಹರಣ ಹೀಗೆ ಏನಾದರೂ ಅನಾಹುತಗಳು ಸಂಭವಿಸಿದರೆ ಹೊಣೆ ಯಾರು?

ಆಸ್ಪತ್ರೆಗೆ ಒಳ ಬರುವ ದ್ವಾರದ ಬಳಿ ಹಗಲು, ರಾತ್ರಿಯಲ್ಲಿ ಮತ್ತು ಸುಮಾರು 22 ಹಾಸಿಗೆಗಳಿರುವ ಐಸಿಯು ವಾರ್ಡ್‌ನ ಬಳಿಯಂತೂ ರಾತ್ರಿ ವೇಳೆಯಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿಲ್ಲ. ಇಲ್ಲಿ ಕಬ್ಬಿಣದ ಬಾಗಿಲು ಹಾಗೂ ಐಸಿಯು ವಾರ್ಡ್‌ನ ಬಾಗಿಲು ರಾತ್ರಿಯಲ್ಲಿ ಯಾವಾಗಲೂ ತೆರೆದಿರುತ್ತದೆ. ಯಾರಾದರೂ ಸರಿ ರೋಗಿಗಳ ಸಂಬಂಧಿಕರ ಸೋಗಿನಲ್ಲಿ ಒಳಗಡೆ ತಿರುಗಾಡಬಹುದಾಗಿದೆ. ಇದರಿಂದ ನವಜಾತ ಶಿಶುಗಳಿಗೆ, ಗರ್ಭಿಣಿಯರಿಗೆ ಮತ್ತು ಹೆರಿಗೆಯಾದ ತಾಯಂದಿರಿಗೆ, ಅವರ ಸಂಬಂಧಿಗಳ ಬೆಲೆ ಬಾಳುವ ವಸ್ತುಗಳಿಗೆ ಜವಾಬ್ದಾರರು ಯಾರು ಎಂಬುದೇ ಪ್ರಶ್ನೆಯಾಗಿದೆ. ಇಂತಹ ಹತ್ತು ಹಲವು ಸಮಸ್ಯೆಗಳಿರುವ ಈ ಆಸ್ಪತ್ರೆಯತ್ತ ಸಂಬಂಧಪಟ್ಟವರು ಶೀಘ್ರ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಮನವಿ.

–ವಿ. ದೇವರಾಜು, ಅಳಗಂಚಿ ಗ್ರಾಮ, ನಂಜನಗೂಡು ತಾ.

ಕಾದಿದೆ ಗಂಡಾಂತರ!

ಮಾನ್ಯರೆ,

'ಭ್ರಷ್ಟ ರಾಜಕಾರಣಿಗಳಿಂದ ಮತ್ತು ಉನ್ನತ ಮಟ್ಟದ ಅಧಿಕಾರಿಗಳಿಂದ ದೇಶದ ಸಂಪತ್ತು ಕೆಲವೇ ಜನರಲ್ಲಿ ಶೇಖರಣೆಯಾಗಿ, ಬಡವರ, ನಿರ್ಗತಿಕರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಇದರಿಂದಾಗಿ ದೇಶದಲ್ಲಿ ಮುಂದೊಂದು ದಿನ ದ್ವೀಪರಾಷ್ಟ್ರ ಶ್ರೀಲಂಕಾದಲ್ಲಿ ಆಗುತ್ತಿರುವ ಬಡವರ ಮತ್ತು ತಿನ್ನಲು ಆಹಾರವಿಲ್ಲದೆ ಬಳಲುತ್ತಿರುವ ಜನರ ದಂಗೆಗಳು ನಮ್ಮ ರಾಷ್ಟ್ರ ಭಾರತದಲ್ಲಿಯೂ ಆಗಬಹುದು. ಇಂತಹ ದಂಗೆಗಳು ಆಗಬಾರದು ಎಂದು ಬಯಸುವುದಾದರೆ, ಭ್ರಷ್ಟ ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು ತಮ್ಮಲ್ಲಿರುವ ಭ್ರಷ್ಟತನ ಮತ್ತು ಲಂಚಾವತಾರವನ್ನು ಬಿಟ್ಟು ಒಳ್ಳೆಯತನವನ್ನು ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ, ಭ್ರಷ್ಟ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಖಂಡಿತ ಬಡ ಜನರೇ ಬುದ್ಧಿ ಕಲಿಸುತ್ತಾರೆ. ಈಗ್ಗೆ 75 ವರ್ಷಗಳಿಂದ ಆಳಿದ ಸರ್ಕಾರಗಳು ಭ್ರಷ್ಟ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಒಳ್ಳೆಯ ಬುದ್ಧಿಯನ್ನು ಕಲಿಸಲಾಗುತ್ತಿಲ್ಲ. ಆದ್ದರಿಂದ ಶ್ರೀಲಂಕಾದಲ್ಲಿ ಸರ್ಕಾರಗಳು ಮಾಡಲಾಗದ ಕೆಲಸಗಳನ್ನು ಜನರೇ ತಾವೇ ಕೈಗೆ ತೆಗೆದುಕೊಂಡು, ಭ್ರಷ್ಟರನ್ನು ಮತ್ತು ಲಂಚ ಕೇಳುವ ಅಧಿಕಾರಿಗಳನ್ನು ಬಗ್ಗು ಬಡಿದು ಬುದ್ಧಿ ಕಲಿಸುತ್ತಿದ್ದಾರೆ. ಎಚ್ಚರ, ಶ್ರೀಲಂಕಾದಂತೆ ಆಗಬಾರದು ಎಂದರೆ, ಯಾರು ಅಧಿಕವಾಗಿ ದೇಶದ ಸಂಪತ್ತನ್ನು ಲೂಟಿ ಮಾಡಿ ಲೆಕ್ಕವಿಲ್ಲದಷ್ಟು ಹಣವನ್ನು ಶೇಖರಿಸಿ ಇಟ್ಟಿದ್ದಾರೋ, ಅವರುಗಳು ತಾವಾಗಿಯೇ ಮುಂದೆ ಬಂದು ತಮ್ಮಲ್ಲಿರುವ ಹಣವನ್ನು ನಿರ್ಗತಿಕ ಮತ್ತು ಬಡವರ ಒಳಿತಿಗಾಗಿ ಖರ್ಚು ಮಾಡಬೇಕು. ಇದರಿಂದ ಭ್ರಷ್ಟ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಒಳ್ಳೆಯ ಹೆಸರು ಬರುತ್ತದೆ. ಹಾಗೆ ಮಾಡದಿದ್ದರೆ ಶ್ರೀಲಂಕಾದಲ್ಲಿ ಆಗುತ್ತಿರುವಂತೆ ಹಿಂಸೆ ಪಡಬೇಕಾಗುತ್ತದೆ. ಇಲ್ಲವೇ ಶ್ರೀಲಂಕಾದ ಪ್ರಧಾನಿ, ಅಧ್ಯಕ್ಷರು ಬಿಟ್ಟು ದೇಶ ಪಲಾಯನ ಮಾಡಿದಂತೆ ಆಗುತ್ತದೆ. ಶ್ರೀಲಂಕಾದಲ್ಲಿ ಆಗುತ್ತಿರುವ ಪರಿಸ್ಥಿತಿ ನಮ್ಮ ಭ್ರಷ್ಟ ರಾಜಕಾರಣಿಗೂ ಮತ್ತು ಅಧಿಕಾರಿಗಳಿಗೆ ಆಗಬೇಕಾ? ಅವರು ಎಚ್ಚೆತ್ತುಕೊಂಡು ತಮ್ಮ ಹೀನ ಬುದ್ಧಿಯನ್ನು ಬಿಟ್ಟು ಭಾರತದಲ್ಲಿ ಬಳಲುತ್ತಿರುವ ಬಡವರ, ನಿರ್ಗತಿಕರ ಸ್ಥಿತಿಯನ್ನು ಉತ್ತಮ ಪಡಿಸಲು ಕಾಯ, ವಾಚಾ, ಮನಸಾ ಪ್ರಯತ್ನಿಸಲಿ.

–ಸುಗುಣಾರಾಧ್ಯ, ರಾಮಕೃಷ್ಣನಗರ, ಮೈಸೂರು

ರಸ್ತೆ ಗುಂಡಿಗಳಿಂದ ಜೀವಕ್ಕೆ ಕುತ್ತು

ಮಾನ್ಯರೆ,

ರಾಜ್ಯದ ಬಹುತೇಕ ಊರುಗಳ ರಸ್ತೆಗಳಲ್ಲಿ ಗುಂಡಿಗಳಾಗಿವೆ. ಇವುಗಳಲ್ಲಿ ಮಳೆ ನೀರು ತುಂಬಿ ನೀರಿನ ಹೊಂಡಗಳಾಗಿ ಪರಿವರ್ತನೆಗೊಂಡಿವೆ!. ಇಂತಹ ರಸ್ತೆಗಳಲ್ಲಿ ಸಾರ್ವಜನಿಕರು ಪ್ರಯಾಣಿಸುವಾಗ ಹರಸಾಹಸ ಪಡಬೇಕಾಗಿದ್ದು, ಪ್ರಯಾಣಿಕರ ಜೀವಕ್ಕೆ ಕುತ್ತಾಗಿವೆ. ಗುಂಡಿಯಿಂದಾಗಿ ಕೆಲವು ದಿನಗಳ ಹಿಂದೆ ಹಾರೋಹಳ್ಳಿಯಲ್ಲಿ ವ್ಯಕ್ತಿ ಸಾವಿಗೀಡಾಗಿದ್ದರು. ಮೊನ್ನೆಯಷ್ಟೇ ಬೆಂಗಳೂರಿನಲ್ಲಿ ಗುಂಡಿ ತಪ್ಪಿಸಲು ಹೋಗಿ ಯುವತಿ ದ್ವಿಚಕ್ರ ವಾಹನದಿಂದ ಬಿದ್ದಿದ್ದು. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದು. ಇಂತಹ ಅನೇಕ ಘಟನೆಗಳು ಸಂಭವಿಸಿರುವ ಉದಾಹರಣೆಗಳಿವೆ. ಆ ಸಂದರ್ಭದಲ್ಲಿ ಸಂಬಂಧಪಟ್ಟವರು ತಾತ್ಕಾಲಿಕವಾಗಿ ರಸ್ತೆಗಳ ಗುಂಡಿಗಳಿಗೆ ತೇಪೆ ಹಾಕಿ ಕೈತೊಳೆದುಕೊಳ್ಳುತ್ತಾರೆ. ಸರ್ಕಾರಕ್ಕೆ ಉತ್ತಮ ಗುಣಮಟ್ಟದ ರಸ್ತೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲವೇಕೆ? ಇನ್ನಾದರೂ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಕಾಮಗಾರಿಯ ಗುಣಮಟ್ಟ ಪರೀಕ್ಷಿಸಿ ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಿ ದಿಟ್ಟ ಕ್ರಮ ಕೈಗೊಳ್ಳಬೇಕು.

– ಚನ್ನಕೇಶವ ಜಿ.ಕೆ., ತರೀಕೆರೆ



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಲಂಚಾವತಾರದಿಂದ ಈ ರಾಜ್ಯಕ್ಕೆ ಮುಕ್ತಿ ಎಂದು? ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರನ್ನು ಕೇಳಿ

ಒಬ್ಬ ವ್ಯಕ್ತಿಯ ನಡೆ, ನುಡಿ, ನೈತಿಕತೆ ಹಾಗೂ ಮಾನವೀಯತೆ ಸಮಾಜ ಒಪ್ಪುವ ರೀತಿಯಲ್ಲಿ ಇದ್ದರೆ ಅವನೇ ಸಮಾಜದ, ರಾಷ್ಟ್ರದ ಒಂದು ದೊಡ್ಡ ಆಸ್ತಿ. ಅಂತಹವರಿಂದಲೇ ಒಂದು ಸುಖ ಸಂಸಾರವನ್ನು, ಉತ್ತಮ ಸಮಾಜವನ್ನು ಹಾಗೂ ಪ್ರಬುದ್ಧ, ಸಮೃದ್ಧ ದೇಶವನ್ನು ಕಟ್ಟಲು ಸಾಧ್ಯ. ನಮಗೆ ಸ್ವಾತಂತ್ರ್ಯ ಸಿಕ್ಕಿ 75 ವರ್ಷಗಳಾದರೂ ನಾವೇಕೆ ಇನ್ನೂ ಮುಂದುವರೆದ ದೇಶವಾಗದೆ, ಈ ರೀತಿ ಪರಿತಪಿಸುತ್ತಿದ್ದೇವೆ ಎಂದರೆ ಅದಕ್ಕೆ ಕಾರಣ ನಮ್ಮ ಶೇ. 75 ರಷ್ಟು ಜನರಲ್ಲಿ ಮೌಲ್ಯಾಧಾರಿತ ಒಳ್ಳೆಯ ನಡೆಯಾಗಲಿ, ನುಡಿಯಾಗಲಿ, ನೈತಿಕತೆಯಾಗಲಿ ಇಲ್ಲದಿರುವುದೇ ಆಗಿದೆ. ಇದರಿಂದಾಗಿ ಸಮಾಜ ಸಮತೋಲನವನ್ನು ಕಳೆದುಕೊಂಡಿದೆ. ಕಡುಬಡವರು, ಬಡವರು, ಮಧ್ಯಮ ವರ್ಗ, ಮೇಲ್ವರ್ಗ ಹಾಗೂ ಅತೀ ಶ್ರೀಮಂತರು ಮೊದಲಾಗಿ ಸಮಾಜ ಒಡೆದು ಹೋಗಿದೆ. ಹೀಗಾಗಲು ಕಾರಣ ನಮ್ಮ ದೇಶದಲ್ಲಿ ನೆಲೆಯೂರಿದ ಚತುರ್ವರ್ಣ– ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ – ಆಗಲಿ ಅಥವಾ ಜಾತಿ ಪದ್ಧತಿ ಆಗಲಿ ಅಲ್ಲ. **ಏಕೆಂದರೆ ನೈತಿಕತೆಯ ಕೊರತೆಯನ್ನು ಈ ಎಲ್ಲಾ ವರ್ಗದ ಹಾಗೂ ಎಲ್ಲಾ ಜಾತಿಯ ಜನರಲ್ಲೂ ನಾವು ಕಾಣುತ್ತೇವೆ.**

ಸಾಮಾನ್ಯವಾಗಿ ನಾವು ಒಬ್ಬ ವ್ಯಕ್ತಿಯನ್ನು ಕೀಳರಿಮೆಯಿಂದ ಕಾಣುವುದು ಯಾವಾಗ ಅಂದರೆ ಅವನೊಬ್ಬ ಕುಡುಕನಾದರೆ, ವ್ಯಭಿಚಾರಿಯಾದರೆ. ಇದು ಇಂದಿಗೂ ಸತ್ಯ. ಒಬ್ಬ ಭ್ರಷ್ಟ, ಲಂಚಕೋರ ಅಧಿಕಾರಿಯನ್ನು ಕೂಡ ಬಹಳ ಕೀಳರಿಮೆಯಿಂದ ಅಂದಿನ ಸಮಾಜ ನೋಡುತ್ತಿತ್ತು. ಅಂತಹವರನ್ನು ಬಹಿಷ್ಕರಿಸಲಾಗುತ್ತಿತ್ತು. ನಮ್ಮನ್ನಗಲಿದ ನಾಡಿನ ಜನಪ್ರಿಯ ಹಿರಿಯ ಪ್ರತಿಭಾವಂತ ನಾಟಕಕಾರ **ಮಾಸ್ಟರ್ ಹಿರಣ್ಣಯ್ಯ**ನವರು 'ಲಂಚಾವತಾರ' ಎಂಬ ನಾಟಕ ರಚಿಸಿ, ಅದರಲ್ಲಿ ಅವರೇ ಮುಖ್ಯ ಪಾತ್ರಧಾರಿಯಾಗಿದ್ದು, ಅದು ಕರ್ನಾಟಕದಾದ್ಯಂತ ಸಾವಿರಾರು ಪ್ರದರ್ಶನಗಳನ್ನು ಕಂಡಿತು. ಅದರಲ್ಲಿ ನಮ್ಮ ಸರಕಾರದ ಅಧಿಕಾರಿಗಳು, ರಾಜಕಾರಣಿಗಳ ಭ್ರಷ್ಟತೆಯನ್ನು ಜಗಜ್ಜಾಹೀರುಗೊಳಿಸುತ್ತಿದ್ದರು. ಆದರೆ ಅದು ಮನೋರಂಜನೆಯನ್ನು ಕೊಡುತ್ತಿತ್ತೇ ವಿನಃ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಹಾಯಕವಾಗಲಿಲ್ಲ ಹೌದು, ನಮ್ಮಲ್ಲಿ ಲಂಚ ತೆಗೆದುಕೊಳ್ಳುವ ಅನೈತಿಕ ನಡೆಗೆ ತಡೆ ಹಾಕಲು ಮತ್ತು ಈ ಅಪರಾಧಕ್ಕೆ ಶಿಕ್ಷೆ ನೀಡುವ ಕಾನೂನು (ಐಪಿಸಿ ಮತ್ತು ಸಿಆರ್‌ಪಿಸಿ) ಹಾಗೂ ದಂಡ ವಿಧಿಸಲು ನ್ಯಾಯಾಲಯಗಳಿವೆ. ಆದರೆ...


ಮಾನ್ಯ ಕೆಂಗಲ್ ಹನುಮಂತಯ್ಯನವರು ಒಬ್ಬ ಆದರ್ಶ ವ್ಯಕ್ತಿ ಮಾತ್ರವಲ್ಲದೆ ನಮ್ಮ ರಾಜ್ಯದ ಒಬ್ಬ ಮಾದರಿ ಮುಖ್ಯಮಂತ್ರಿಯಾಗಿದ್ದವರು. ಭ್ರಷ್ಟ ರಾಜಕಾರಣಿಗಳಿಗೆ ಅವರನ್ನು ಸಹಿಸಲಾಗದೆ ಅಧಿಕಾರದಿಂದ ಇಳಿಸಿಬಿಟ್ಟರು. ಹನುಮಂತಯ್ಯನವರು ನಮ್ಮ ರಾಜ್ಯದ ಆಡಳಿತ ಶಕ್ತಿಕೇಂದ್ರ ಭವ್ಯ ವಿಧಾನ ಸೌಧವನ್ನು ಕಟ್ಟಿಸಿದವರು. ನಮ್ಮೆಲ್ಲರ ಜೀವನದಲ್ಲಿರಬೇಕಾದ ಸತ್ಯ, ನಿಷ್ಠೆ, ನೈತಿಕತೆ, ಎಲ್ಲರನ್ನೂ ಒಂದೇ ರೀತಿ ನೋಡುವ ಮನೋಭಾವ, ಧರ್ಮದ ನಡೆ, ಕಾಯಕದ ಅರಿವು ಮತ್ತು ಪ್ರಾಮಾಣಿಕತೆಯ ಮಹತ್ವವನ್ನು ಅರಿತ ಅವರು ಕಲ್ಲಿನಿಂದ ಕಟ್ಟಿದ ಆ ಭದ್ರವಾದ ಕಟ್ಟಡದ ಎರಡು ಹೆಬ್ಬಾಗಿಲಿನ ಮೇಲುಗಡೆ ಅಲ್ಲಿ ಕೆಲಸ ಮಾಡುವ ಸರಕಾರಿ ನೌಕರರು ಹಾಗೂ ರಾಜಕಾರಣಿಗಳಿಗೆ ತಮ್ಮ ಜವಾಬ್ದಾರಿಯನ್ನು ನೆನಪಿಸಲು ಎರಡು ಮಹಾನ್ ನೀತಿ ಬೋಧನೆಯ ಬರವಣಿಗೆಯನ್ನು ಕೆತ್ತಿಸಿದ್ದಾರೆ. ಅದರಲ್ಲಿ ಒಂದು **"ಧರ್ಮೋ ರಕ್ಷತಿ ರಕ್ಷಿತಃ"** (ಧರ್ಮವನ್ನು ರಕ್ಷಿಸುವವರನ್ನು ಧರ್ಮ ರಕ್ಷಿಸುತ್ತದೆ), ಮತ್ತೊಂದು **"ಸರಕಾರದ ಕೆಲಸ ದೇವರ ಕೆಲಸ"**.

ವಿಪರ್ಯಾಸವೆಂದರೆ ಅದೇ ವಿಧಾನಸೌಧ ಇಂದು ಭ್ರಷ್ಟಾಚಾರದ ಕೂಪವಾಗಿದೆ. ಲಂಚ ತೆಗೆದುಕೊಳ್ಳುವ ಪ್ರಮಾಣ ಶೇ. 8 ರಿಂದ 10, 30 ರಿಂದ ಈಗ ಕಾಂಗ್ರೆಸ್ ನಾಯಕರು ಹೇಳುವ ಪ್ರಕಾರ, ಶೇ.40–50 ರಷ್ಟು ಆಗಿದೆ. ಇದೇ ಸಮಯಕ್ಕೆ ನಮ್ಮ ನೈತಿಕತೆಯೂ ಕೂಡ ಪಾತಾಳಕ್ಕೆ ಕುಸಿಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅದಕ್ಕೆ ಪುರಾವೆ ಏನೆಂದರೆ ನಾವು ನೋಡುತ್ತಿರುವ ಅಸಹ್ಯಕರವಾದ ದೃಶ್ಯ. ಜೈಲಿನಿಂದ ಹೊರ ಬಂದ ಭ್ರಷ್ಟಾಚಾರಿಗಳನ್ನು ಭಾರೀ ಭಾರಿ ಹೂವಿನ ಹಾರ ಹಾಕಿ, ಅವರಿಗೂ ಸಿಹಿ ತಿನಿಸಿ, ಇತರರಿಗೂ ಹಂಚಿ ಸಂಭ್ರಮಿಸುವುದು, ಅಭಿನಂದಿಸುವುದು!

ಪಂಡಿತ್ ಜವಾಹರಲಾಲ್ ನೆಹರು, ನಮ್ಮ ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ, ಹೇಳಿದ ಮಾತು ನನಗೆ ಚೆನ್ನಾಗಿ ನೆನಪಿದೆ. **"ಲಂಚಕೋರರನ್ನು ಪಕ್ಕದ ಕಂಬಕ್ಕೆ ನೇಣು ಹಾಕಿ"** (Hang the corrupt by the nearest lamp post). ಅವರ ಕಾಲದಲ್ಲಿ ಪಂಜಾಬಿನಲ್ಲಿ ದೊಡ್ಡ ಭ್ರಷ್ಟಾಚಾರ ನಡೆದಿತ್ತು. ಅಲ್ಲದೆ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯಲ್ಲಿ ಜೀಪು ಖರೀದಿ ಹಗರಣ ಒಂದು ನಡೆದಿತ್ತು. ಆದರೆ ನಾನು ಯಾರನ್ನೂ ಕಂಬದಲ್ಲಿ ನೇಣು ಹಾಕಿದ್ದನ್ನು ನೋಡಲಿಲ್ಲ, ಎಲ್ಲಿಯೂ ಓದಲಿಲ್ಲ, ಕೇಳಲೂ ಇಲ್ಲ.

ನಂತರ ನೆಹರೂ ಅವರ ಪ್ರೀತಿಯ ಮಗಳು ಇಂದಿರಾ ಗಾಂಧಿಯವರು, ಪ್ರಧಾನಮಂತ್ರಿಯಾಗಿದ್ದಾಗ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಹೇಳಿದ ಒಂದು ಮಾತು ನೆನಪಿದೆ. ಅದೇನೆಂದರೆ, "ಭ್ರಷ್ಟಾಚಾರ ಎಂಬುದು ಒಂದು ಸಾರ್ವತ್ರಿಕ ವಿದ್ಯಮಾನ (Corruption is an universal phenomenon). ಇದು ಒಂದು ರೀತಿಯಲ್ಲಿ ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳುವ ಹೇಳಿಕೆಯಂತಿದೆ.

ಒಳ್ಳೆಯ ಉದ್ದೇಶ, ಆಶಯದಿಂದ ತೆಗೆದುಕೊಂಡ ನಿರ್ಣಯಗಳು ಯಾವಾಗಲೂ ಒಳ್ಳೆಯ ಫಲಿತಾಂಶವನ್ನು ಕೊಡಲಾರದು ಎಂಬ ಮಾತು ಇಂಗ್ಲಿಷ್ ಭಾಷೆಯಲ್ಲಿದೆ (Good intentions do not always lead to good results). ಅದೇ ರೀತಿ, ನಮ್ಮ ಕೇಂದ್ರ ಸರ್ಕಾರದಲ್ಲಿ **'ಲೋಕಪಾಲ್'** ಹಾಗೂ ರಾಜ್ಯದಲ್ಲಿ **'ಲೋಕಾಯುಕ್ತ'** ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರೂ ಇವೆರಡೂ ಏನೂ ಪ್ರಯೋಜನಕಾರಿಯಾಗಲಿಲ್ಲ. ನಮ್ಮ ರಾಜ್ಯದಲ್ಲಂತೂ ಲೋಕಾಯುಕ್ತದ ಒಬ್ಬ ಮುಖ್ಯಸ್ಥನೇ ಅವನ ಮಗನ ಮೂಲಕ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿ ಹುದ್ದೆಗೆ ರಾಜೀನಾಮೆ ಕೊಡಬೇಕಾಯಿತು. ಕೊನೆಗೆ ಅವರೂ ವಿಚಾರಣೆ ಎದುರಿಸಬೇಕಾಗಿ ಬಂತು. ಇಲ್ಲಿಗೆ ಬಂದವರಲ್ಲಿ **ನ್ಯಾಯಮೂರ್ತಿ ವೆಂಕಟಾಚಲಯ್ಯ**ನವರು ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ. ಇನ್ನೊಬ್ಬರು **ನ್ಯಾಯಮೂರ್ತಿ ಸಂತೋಷ್ ಹೆಗ್ಡೆ**ಯವರು. ಆದರೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಲೋಕಾಯುಕ್ತಕ್ಕೆ ಬಾಗಿಲು ಹಾಕಿ ಅದಕ್ಕೆ ಪರ್ಯಾಯವಾಗಿ ಭ್ರಷ್ಟಾಚಾರ ವಿರೋಧಿ ದಳ (ACB- Anti



ನ್ಯಾಯಮೂರ್ತಿ ಸಂತೋಷ್ ಹೆಗ್ಡೆ

Corruption Bureau) ಎಂಬ ಭ್ರಷ್ಟಾಚಾರ ನಿರ್ಮೂಲನಾ ಸಂಸ್ಥೆಯನ್ನು ತಂದು ಅದಕ್ಕೆ ಸ್ವಾಯತ್ತತೆ ಕೊಡದೆ, ಅದು ಸರಕಾರದ ಕೈಕೆಳಗೆ ಕೆಲಸ ಮಾಡಬೇಕಾಯಿತು. ಎಂತಹ ವಿಪರ್ಯಾಸ, ಹೇಳಿ, ಕೇಳಿ ಭ್ರಷ್ಟಾಚಾರ ಇರೋದೇ ಸರಕಾರದಲ್ಲಿ!

ಅದೇನೆ ಇರಲಿ, ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರದು ಒಂದು ವಿಶೇಷವಾದ ಮೇರು ವ್ಯಕ್ತಿತ್ವ. ನ್ಯಾಯಪರತೆ, ಪ್ರಾಮಾಣಿಕತೆಗೆ ಇನ್ನೊಂದು ಹೆಸರೇನೆಂದು ಯಾರಾದರೂ ನನ್ನನ್ನು ಕೇಳಿದರೆ ನಾನು ಹೇಳುವ ಹೆಸರು ಇವತ್ತಿಗೆ ಎರಡು : **ಒಂದು ಪ್ರಧಾನಿ ನರೇಂದ್ರ ಮೋದಿ, ಇನ್ನೊಂದು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ.** ಆದ್ದರಿಂದಲೇ ಸಂತೋಷ್ ಹೆಗ್ಡೆಯವರು ಇವತ್ತಿಗೂ ಎಲ್ಲಾ ಕಡೆ ಹೋಗಿ ತಮ್ಮ ಆಲೋಚನೆಗಳನ್ನು, ತತ್ವ–ಚಿಂತನೆಗಳನ್ನು ಜನರೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. ಅವರು ಒಬ್ಬ 'ತತ್ವಜ್ಞಾನಿಯ ಶಿಲೆ"ಯಂತೆ. (He is like a philosopher's stone). ಅಂದರೆ ಒಂದು ಸಾಮಾನ್ಯ ತುಕ್ಕು ಹಿಡಿದ (ಇಲ್ಲಿ ಭ್ರಷ್ಟ ಎನ್ನಬಹುದು) ಲೋಹವನ್ನು ಚಿನ್ನವಾಗಿ ಮಾರ್ಪಡಿಸುವ ಶಕ್ತಿಯುಳ್ಳ ಶಿಲೆ.

> "ಪಂಡಿತ್ ಜವಾಹರಲಾಲ್ ನೆಹರು, ನಮ್ಮ ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ, ಹೇಳಿದ ಮಾತು ನನಗೆ ಚೆನ್ನಾಗಿ ನೆನಪಿದೆ. "ಲಂಚಕೋರರನ್ನು ಪಕ್ಕದ ಕಂಬಕ್ಕೆ ನೇಣು ಹಾಕಿ" **(Hang the corrupt by the nearest lamp post).** ಅವರ ಕಾಲದಲ್ಲಿ ಪಂಜಾಬಿನಲ್ಲಿ ದೊಡ್ಡ ಭ್ರಷ್ಟಾಚಾರ ನಡೆದಿತ್ತು. ಅಲ್ಲದೆ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯಲ್ಲಿ ಜೀಪು ಖರೀದಿ ಹಗರಣ ಒಂದು ನಡೆದಿತ್ತು. ಆದರೆ ನಾನು ಯಾರನ್ನೂ ಕಂಬದಲ್ಲಿ ನೇಣು ಹಾಕಿದ್ದನ್ನು ನೋಡಲಿಲ್ಲ, ಎಲ್ಲಿಯೂ ಓದಲಿಲ್ಲ, ಕೇಳಲೂ ಇಲ್ಲ."

ಇತ್ತೀಚಿನ ದಿನಗಳಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುವ ಸಂತೋಷ್ ಹೆಗ್ಡೆಯವರ ಒಂದು ಭಾಷಣವನ್ನು ಇಲ್ಲಿ ನಾನು ಅವಶ್ಯವಾಗಿ ಪ್ರಕಟಿಸಲೇಬೇಕು. ಇದನ್ನು ಓದಿದ ನಮ್ಮ ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು ಹಾಗೂ ಸಮಾಜದ ಸಾಮಾನ್ಯ ಪ್ರಜೆಯೂ ಇದರಿಂದ ಪ್ರಭಾವಿತರಾಗಿ ಅವರಲ್ಲಿ ಭ್ರಷ್ಟಾಚಾರಿಯಾದವರ ಮನಪರಿವರ್ತನೆಯಾದರೆ ಸಂತೋಷ್ ಹೆಗ್ಡೆಯವರ ಶ್ರಮ ಮತ್ತು ನನ್ನ ಈ ಬರವಣಿಗೆ ಸಾರ್ಥಕ ಎಂದು ನಾನು ಭಾವಿಸುವೆ:

ನಾನು ಹಲವಾರು ಹುದ್ದೆಯಲ್ಲಿ ಕೆಲಸ ಮಾಡಿದಂತಹ ವ್ಯಕ್ತಿ. ಆದರೆ ಕರ್ನಾಟಕ ಲೋಕಾಯುಕ್ತಕ್ಕೆ ಬರುವವರೆಗೂ ನನಗೆ ಅನಿಸಿದ್ದು ನಾನೊಬ್ಬ ಕೂಪ ಮಂಡೂಕನಾಗಿದ್ದೆ. ಸಮಾಜದಲ್ಲಿ ಆಗುವಂತಹ ಅನ್ಯಾಯದ ಬಗ್ಗೆ ನನಗೆ ಜಾಸ್ತಿ ಅರಿವಿರಲಿಲ್ಲ. ಆ ಹುದ್ದೆಗೆ ಬಂದ ನಂತರ ಬಹಳಷ್ಟು ಅನ್ಯಾಯವನ್ನು ನಾನು ಕಂಡೆ. ಅದರಿಂದ ನನ್ನಲ್ಲೇ ಬಹಳಷ್ಟು ಬದಲಾವಣೆಗಳು ಆದವು. ಸಮಾಜದಲ್ಲಿ ಯಾಕೆ ಈ ರೀತಿಯೆಲ್ಲಾ ಆಗುತ್ತಿದೆ ಎನ್ನುವ ವಿಚಾರವಾಗಿ ಯೋಚನೆ ಮಾಡಿದಾಗ ನನಗೆ ಅನಿಸಿದ್ದು ಇದು ವ್ಯಕ್ತಿಗಳ ತಪ್ಪಲ್ಲ. ಇದು ಸಮಾಜದ ತಪ್ಪು.

ನಾನು ಚಿಕ್ಕವನಿದ್ದಾಗ ಎಂತಹ ಸಮಾಜದಲ್ಲಿ ಇದ್ದೆ? ಜೈಲಿಗೆ ಹೋದವರನ್ನು, ಅತ್ಯಾಚಾರಿಗಳನ್ನು ಆಗ ಬಹಿಷ್ಕರಿಸುತ್ತಿದ್ದೆವು. ಆದರೆ ಇವತ್ತು ಹಾಗಿಲ್ಲ. ಜೈಲಿಗೆ ಹೋಗಿ ಜಾಮೀನು ಪಡೆದು ಹೊರ ಬಂದಂತಹ ವ್ಯಕ್ತಿಗಳಿಗೆ ಸಲಾಮ್ ಮಾಡುವಂತಹ ಸಮಾಜದಲ್ಲಿ ನಾವಿದ್ದೇವೆ. ಈ ಸಮಾಜದಿಂದ ಮುಂದೆ ಶಾಂತಿ ಸೌಹಾರ್ದತೆ ಇರುವುದು ಬಹಳ ಕಷ್ಟ ಎನ್ನುವುದನ್ನು ತಿಳಿದುಕೊಂಡಿದ್ದೇನೆ. ಈ ಮೌಲ್ಯವಿಲ್ಲದ ಸಮಾಜವನ್ನು ಬದಲಾಯಿಸಬೇಕು. ಈ ಬದಲಾವಣೆ ನನ್ನ ವಯಸ್ಸಿನವರಿಂದ ಸಾಧ್ಯವಿಲ್ಲ. ಯಾಕೆಂದರೆ ಈ ಸಮಾಜವನ್ನು ಈ ಮಟ್ಟಕ್ಕೆ ತಂದವರು ನನ್ನ ವಯಸ್ಸಿನವರು.

2010ರಲ್ಲಿ 80–85 ವರ್ಷಕ್ಕೂ ಹೆಚ್ಚಿನ ವಯಸ್ಸಿನ ಮಹಿಳೆಯೊಬ್ಬರು ಕರ್ನಾಟಕ ಲೋಕಾಯುಕ್ತಕ್ಕೆ ಬರುತ್ತಾರೆ. ಏನಮ್ಮಾ ನಿನ್ನ ಸಮಸ್ಯೆ? ಎಂದು ಕೇಳಿದರೆ 'ಸ್ವಾಮಿ ನನಗೆ ಆದಾಯವಿಲ್ಲ. ಒಬ್ಬ ಮಗ ಮುಂಬೈನಲ್ಲಿ ಕೆಲಸ ಮಾಡುತ್ತಿದ್ದಾನೆ. ತಿಂಗಳಿಗೆ 250 ರೂ. ಮನಿ ಆರ್ಡರ್ ಕಳಿಸುತ್ತಾನೆ. ಆ ಪೋಸ್ಟ್‌ಮ್ಯಾನ್ 10 ಪರ್ಸೆಂಟ್ ಕೇಳುತ್ತಾನೆ. ಕೊಡದೆ ಹೋದರೆ ಮೂರು ಸಲ ಅಡ್ರೆಸ್‌ಗೆ ಹೋದರೂ ಕೂಡ ಯಾರು ಸಿಕ್ಕಲ್ಲ ಎಂದು ಹಣ ವಾಪಸ್ಸು ಕಳಿಸುತ್ತಾನೆ' ಎಂದರು. ಇದು ದುರಾಸೆಯ ಒಂದು ಭಾಗ. ಆ ಪೋಸ್ಟ್ ಮ್ಯಾನ್ ಕರ್ನಾಟಕ ಲೋಕಾಯುಕ್ತ ಅಧೀನಕ್ಕೆ ಬರುತ್ತಿರಲಿಲ್ಲ. ಯಾಕೆಂದರೆ ಆತನೊಬ್ಬ ಕೇಂದ್ರ ಸರ್ಕಾರದ ನೌಕರ. ಹೀಗಾಗಿ ನಾನು ಅದಕ್ಕೆ ಸಂಬಂಧಪಟ್ಟಂತಹ ಪೊಲೀಸ್ ಅಧಿಕಾರಿಯೊಬ್ಬರಿಗೆ ಫೋನ್ ಮಾಡಿದೆ. ಆ ಅಧಿಕಾರಿ ಲೆಕ್ಕ ಹಾಕಿರಬೇಕು, 250 ರೂಪಾಯಿಗೆ 10 ಪರ್ಸೆಂಟ್ ಅಂದರೆ 25 ರೂಪಾಯಿ ಎಂದು. ಆ ಅಧಿಕಾರಿ ನನಗೆ ಹೇಳುತ್ತಾರೆ, 'ಸರ್ ಇದು 25 ರೂಪಾಯಿ ಕೇಸು. ನಮ್ಮ ಅಧಿಕಾರಿಗಳು ದೊಡ್ಡ ದೊಡ್ಡ ಹಗರಣಗಳ ಬಗ್ಗೆ ವಿಚಾರಣೆ ಮಾಡುತ್ತಾರೆ. ನಮ್ಮಲ್ಲಿ ಅಧಿಕಾರಿಗಳ ಅಭಾವ ಇದೆ. ನೀವು ನಿಮ್ಮ ಪೊಲೀಸರ ಮುಖಾಂತರ ಮಾಡಿಸಿ ಬಿಡಿ ಸರ್' ಎಂದು.

ಇದರಿಂದ ಸಮಾಜಕ್ಕೆ ಯಾವ ಸಂದೇಶ ಕಳಿಸುತ್ತೀರಿ ನೀವು? ಒಂದು ಕಡೆ ಒಂದು ವಠಾರದಲ್ಲಿ ಪೋಸ್ಟ್‌ಮ್ಯಾನ್‌ಗೆ 10–12 ವರ್ಷ ಟ್ರಾನ್ಸ್‌ಫರ್ ಆಗಲ್ಲ. ಅದೇ ವಠಾರದಲ್ಲಿ ಇದ್ದಂತಹ ಒಬ್ಬ ಮಹಿಳೆಯ ಪರಿಚಯ ಅವನಿಗಿತ್ತು. ಆಕೆಯ ಹಿನ್ನೆಲೆ ಗೊತ್ತಿತ್ತು. ಮತ್ತು 250 ರೂಪಾಯಿಯಲ್ಲಿ ಆಕೆಯಿಂದ 25 ರೂಪಾಯಿ ಕಸಿದುಕೊಳ್ಳುವಂತಹ ದುರಾಸೆ. ಇಲ್ಲೊಬ್ಬ ಅಖಿಲ ಭಾರತ ಅಧಿಕಾರಿ ಅವರಿಗೆ 25 ರೂಪಾಯಿ ಕೇಸ್‌ಗಳೆಲ್ಲ ಚಿಕ್ಕದು ಅನ್ನುವ ಅಹಂಕಾರ. ಇದು ಮಾನವೀಯತೆ ಇಲ್ಲದಂತಹ ಒಂದು ವಿಚಾರ.

ಬಂಧುಗಳೇ, ನನ್ನ ಐದು ವರ್ಷದ ಅನುಭವದಲ್ಲಿ ಈ ಸಮಾಜವನ್ನು ಬದಲಾಯಿಸಬೇಕಾದರೆ, ಸಾರ್ವಜನಿಕ ಹಿತಾಸಕ್ತಿಯನ್ನು ಇಟ್ಟುಕೊಳ್ಳುವಂತಹ ಜನಪರ ಸಮಾಜ ಕಟ್ಟಬೇಕಾದರೆ ನಿಮ್ಮಲ್ಲಿ ಹಾಗೂ ನಿಮ್ಮ ಮಕ್ಕಳಲ್ಲಿ ಎರಡು ಮೌಲ್ಯಗಳನ್ನು ಅಳವಡಿಸಿಕೊಳ್ಳಿ. **ಒಂದು ತೃಪ್ತಿ ಎನ್ನುವ ಗುಣ. ಮತ್ತೊಂದು ಮಾನವೀಯತೆ.**

ನಾವೆಲ್ಲ ಹುಟ್ಟುವಾಗ ಮಾನವರಾಗಿ ಹುಟ್ಟುತ್ತೇವೆ. ಮಾನವರು ಪ್ರಾಣಿಗಳಿಗಿಂತ ದೊಡ್ಡ ಗುಂಪಿಗೆ ಸೇರಿರುವ ವಿಚಾರ ನಮ್ಮಲ್ಲಿರಬಹುದು. ಆದರೆ, ಅದು ತಪ್ಪು ವಿಚಾರ. ಮಾನವರು ಎಂಬ ಗುಂಪೇ ಇಲ್ಲ. ಸೈನ್ಸ್‌ನಲ್ಲಿ ನಾವು ಹುಟ್ಟುವುದು ಹೋಮೋಸೇಫಿಯನ್ಸ್ ಎಂಬ ಗುಂಪಿನಿಂದ. ಅದಕ್ಕೂ ಮಾನವೀಯತೆಗೂ ಯಾವುದೇ ಸಂಬಂಧವಿಲ್ಲ. ಮಾನವೀಯತೆ ಎಂಬುವುದು ಸಮಾಜದಲ್ಲಿ ಶಾಂತಿ ಸೌಹಾರ್ದತೆ ಇರಬೇಕು ಎನ್ನುವ ಹಿನ್ನೆಲೆಯಲ್ಲಿ ನಮ್ಮ ಹಿರಿಯರು ಕಟ್ಟಿದಂತಹದ್ದು. **ನಾವು ಹುಟ್ಟುವಾಗ ಮಾನವರಾಗಿ ಹುಟ್ಟದೇ ಇದ್ದರೂ, ಜೀವನ ಪಥದಲ್ಲಿ ಮಾನವೀಯತೆಯನ್ನು ಅಳವಡಿಸಿಕೊಂಡು ಸಾಯುವಾಗ ಮಾನವರಾಗಿ ಸತ್ತರೆ ಅದಕ್ಕೆ ಮೇಲ್ಪಟ್ಟಂತಹ ಗೌರವ ಯಾವುದೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.**

ಇನ್ನೊಂದು ಮೌಲ್ಯ. ಈಗಾಗಲೇ ನಾನು ಹೇಳಿದಂತೆ ತೃಪ್ತಿ (ಕಂಟೆಂಟ್‌ಮೆಂಟ್) ಅನ್ನುತ್ತೇವೆ. **ತೃಪ್ತಿ ಎಂಬುದು ಇಲ್ಲದಿದ್ದರೆ ದುರಾಸೆ ಎಂಬ ರೋಗ ಬರುತ್ತದೆ.** ಅದಕ್ಕೆ ಮಿತಿಯೇ ಇಲ್ಲ. ಎಷ್ಟು ಮಾಡಿದರೂ ಸಾಲುವುದಿಲ್ಲ. ನೀವು ದುರಾಸೆಯಿಂದ ಎಷ್ಟು ಸಂಪಾದನೆ ಮಾಡಿದರೂ, ಎಷ್ಟು ಸಂಪತ್ತು ಕೂಡಿಟ್ಟರೂ ನಿಮಗೆ ಸಂತಸ ಇರುವುದಿಲ್ಲ ಎಂದು ಖಂಡಿತವಾಗಿ ಹೇಳಬಯಸುತ್ತೇನೆ. ಇಂದಲ್ಲ ನಾಳೆ ದಾಳಿ ಮಾಡಲು ದರೋಡೆಕೋರರು ಬರಬಹುದು ಎಂಬ ಭಯದಲ್ಲಿ ನಿಮಗೆ ಯಾವ ರೀತಿಯಲ್ಲೂ ಸಂತಸ ಇರುವುದಿಲ್ಲ ಅಂದರೆ ನೀವಾಗಲಿ, ನಿಮ್ಮ ಮಕ್ಕಳಾಗಲೀ, ಮೊಮ್ಮಕ್ಕಳಾಗಲಿ ಒಂದು ಹಂತಕ್ಕೆ ಒಂದಷ್ಟು ಸಂಪತ್ತು ಪಡೆದರೆ ಇನ್ನೇನೂ ಬೇಡ. ಸನ್ಯಾಸಿಯಾಗುತ್ತೇನೆ ಎಂಬ ವಾದ ನನ್ನದಲ್ಲ.

ಜಾಸ್ತಿ ಓದಬೇಕು. ದೊಡ್ಡ ಹುದ್ದೆಗೆ ಹೋಗಬೇಕು. ಶ್ರೀಮಂತನೂ ಕೂಡ ಆಗಬೇಕು ಎನ್ನುವುದು ತಪ್ಪಲ್ಲ. ಕೋಟ್ಯಾಂತರ ರೂಪಾಯಿ ಮಾಡಿ. ಆದರೆ, ಅದು ಕಾನೂನು ಚೌಕಟ್ಟಿನಲ್ಲಿ. ನಿಮ್ಮ ಸಂಪತ್ತಿನ ದಾರಿಯಲ್ಲಿ ಇನ್ನೊಬ್ಬರ ಜೇಬಿಗೆ ಕೈ ಹಾಕಬೇಡಿ. ಇನ್ನೊಬ್ಬರ ಹೊಟ್ಟೆಗೆ ಕಲ್ಲು ಹಾಕಬೇಡಿ. ಹೀಗೆ ಪಡೆಯುವ ಸಂಪತ್ತು ಎಂದೂ ಸಂತಸ ತರುವುದಿಲ್ಲ ಎಂಬುದನ್ನು ನಿಮ್ಮ ಮುಂದಿಡಲು ಬಯಸುತ್ತೇನೆ.

ಈಗ ಕರ್ನಾಟಕದಲ್ಲಿ ಲೋಕಾಯುಕ್ತ, ಉಚ್ಚ ನ್ಯಾಯಾಲಯದ ಆಶೀರ್ವಾದದಿಂದ, ಪುನರ್ಜನ್ಮ ಪಡೆದಿದೆ. ಆದರೆ, ಸಂತೋಷ್ ಹೆಗ್ಡೆಯಂತವರನ್ನು ಲೋಕಾಯುಕ್ತ ಮುಖ್ಯಸ್ಥರನ್ನಾಗಿ ನೇಮಕ ಮಾಡುವರೇ ಎಂಬುದು ಯಕ್ಷ ಪ್ರಶ್ನೆ. ಇದಕ್ಕೆ ಧರ್ಮರಾಯ ಯುಧಿಷ್ಠರನೇ ಉತ್ತರಿಸಬೇಕು.

email : voice@starofmysore.com

* * *

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ನಾಡಿನ ಸಮಸ್ತ ಜನತೆಗೂ
ಗೌರಿ ಗಣೇಶ
ಹಬ್ಬದ ಹಾರ್ದಿಕ ಶುಭಾಶಯಗಳು
ಕೆ.ವಿ. ಮಲ್ಲೇಶ್
ಮಾಜಿ ಸದಸ್ಯ, ಮೈಸೂರು
ಮಹಾನಗರ ಪಾಲಿಕೆ
ಅಧ್ಯಕ್ಷ,
ಅನಿಕೇತನ ಸೇವಾ ಟ್ರಸ್ಟ್
8105367007


ಟಿ.ನರಸೀಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಶ್ರೀ ಸುನೀಲ್ ಬೋಸ್‌ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್‌ಮುಖಂಡರು ಹಾಗೂ ಕಾರ್ಯಕರ್ತರು
ರಾಕೇಶ್ ಪಾಪಣ್ಣ
ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು
ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ
ಕಾಂಗ್ರೆಸ್ ಮುಖಂಡರು



ವರುಣಾರ್ಭಟ: ನಾಗಮಂಗಲ KSRTC ಬಸ್ ನಿಲ್ದಾಣ ಜಲಾವೃತ

ನಾಗಮಂಗಲ, ಆ.30– ತಾಲೂಕಿನಾದ್ಯಂತ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸಂಪೂರ್ಣ ಜಲಾವೃತಗೊಂಡಿದೆ.

ರಾತ್ರಿ ಸುರಿದ ಧಾರಾಕಾರ ಮಳೆಯಿಂದ ಪಟ್ಟಣದ ಹಿರಿಕೆರೆ ಕೋಡಿ ಒಡೆದು ಬಸ್ ನಿಲ್ದಾಣಕ್ಕೆ ನುಗ್ಗಿದ ಪರಿಣಾಮ ನಿಲ್ದಾಣವೇ ಕೆರೆಯಂತಾಗಿದ್ದು, 20ಕ್ಕೂ ಹೆಚ್ಚು ಬಸ್‌ಗಳು ನೀರಿನಲ್ಲಿ ಮುಳುಗಡೆಯಾಗಿವೆ. ಡಿಪೋನಲ್ಲಿ ಜಲದಿಗ್ಬಂಧನಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ತೆಪ್ಪದ ಸಹಾಯದಿಂದ ರಕ್ಷಿಸಲಾಯಿತು.

ಪಟ್ಟಣದಲ್ಲಿ ಸಣ್ಣ ಮಳೆಯಾದರೂ ಬಸ್ ನಿಲ್ದಾಣಕ್ಕೆ ನೀರು ನುಗ್ಗುತ್ತದೆ. ಇದರಿಂದ ಪ್ರಯಾಣಿಕರಿಗೆ ಸಾಕಷ್ಟು ತೊಂದರೆಗಳಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಾಗಲೀ, ಜನಪ್ರತಿನಿಧಿಗಳಾಗಲಿ ಕ್ರಮ ಕೈಗೊಳ್ಳದೆ ನಿರ್ಲಕ್ಷಿಸುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.



ಸಂಚಾರಕ್ಕೆ ಅಡ್ಡಿ: ತಾಲೂಕಿನ ಅರಸೇಗೌಡನ ಕೊಪ್ಪಲು ಗ್ರಾಮದಲ್ಲಿ ರಸ್ತೆ ಕುಸಿದು ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಯಿತು. ಅಲ್ಲದೇ ಪಾಲಗ್ರಾಹಾರ ಸಮೀಪ ಮುಂಜಾನೆ ರಸ್ತೆಯ ಮೇಲೆ ಅಪಾರ ಪ್ರಮಾಣದ ನೀರು ಹರಿಯುತ್ತಿದ್ದ ಕಾರಣ ಕೆಲ ಗಂಟೆಗಳ ಕಾಲ ರಸ್ತೆ ಸಂಚಾರಕ್ಕೆ ಸ್ಥಗಿತಗೊಂಡಿತ್ತು. ಬೆಳ್ಳೂರು ಹೋಬಳಿ ನಾಗಲಾಪುರ ರಸ್ತೆ ಕುಸಿತವಾಗಿದೆ.

ಜಮೀನುಗಳಿಗೆ ನುಗ್ಗಿದ ನೀರು: ಜಮೀನುಗಳಿಗೂ ನೀರು ನುಗ್ಗಿ ತೆಂಗಿನ ಸಸಿ ಕೊಚ್ಚಿಕೊಂಡು ಹೋಗಿವೆ. ಮಾರ್ಕೋನಹಳ್ಳಿ ಜಲಾಶಯದಿಂದ ಹೆಚ್ಚಿನ ಪ್ರಮಾಣದ ನೀರನ್ನು ಹೊರಬಿಡಲಾಗುತ್ತಿದೆ, ಇದರಿಂದ ನೀರು ಹರಿದು ಹೋಗುವ ಕಾಲುವೆಗಳ ಸಮೀಪ ಜನಸಾಮಾನ್ಯರು ಎಚ್ಚರದಿಂದ ಇರುವಂತೆ ತಹಶೀಲ್ದಾರ್ ಎಂ.ಎಲ್. ನಂದೀಶ್ ಸೂಚನೆ ನೀಡಿದ್ದಾರೆ.

ಅಧಿಕಾರಿಗಳ ಬೇಜವಾಬ್ದಾರಿ: ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಪ್ರತಿ ಮಳೆಗೂ ಜಲಾವೃತಗೊಳ್ಳುತ್ತಿದೆ. ಅಲ್ಲದೇ ಪಟ್ಟಣದ 16ನೇ ವಾರ್ಡ್ ಮತ್ತು 1ನೇ ವಾರ್ಡ್‌ನಲ್ಲಿ ಕಲುಷಿತ ನೀರು ಮನೆಯ ಸಮೀಪ ಹರಿಯುತ್ತಿದ್ದರೂ ಸ್ಥಳೀಯ ಪುರಸಭೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮವಹಿಸುವಲ್ಲಿ ವಿಫಲರಾಗಿದ್ದಾರೆ. ಅಲ್ಲದೇ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೂ ಭೇಟಿ ನೀಡುತ್ತಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶ್ರೀರಂಗಪಟ್ಟಣ: 32 ಮನೆ ಗೋಡೆ ಕುಸಿತ



ಶ್ರೀರಂಗಪಟ್ಟಣ, ಆ.30– ಮೂರು ದಿನಗಳಿಂದ ಸುರಿದ ಮಳೆಗೆ ತಾಲೂಕಿನಾದ್ಯಂತ ವಿವಿಧ ಗ್ರಾಮಗಳಲ್ಲಿ 32ಕ್ಕೂ ಹೆಚ್ಚು ಮನೆ ಗೋಡೆ ಕುಸಿತಗೊಂಡಿದ್ದು, ಜಮೀನುಗಳಿಗೆ ನೀರು ನುಗ್ಗಿ 25ಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದೆ. ಈ ಸಂಬಂಧ ತಾಲೂಕು ಕಂದಾಯ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲಿಸಿದ್ದಾರೆ.

ತಾಲೂಕಿನ ಬೆಳಗೊಳ ಹೋಬಳಿಯ ಬೊಮ್ಮೂರಿನಲ್ಲಿ 2 ಮನೆ, ಕಾರೇಕುರ 1, ಹೊಸಹಳ್ಳಿ 2, ಬೆಳಗೊಳ 1, ಬಸ್ತಿಪುರ 1, ಕಸಬಾ ಹೋಬಳಿಯ ಮಹದೇವಪುರ 5, ಅರಕೆರೆ 5, ಮರಳಗಾಲ 2, ತಡಗವಾಡಿ 3, ಕೊಡಿಯಾಲ 3, ಗೆಂಡೆ ಹೊಸಹಳ್ಳಿ 1, ಎಂ. ಶೆಟ್ಟಿಹಳ್ಳಿ 1, ಸಬ್ಬನಕುಪ್ಪೆ 2, ಗಂಜಾಂನಲ್ಲಿ 3 ಮನೆಗಳು ಕುಸಿತಗೊಂಡಿದೆ ಎಂದು ಉಪ ತಹಶೀಲ್ದಾರ್ ರೇಖಾ ಮಾಹಿತಿ ನೀಡಿದ್ದಾರೆ.

25ಕ್ಕೂ ಹೆಚ್ಚು ಹೆಕ್ಟೇರ್ ಬೆಳೆ ಹಾನಿ: ನಿರಂತರ ಮಳೆಯಿಂದ ತಾಲೂಕಿನ ಬನ್ನಹಳ್ಳಿ, ಹೆಬ್ಬಾಡಿ, ಅರಕೆರೆ, ಟಿ.ಎಂಹೊಸೂರು, ಚಿಕ್ಕಂಕನಹಳ್ಳಿ, ದೊಡ್ಡಂಕನಹಳ್ಳಿ ಸೇರಿದಂತೆ ಹಲವೆಡೆ 25 ಹೆಕ್ಟರ್ ನಾಟಿ ಮಾಡಿದ ಭತ್ತದ ಜಮೀನುಗಳಿಗೆ ನೀರು ನುಗ್ಗಿ ಹಾನಿಯುಂಟಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ನಿಶಾಂತ್ ಕಿಲಾರ್ ತಿಳಿದ್ದಾರೆ.

ಮಂಡ್ಯದಲ್ಲಿ ಕಳೆಗಟ್ಟಿದ ಗೌರಿ, ಗಣೇಶ ಹಬ್ಬ

ಖರೀದಿ ಜೋರು, ಸಂಭ್ರಮದಿಂದ ಗೌರಮ್ಮನ ಬರಮಾಡಿಕೊಂಡ ಜನರು



ಮಂಡ್ಯ, ಆ.30– ಸಕ್ಕರೆ ನಾಡು ಮಂಡ್ಯ ಜಿಲ್ಲೆಯಲ್ಲಿ ಗೌರಿ, ಗಣೇಶ ಹಬ್ಬದ ಸಂಭ್ರಮ ಕಳೆಗಟ್ಟಿದ್ದು, ಗಣೇಶ ಹಬ್ಬಕ್ಕಾಗಿ ಜನರು ಮುಗಿಬಿದ್ದು ಖರೀದಿಯಲ್ಲಿ ನಿರತರಾದರೆ, ಇತ್ತ ಸಂಭ್ರಮದಿಂದ ಗೌರಿ ಹಬ್ಬವನ್ನು ಆಚರಿಸಲಾಯಿತು.

ಮಂಗಳವಾರ ಗೌರಿ ಹಬ್ಬದ ಅಂಗವಾಗಿ ಮನೆಯಲ್ಲೇ ಗೌರಿ ಕೂರಿಸಿ ಮಹಿಳೆಯರು ಶ್ರದ್ಧಾ ಭಕ್ತಿಯಿಂದ ಪೂಜೆಯಲ್ಲಿ ತೊಡಗಿದ್ದರು. ಜೊತೆಗೆ ಮಂಗಳವಾರ ಗೌರಿ ಹಬ್ಬ ಬಿದ್ದಿದ್ದರಿಂದ ಬಹುತೇಕ ದೇವಿಯ ದೇವಾಲಯಗಳು ಭಕ್ತರಿಂದ ಕೂಡಿತ್ತು. ನಗರದ ಚಾಮುಂಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜೆ ಕೈಂಕರ್ಯಗಳು ನಡೆದವು. ಅದಲ್ಲದೇ ಆರತಿ ಉಕ್ಕಡ, ನಿಮಿಷಾಂಬ, ಮದ್ದೂರಮ್ಮ ದೇಗುಲಗಳು ಸೇರಿದಂತೆ ಹಲವು ದೇಗುಲಗಳು ಭಕ್ತರಿಂದ ಕೂಡಿತ್ತು. ಇನ್ನು ನಾಳೆ ಗಣೇಶ ಹಬ್ಬಕ್ಕೆ ಎಲ್ಲಾ ತಯಾರಿಗಳು ಭರದಿಂದ ಸಾಗಿದ್ದು, ಮಂಡ್ಯದ ಸಿಟಿ ಮಾರುಕಟ್ಟೆಯಲ್ಲಿ ಖರೀದಿಗೆ ಜನಸ್ತೋಮವೇ ಹರಿದು ಬಂದಿತ್ತು. ಹೂ, ಹಣ್ಣು, ಪೂಜಾ ಸಾಮಗ್ರಿ ಖರೀದಿಗೆ ಜನ ಮುಗಿ ಬೀಳುತ್ತಿದ್ದರು.

ಇದಲ್ಲದೇ ಗಣೇಶ ಕೂರಿಸಲು ಯುವಕರ ತಂಡಗಳು ಶೆಡ್ ನಿರ್ಮಾಣ, ಗಣೇಶ ಖರೀದಿಗೆ ಮುಂದಾಗಿದ್ದರು. ಮಳವಳ್ಳಿ ತಾಲೂಕಿನ ಚಿಕ್ಕಮುಲಗೂಡು ಗ್ರಾಮದಲ್ಲಿ ಇಡೀ ಗ್ರಾಮದಾದ್ಯಂತ ಗಣೇಶನನ್ನು ಮಾರಾಟ ಮಾಡುವುದರಿಂದ ಅಲ್ಲಿ ಜನಸಾಗರವೇ ಹರಿದು ಭಕ್ತರು ಗಣೇಶನನ್ನು ಖರೀದಿ ಮಾಡುತ್ತಿದ್ದರು.

ಭಾರತೀನಗರದಲ್ಲೂ ವ್ಯಾಪಾರ ಜೋರು

ಭಾರತೀನಗರ, ಆ.30– ಇಲ್ಲಿನ ಮದ್ದೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಗಣೇಶ ಹಬ್ಬಕ್ಕೆ ಅಗತ್ಯ ವಸ್ತುಗಳ ಖರೀದಿಗೆ ಜನರು ಮುಗಿಬಿದ್ದರು.

ಚಿಕ್ಕಮಕ್ಕಳಿಂದ ಹಿಡಿದು ವಯೋವೃದ್ಧರವರೆವಿಗೂ ಗಣೇಶ ಹಬ್ಬವನ್ನು ವಿಜೃಂಭಣೆಯಿಂದ ಆಚರಣೆ ಮಾಡಲು ಮುಂದಾಗಿದ್ದಾರೆ. ಹಾಗಾಗಿ, ರಸ್ತೆಯುದ್ದಕ್ಕೂ ಸಾಲು–ಸಾಲು ದ್ವಿಚಕ್ರ ವಾಹನಗಳು ನಿಂತಿದ್ದವು. ಇದರಿಂದ ರಸ್ತೆ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ಪೊಲೀಸರು ರಸ್ತೆ ಬದಿಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ಸೂಚಿಸುತ್ತಿದ್ದರೂ ದ್ವಿಚಕ್ರವಾಹನ ಸವಾರರು ಸ್ಥಳವಿಲ್ಲದೆ ರಸ್ತೆ ಬದಿಯಲ್ಲೇ ನಿಲ್ಲಿಸಿ ಅಗತ್ಯ ವಸ್ತು ಖರೀದಿಗೆ ಮುಂದಾಗಿದ್ದರು. ಹಣ್ಣು, ಹೂ, ಗೌರಿ–ಗಣೇಶ ಮೂರ್ತಿಗಳ ವ್ಯಾಪಾರಕ್ಕೆ ಬಲು ಜೋರಾಗಿ ನಡೆಯಿತು.



ಬೆಲ್ಲದ ಗಣೇಶ ಖರೀದಿಗೆ ಸಲಹೆ



ಮಂಡ್ಯ, ಆ.30– ಸಾರ್ವಜನಿಕರು ಈ ಬಾರಿ ವಿಶೇಷವಾಗಿ ಗೌರಿ ಮತ್ತು ಗಣೇಶ ಹಬ್ಬವನ್ನು ಆಚರಣೆ ಮಾಡಬೇಕೆಂಬ ಉದ್ದೇಶದಿಂದ ಮಂಡ್ಯ ಜಿಲ್ಲೆಯಲ್ಲಿ ಕೆಪೆಕ್ ಬೆಂಗಳೂರು, ಕೃಷಿ ಇಲಾಖೆ, ವಿಕಸನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ ಹಾಗೂ ಸಿದ್ದಯ್ಯನ ಕೊಪ್ಪಲು ರೈತ ಉತ್ಪಾದಕರ ಕಂಪನಿಯಿಂದ ವಿಶೇಷವಾಗಿ ಬೆಲ್ಲದಿಂದ ಗೌರಿ– ಗಣೇಶ ಮೂರ್ತಿಯನ್ನು ಸಿದ್ಧಪಡಿಸಿದ್ದು, ಇದನ್ನು ಸಾರ್ವಜನಿಕರು ಖರೀದಿಸಿ ಹಬ್ಬ ಆಚರಿಸಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿ ಬೆಲ್ಲದಿಂದ ಗೌರಿ– ಗಣೇಶ ಮೂರ್ತಿಗಳ ಮಾರಾಟದ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ಪರಿಸರ ಸ್ನೇಹಿ ಸಾವಯವ ಬೆಲ್ಲದ ಗಣಪತಿ ಮತ್ತು ಗೌರಿ ಪೂಜೆ ಮಾಡಿ ಹಬ್ಬ ಆಚರಣೆ ಮಾಡುವುದರಿಂದ ರೈತರು ಹೆಚ್ಚು ಬೆಲ್ಲವನ್ನು ಉತ್ಪಾದಿಸಲು ಸಹಕಾರಿಯಾಗುತ್ತದೆ ಎಂದರು. ಚಿಕ್ಕ ಬೆಲ್ಲದ ಗೌರಿ ಮತ್ತು ಗಣೇಶ ಜೋಡಿಗೆ ಸುಮಾರು 300 ರೂ ನಿಗದಿ ಮಾಡಿದ್ದಾರೆ. ಹಾಗೆಯೇ ದೊಡ್ಡ ಗೌರಿ ಮತ್ತು ಗಣೇಶ ಜೋಡಿಗೆ ಸುಮಾರು 400ರೂ. ನಿಗದಿ ಮಾಡಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ವಿಕಸನ ಸಂಸ್ಥೆಯ ನಿರ್ದೇಶಕ ಮಹೇಶ್ ಚಂದ್ರ ಗುರು, ಸಂಯೋಜಕ ಕೆಂಪಯ್ಯ ಇತರರಿದ್ದರು.

ಕಿಕ್ಕೇರಿ: ತೊಟ್ಟಿಲು ಗೌರಮ್ಮನ ಉತ್ಸವ



ಕಿಕ್ಕೇರಿ, ಆ.30– ಪಟ್ಟಣದಲ್ಲಿ ತೊಟ್ಟಿಲು ಗೌರಮ್ಮ ಹಾಗೂ ಮರಳು ಗೌರಮ್ಮ ಪೂಜೆ ಸಂಭ್ರಮದಿಂದ ನಡೆಯಿತು.

ಮಹಿಳೆಯರು ಮನೆಯ ಮುಂದೆ ರಂಗೋಲಿ ಬಿಡಿಸಿ, ತಳಿರು ತೋರಣ ಕಟ್ಟಿ ದೇವಿಯನ್ನು ಸಡಗರದಿಂದ ಬರಮಾಡಿಕೊಂಡರು. ಬಾಗಿನ ಅರ್ಪಿಸಿ, ಅಕ್ಕಿ, ಬೆಲ್ಲ ಮತ್ತಿತರ ಪೂಜಾ ಸಾಮಗ್ರಿ ಫಲ ತಾಂಬೂಲದೊಂದಿಗೆ ಉಡಿ ತುಂಬಿ ಆರತಿ ಬೆಳಗಿದರು. ಯುವತಿಯರು, ಮಟಾಣಿಗಳು ಹೊಸ ಉಡುಗೆ ತೊಟ್ಟು ಮನೆಮನೆಗೆ ತೆರಳಿ ಬಾಗಿನ, ಸಿಹಿ ತಿನಿಸು ವಿತರಿಸಿ ಶುಭಾಶಯ ವಿನಿಮಯ ಮಾಡಿಕೊಂಡರು. ಈ ವೇಳೆ ಗಂಗಾಮತಸ್ಥ ಮುಖಂಡರು ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣ ದಸರಾ: ಜಿಲ್ಲಾಧಿಕಾರಿಗಳಿಂದ ಬನ್ನಿಮಂಟಪ ಪರಿಶೀಲನೆ

ಶ್ರೀರಂಗಪಟ್ಟಣ, ಆ.30– ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಎಸ್.ಅಶ್ವತಿ ಕಿರಂಗೂರು ಬಳಿಯ ಬನ್ನಿಮಂಟಪಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮಂಟಪದ ಸುತ್ತಲೂ ಸ್ವಚ್ಛತೆ ಕುರಿತಾಗಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಶ್ರೀರಂಗಪಟ್ಟಣ ಮೂಲ ದಸರಾವನ್ನು ಸೆ. 28ರಿಂದ ಅ. 2ರವರೆಗೆ 5 ದಿನಗಳ ಕಾಲ ನಡೆಸಲು ಉಸ್ತುವಾರಿ ಸಚಿವರ ನೇತೃತ್ವದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಬನ್ನಿಮಂಟಪ, ಕಲ್ಯಾಣಿಗಳಲ್ಲಿ ಹಾಗೂ ಎಲ್ಲಾ ಐತಿಹಾಸಿಕ ಸ್ಥಳಗಳಲ್ಲಿ ಸಂಪೂರ್ಣ ಸ್ವಚ್ಛತೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮಂಟಪಕ್ಕೆ ಬಣ್ಣ ಬಳಿಯುವ ವಿಶೇಷ ದೀಪಾಲಂಕಾರ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಹಾಗೂ ಇನ್ನಿತರ ಮೂಲಸೌಕರ್ಯಗಳ ಕುರಿತು ವ್ಯವಸ್ಥಿತವಾಗಿ ಸಿದ್ಧತೆಗೆ ಕ್ರಮವಹಿಸಲು ಉಪ ವಿಭಾಗಾಧಿಕಾರಿ ಶಿವಾನಂದಮೂರ್ತಿಗೆ ತಿಳಿಸಿದರು.



ವಿಶೇಷವೆಂದರೆ ಈ ಬಾರಿ ಮೈಸೂರು ಜಿಲ್ಲಾಧಿಕಾರಿಗಳಿಂದ ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇತರೆ ಇಲಾಖೆಯಿಂದ ಅನುದಾನ ಬರಲಿದ್ದು, 5ದಿನ ವಿಜೃಂಭಣೆಯಿಂದ ವಿಶೇಷ ಕಾರ್ಯಕ್ರಮ ಆಯೋಜಿಸುವ ಮೂಲಕ ದಸರಾ ಆಚರಿಸಲು ರೂಪುರೇಷೆ ಸಿದ್ಧಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ದಸರಾ ಕಾರ್ಯಕ್ರಮಕ್ಕೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು ಹಾಗೂ ಸೂಕ್ತ ಬ್ಯಾರಿಕೇಟ್ ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಅವರಿಗೆ ಸೂಚನೆ ನೀಡಿದರು. ಇದೇ ವೇಳೆ ಕಂದಾಯ ಅಧಿಕಾರಿಗಳು, ಪುರಸಭೆ ಸಿಬ್ಬಂದಿ ಇದ್ದರು.


ಮುರುಘಾ ಶರಣರ ಬಂಧನಕ್ಕೆ ಎಂಎಲ್‌ಸಿ ವಿಶ್ವನಾಥ್ ಆಗ್ರಹ

ಮೈಸೂರು,ಆ.30(ಎಂಟಿವೈ)–ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪದ ಹಿನ್ನೆಲೆಯಲ್ಲಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿರುವುದರಿಂದ ಕೂಡಲೇ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ರಾಜೇಂದ್ರ ಶರಣರನ್ನು ಬಂಧಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಅಡಗೂರು. ಹೆಚ್.ವಿಶ್ವನಾಥ್ ಆಗ್ರಹಿಸಿದ್ದಾರೆ.

ಮೈಸೂರಿನ ಕಾಡಾ ಕಚೇರಿಯಲ್ಲಿನ ತಮ್ಮ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುರುಘಾ ಶ್ರೀಗಳ ವಿರುದ್ಧ ಆರೋಪ ಕೇಳಿ ಬಂದು 48ಗಂಟೆಗಳು ಕಳೆದಿವೆ. ಕಾನೂನಿನ ಪ್ರಕಾರ ಬಲವಾದ ಕೇಸ್ ಶ್ರೀಗಳ ವಿರುದ್ಧ ದಾಖಲಾಗಿರುವ ಕಾರಣ ಅವರನ್ನು ಬಂಧಿಸಲೇಬೇಕಾಗಿದೆ. ಇದರಲ್ಲಿ ಬೇರೆ ಯಾರು ತಲೆ ಹಾಕಬಾರದು. ಮಾಜಿ ಸಿಎಂ, ಗೃಹಸಚಿವರು ಸೇರಿದಂತೆ ಯಾರೂ ಪ್ರಕರಣದ ಬಗ್ಗೆ ಏನೇನೋ ಹೇಳಬಾರದು ಎಂದು ಸಲಹೆ ನೀಡಿದರು.

ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾದ ಮೇಲೆ ಆತ ಆರೋಪಿ ಆಗಲ್ಲ, ಅಪರಾಧಿ ಆಗುತ್ತಾನೆ. ಕೇಸ್ ದಾಖಲಾದ 24 ಗಂಟೆಯೊಳಗೆ ಅಪರಾಧಿ ಬಂಧನವಾಗಬೇಕಿತ್ತು. ಸಂಧಾನ, ಅನುಸಂಧಾನದ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಗೃಹ ಸಚಿವರು ಕಾನೂನು ಪ್ರಕಾರ ಕೈಗೊಳ್ಳುವ ಕ್ರಮದ ಬಗ್ಗೆ ಮಾತನಾಡಬೇಕಿತ್ತು. ಜಾತಿ, ಧರ್ಮ ಯಾವುದೂ ಇಲ್ಲಿ ಮಧ್ಯಪ್ರವೇಶಿಸಬಾರದು.

ರಾಜಕೀಯ ನಾಯಕರು ಸುಮ್ಮನಿರುವುದೇಕೆ?



ಶಿವಮೂರ್ತಿ ಮುರುಘಾ ರಾಜೇಂದ್ರ ಶ್ರೀಗಳ ವಿರುದ್ಧ ಕೇಳಿ ಬಂದಿರುವ ಲೈಂಗಿಕ ಕಿರುಕುಳದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋದ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಸಿಎಂಗಳಾದ ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ. ಕುಮಾರಸ್ವಾಮಿ ಸುಮ್ಮನಿದ್ದಾರೆ. ಈ ಪ್ರಕರಣದಲ್ಲಿ ನೊಂದ ಹೆಣ್ಣು ಮಕ್ಕಳಿಗೆ ನ್ಯಾಯ ಸಿಗಲೇಬೇಕು. ಇಲ್ಲದಿದ್ದರೆ ಸರ್ಕಾರ ಪೋಕ್ಸೋ ಕಾಯ್ದೆಯನ್ನು ನಾವು ಒಪ್ಪುವುದಿಲ್ಲ ಎಂದು ಹೇಳಿಬಿಡಲಿ. ಈ ಪ್ರಕರಣದಿಂದ ಇಡೀ ರಾಜ್ಯದ ಮಾನ ಮರ್ಯಾದೆ ಹೋಗುತ್ತಿದೆ. ಮಕ್ಕಳ ಆಯೋಗ ಏನು ಮಾಡುತ್ತಿದೆ? ಈ ಘಟನೆಯಲ್ಲಿ ನ್ಯಾಯ ಸಿಗಲಿಲ್ಲವಾದರೆ 2023ರ ಚುನಾವಣೆಯ ಮೇಲೂ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದರು. ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಯಾವ ರಾಜಕೀಯ ಪಕ್ಷದವರು ಮಾತನಾಡುತ್ತಿಲ್ಲ. ಚಿಂತಕರು, ಸಾಹಿತಿಗಳು ಎಲ್ಲಿ ಹೋದ್ರಿ? ಪ್ರಗತಿಪರರು ಎಲ್ಲಿ ಹೋದ್ರು ಎಂದು ವಿಶ್ವನಾಥ್ ಆತಂಕದಿಂದಲೇ ಪ್ರಶ್ನಿಸಿದರು.

ಸ್ವಾಮೀಜಿ ಎಲ್ಲೋ ಹೋಗುತ್ತಿದ್ದರೆ ಅವರನ್ನು ಪೊಲೀಸರು ಗೌರವದಿಂದ ವಾಪಸ್ ಕರೆದುಕೊಂಡು ಬಂದಿದ್ದು ಸರಿನಾ? ನಾವು ಸ್ವಾಮೀಜಿಗಳ ಪರ ಇದ್ದೇವೆ ಎಂದು ಅವರ ಅಭಿಮಾನಿಗಳು ಮಠದಲ್ಲಿ ಘೋಷಣೆ ಕೂಗುತ್ತಾರೆ. ಹಾಗಾದರೆ ತಪ್ಪು ಮಾಡಿದವರ ಪರ ನೀವು ಇದ್ದೀರಾ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಏನು ಮಾಡುತ್ತಿದ್ದಾರೆ. ಮೊದಲು ಅಲ್ಲಿನ ಎಸ್ಪಿಯನ್ನು ಅಮಾನತು ಮಾಡಬೇಕು. ಕಾನೂನಿನ ಪ್ರಕಾರ ಸ್ವಾಮೀಜಿ ಬಂಧಿಸಲು ಮುತುವರ್ಜಿ ವಹಿಸಬೇಕಾದ ಎಸ್ಪಿ ಕೈಚೆಲ್ಲಿ ಕುಳಿತಿದ್ದಾರೆ. ಸಂತ್ರಸ್ತ ಬಾಲಕಿಯರಿಗೆ ನ್ಯಾಯ ಸಿಗಬೇಕು. ಇದು ಅಪ್ರಾಪ್ತ ಬಾಲಕಿಯರ ವಿಚಾರ. ಅವರು ಅಮಾಯಕ ಬಾಲಕಿಯರು. ಕರ್ನಾಟಕದಲ್ಲಿ ಬಹಳ ದೊಡ್ಡ ಗುರು ಪರಂಪರೆ ಇದೆ. ತಾತ್ಕಾಲಿಕವಾಗಿ ಮುರುಘಾಶ್ರೀಗಳು ಪೀಠ ತ್ಯಜಿಸಬೇಕು. ನಿಮ್ಮ ಮೇಲೆ ಬಂದ ಅಪವಾದ ಸುಳ್ಳಾದರೆ ಮತ್ತೆ ಪೀಠ ಅಲಂಕರಿಸಿ. ಅಲ್ಲಿಯ ತನಕ ಪೀಠ ತ್ಯಜಿಸಿ ಮುರುಘಾ ಮಠದ ಗೌರವ ಉಳಿಸಬೇಕು ಎಂದು ಆಗ್ರಹಿಸಿದರು.

ಸಿಎಂ ಬಸವರಾಜ ಬೊಮ್ಮಾಯಿ ಯಾವುದೇ ಮುಲಾಜಿಗೆ ಒಳಗಾಗಬಾರದು. ವಿಪಕ್ಷ ನಾಯಕ ಸಿದ್ದರಾಮಯ್ಯ ಯಾಕೆ ಮಾತನಾಡುತ್ತಿಲ್ಲ. ಈ ನಾಡಿನ ಮಕ್ಕಳ ಪ್ರಶ್ನೆ ಇದು. ಪ್ರಧಾನಿಗೆ ನಾನು ಈ ಬಗ್ಗೆ ವಿಸ್ತೃತವಾಗಿ ಪತ್ರ ಬರೆ ಯುತ್ತಿದ್ದೇನೆ. ಪತ್ರ ಯಾರ ವಿರುದ್ಧವೂ ಇಲ್ಲ. ಬದಲಾಗಿ ನಡೆದಿರುವ ಎಲ್ಲಾ ವಿಚಾರಗಳನ್ನು ಪತ್ರದಲ್ಲಿ ವಿವರಿಸುತ್ತೇನೆ ಎಂದರು.

ಸಾವರ್ಕರ್ ಪ್ರತಿ ಸ್ವಾತಂತ್ರ್ಯ ಹೋರಾಟಗಾರರಿಗೂ ಪ್ರೇರಣೆ

'ವೀರ ಸಾವರ್ಕರ್ ರಥಯಾತ್ರೆ' ಸಮಾರೋಪದಲ್ಲಿ ಸಾಮಾಜಿಕ ಕಾರ್ಯಕರ್ತ ಚಂದ್ರಶೇಖರ್ ಅಭಿಮತ



ಮೈಸೂರು, ಆ.30(ಎಂಕೆ)– ವೀರ ಸಾವರ್ಕರ್ ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರರಿಗೂ ಪ್ರೇರಣೆಯಾಗಿದ್ದರು. ಅವರ ಸ್ವಾತಂತ್ರ್ಯ ಹೋರಾಟ ಹಾಗೂ ಚಿಂತನೆಯನ್ನು ಅನುಷ್ಠಾನಗೊಳಿಸಿದ ಗಾಂಧೀಜಿಯವರು ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವಲ್ಲಿ ಯಶಸ್ವಿಯಾದರು ಎಂದು ತುಮಕೂರಿನ ಸಾಮಾಜಿಕ ಕಾರ್ಯಕರ್ತ ಹೆಚ್.ಎನ್.ಚಂದ್ರಶೇಖರ್ ತಿಳಿಸಿದರು.

ವಿದ್ಯಾಶಂಕರ ಕಲ್ಯಾಣ ಮಂಟಪದಲ್ಲಿ ಮಂಗಳವಾರ ನಡೆದ 'ಸಾವರ್ಕರ್ ರಥಯಾತ್ರೆ' ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟದ ವೇಳೆ ಸಾವರ್ಕರ್ ಒಬ್ಬರೇ ಅಲ್ಲ, ಹೋರಾಟದಲ್ಲಿ ಭಾಗಿಯಾಗಿದ್ದ ಪ್ರತಿಯೊಬ್ಬರು ಬ್ರಿಟಿಷರಿಗೆ ಕ್ಷಮಾಪಣಾ ಪತ್ರ ಬರೆದಿದ್ದಾರೆ. ಬ್ರಿಟಿಷರಿಗೆ ಕ್ಷಮಾಪಣಾ ಪತ್ರ ಬರೆಯುವುದು ಹೋರಾಟ ತಂತ್ರಗಾರಿಕೆಯಾಗಿತ್ತು. ಅಲ್ಲದೆ ಬ್ರಿಟಿಷ್ ಸರ್ಕಾರದಿಂದ ಎರಡು ಬಾರಿ ಜೀವಾವಧಿ ಶಿಕ್ಷೆಗೆ ಗುರಿಯಾದ ಮೊದಲ ವ್ಯಕ್ತಿಯೂ ಸಾವರ್ಕರ್ ಆಗಿದ್ದಾರೆ ಎಂದರು.


ಜೈಲಿನಲ್ಲಿ ಇದ್ದುಕೊಂಡೇ 10 ಸಾವಿರ ಕವಿತೆಗಳು, ಶ್ಲೋಕಗಳನ್ನು ಸಾವರ್ಕರ್ ಬರೆದಿದ್ದಾರೆ. ಅವರಷ್ಟು ವರ್ಷಗಳ ಕಾಲ ಜೈಲಿನಲ್ಲಿದ್ದು, ಬ್ರಿಟಿಷರು ನೀಡಿದ ಉಗ್ರ ಶಿಕ್ಷೆ ಅನುಭವಿಸಿದವರು ಯಾರು ಇಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್‌ನವರು ಜೈಲಿನಲ್ಲೂ ವಿಐಪಿಯಾಗಿದ್ದರು. ಅವರಿಗೆ ಯಾವುದೇ ರೀತಿಯ ಶಿಕ್ಷೆ ಇರಲಿಲ್ಲ. ಸಾವರ್ಕರ್ ಅವರ ಹೋರಾಟದ ಬಗ್ಗೆ ಸ್ವತಃ ಗಾಂಧೀಜಿ, ಡಾ.ಅಂಬೇಡ್ಕರ್ ಸೇರಿದಂತೆ ಹಲವು ನಾಯಕರು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ ಎಂದು ತಿಳಿಸಿದರು.

ವಿದೇಶಿಗರಿಂದ ಸ್ಥಾಪನೆಯಾದ ಕಾಂಗ್ರೆಸ್: ವಿದೇಶಿ ವ್ಯಕ್ತಿಯಿಂದ ಸ್ಥಾಪನೆಯಾದ ಕಾಂಗ್ರೆಸ್ ಇಂದಿಗೂ ವಿದೇಶಿಗರಿಂದಲೇ ನಡೆದುಕೊಂಡು ಬರುತ್ತಿದೆ. ಬ್ರಿಟಿಷರು ಕಾಂಗ್ರೆಸ್ ಸ್ಥಾಪನೆಗೆ ಅವಕಾಶ ನೀಡಿದ್ದು, ಆಡಳಿತದ ದೃಷ್ಟಿಯಿಂದ ಕೆಲ ಶ್ರೀಮಂತ ಭಾರತೀಯರನ್ನು ತಮ್ಮೊಡನೆ ಸೇರಿಸಿಕೊಳ್ಳಲಷ್ಟೇ ಹೊರತು ಸ್ವಾತಂತ್ರ್ಯ ನೀಡುವುದಕ್ಕಲ್ಲ. ಹಿಂದುತ್ವ ಪ್ರತಿಪಾದಕರಾಗಿದ್ದ ಸಾವರ್ಕರ್, ಕಾಂಗ್ರೆಸ್‌ನ ಕಾರ್ಯಚಟುವಟಿಕೆಗಳನ್ನು ವಿರೋಧಿಸುತ್ತಿದ್ದರು. ಆದ್ದರಿಂದಲೇ ಅಂದಿನಿಂದ ಇಂದಿನವರೆಗೂ ಕಾಂಗ್ರೆಸ್ ಸಾವರ್ಕರ್ ಅವರನ್ನು ವಿರೋಧಿಸುತ್ತಲೇ ಬಂದಿದೆ ಎಂದು ಕಿಡಿಕಾರಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದ ಕಾಂಗ್ರೆಸ್, ಇತಿಹಾಸ ಪಠ್ಯಪುಸ್ತಕಗಳಲ್ಲಿ ಸಾವರ್ಕರ್ ಅವರನ್ನು ಮರೆಮಾಚಿದ್ದರಿಂದಾಗಿ ಸಾವರ್ಕರ್ ಅವರ ಬಗ್ಗೆ ಜನರಿಗೆ ಅಷ್ಟಾಗಿ ಗೊತ್ತಿಲ್ಲ. ಒಂದು ಪರಿವಾರಕ್ಕೆ ಸೀಮಿತವಾಗಿದ್ದ ಕಾಂಗ್ರೆಸ್ ಇಂದಿಗೂ ಅದೇ ಮಾರ್ಗದಲ್ಲಿದೆ ಎಂದು ದೂರಿದರು.

ಯಶಸ್ವಿ ರಥಯಾತ್ರೆ: ಮೈಸೂರು ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಯಶಸ್ವಿನಿ ಮಾತನಾಡಿ, ದೇಶದಲ್ಲೇ ವೀರ ಎಂದು ಕರೆಸಿಕೊಂಡ ಸಾವರ್ಕರ್ ಅವರ ರಥಯಾತ್ರೆ ಯಶಸ್ವಿಯಾಗಿ ನೆರವೇರಿದೆ. ರಥಯಾತ್ರೆ ಹೋದ ಕಡೆಯೆಲ್ಲಾ ಜನರು ಪೂರ್ಣ ಕುಂಭ ಸ್ವಾಗತ ನೀಡಿ, ಯಶಸ್ಸಿಗೆ ಕಾರಣರಾಗಿದ್ದಾರೆ ಎಂದರು.

ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪಾಲಿಕೆ ಸದಸ್ಯರಾದ ಮಾ.ವಿ.ರಾಂ ಪ್ರಸಾದ್, ಶಿವಕುಮಾರ್, ಸಾವರ್ಕರ್ ಪ್ರತಿಷ್ಠಾನದ ಸಂಚಾಲಕರಾದ ಸಂದೇಶ್, ರಜತ್, ಕೆ.ಎಂ.ನಿಶಾಂತ್, ರಾಕೇಶ್ ಭಟ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಇಲವಾಲದ ಮಹಾಶಕ್ತಿ ಗಣಪತಿ ದೇವಸ್ಥಾನದ ಬಳಿ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ನೇತೃತ್ವದಲ್ಲಿ ಪುಷ್ಪಾರ್ಚನೆ ಮೂಲಕ 'ಸಾವರ್ಕರ್ ರಥಯಾತ್ರೆ'ಯನ್ನು ಬೀಳ್ಕೊಡಲಾಯಿತು. ಈ ವೇಳೆ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪೈ. ಟಿ.ರವಿ, ಜಿಲ್ಲಾ ಪ್ರಕೋಷ್ಠ ಸಂಚಾಲಕ ಗೋಪಾಲ್, ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಚಿದಂಬರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮ, ಚೇತನ್‌ಕುಮಾರ್, ಶಿವಕುಮಾರ್, ಮೋಹನ್, ದೇವರಾಜ್, ರವಿ, ವಿನ್ಸೆಂಟ್, ನೇಹಾ ಕುಮಾರ್, ಲೋಕೇಶ್, ಗಗನಗೌಡ, ಬಸವರಾಜು, ಕಿರಣ್‌ಕುಮಾರ್, ರವಿ, ವೀರಭದ್ರಸ್ವಾಮಿ, ಮಹೇಶ್, ಮಾಧವರಾವ್, ರಾಜಣ್ಣ ಮತ್ತಿತರರಿದ್ದರು.

ಮಾವುತರು, ಕಾವಾಡಿಗಳ ಮಕ್ಕಳಿಗೆ ತಾತ್ಕಾಲಿಕ ಶಾಲೆ

ಮೈಸೂರು, ಆ.30(ಎಸ್‌ಬಿಡಿ)– ಗಜಪಡೆಯೊಂದಿಗೆ ಮೈಸೂರಿಗೆ ಆಗಮಿಸಿರುವ ಮಾವುತ ಹಾಗೂ ಕಾವಾಡಿಗಳ ಮಕ್ಕಳು ವಿದ್ಯಾಭ್ಯಾಸದಲ್ಲಿ ಸೈ ಎನಿಸಿಕೊಂಡಿದ್ದಾರೆ.

ದಸರಾ ಮಹೋತ್ಸವಕ್ಕಾಗಿ ಮೊದಲ ತಂಡದಲ್ಲಿ ಅಂಬಾರಿ ಆನೆ 'ಅಭಿಮನ್ಯು' ಸೇರಿದಂತೆ 9 ಆನೆಗಳನ್ನು ಕರೆತರಲಾಗಿದೆ. ಗಜಪಡೆಯೊಂದಿಗೆ ಮಾವುತರು ಹಾಗೂ ಕಾವಾಡಿಗಳ ಕುಟುಂಬದವರು ಆಗಮಿಸಿದ್ದು, ಅರಮನೆ ಆವರಣದಲ್ಲೇ ಅವರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಡಲಾಗಿದೆ. ಈ ಬಳಗದಲ್ಲಿರುವ ಮಕ್ಕಳ ಕಲಿಕೆಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಈ ಬಾರಿಯೂ 'ತಾತ್ಕಾಲಿಕ ಶಾಲೆ' ಆ.26ರಿಂದ ಆರಂಭಿಸಲಾಗಿದೆ. ಹಿಂದೆ 'ಟೆಂಟ್ ಶಾಲೆ' ನಿರ್ಮಿಸಲಾಗುತ್ತಿತ್ತು. ಆದರೆ ನಿರಂತರ ಮಳೆ ಕಾರಣಕ್ಕೆ ಜಯಮಾರ್ತಾಂಡ ದ್ವಾರದ ಸಮೀಪದಲ್ಲಿರುವ ಕಟ್ಟಡವೊಂದರಲ್ಲಿ ಶಾಲೆ ನಡೆಸಲಾಗುತ್ತಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಆರಂಭಿಸಿರುವ ಶಾಲೆಯಲ್ಲಿ ಸದ್ಯ 13 ಮಕ್ಕಳು ದಾಖಲಾಗಿದ್ದು, ಅವರಿಗೆ ಪಾಠ, ಆಟದ ಜೊತೆಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ. ಗಜಪಡೆ 2ನೇ ತಂಡದಲ್ಲಿ 5 ಆನೆಗಳನ್ನು ಸೆಪ್ಟೆಂಬರ್ ಮೊದಲ ವಾರ ಕರೆತರುವ ಸಾಧ್ಯತೆ ಇದ್ದು, ಆ ವೇಳೆ ಆಗಮಿಸುವ ಮಾವುತರು ಹಾಗೂ ಕಾವಾಡಿಗಳ ಕುಟುಂಬದಲ್ಲಿ ಇನ್ನೂ 20–25 ಮಕ್ಕಳು ಇದ್ದಾರೆಂದು ತಿಳಿದುಬಂದಿದೆ. ಒಟ್ಟಾರೆ 40 ಮಕ್ಕಳು ಶಾಲೆಗೆ ದಾಖಲಾಗುವ ನಿರೀಕ್ಷೆಯಿದೆ. ಅಗತ್ಯವಿದ್ದರೆ ಮತ್ತೊಂದು ಕಟ್ಟಡವನ್ನು ಶಾಲೆಗೆ ಬಳಸಿಕೊಳ್ಳುವ ಸಾಧ್ಯತೆ ಇದೆ. ಪೂರ್ಣ ಪ್ರಮಾಣದ ದಾಖಲಾತಿ ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶಾಲೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಲಿದ್ದಾರೆ ಎಂದು ಶಾಲೆಯ ನೋಡಲ್ ಅಧಿಕಾರಿ ಮಂಜುಳಾ ತಿಳಿಸಿದ್ದಾರೆ.

ಆರು ಮಂದಿ ಶಿಕ್ಷಕರು: ನೋಡೆಲ್ ಅಧಿಕಾರಿಯಾಗಿರುವ ಮಂಜುಳಾ ಸೇರಿದಂತೆ ಒಟ್ಟು 6 ಮಂದಿ ಶಿಕ್ಷಕರು 'ತಾತ್ಕಾಲಿಕ ಶಾಲೆ'ಯಲ್ಲಿ ಕಲಿಸುತ್ತಿದ್ದಾರೆ. ದಸರೆಗೆ ಬರುವ ಮಾವುತರು ಹಾಗೂ ಕಾವಾಡಿಗಳ ಮಕ್ಕಳಿಗೆ ದಶಕದಿಂದ ಪಾಠ ಹೇಳಿಕೊಟ್ಟಿರುವ ಶಿಕ್ಷಕಿ ನೂರ್ ಫಾತಿಮಾ ಈ ಬಾರಿಯೂ ಇಂಗ್ಲಿಷ್, ಗಣಿತ ಹಾಗೂ ಇತರೆ ವಿಷಯಗಳನ್ನು ಹೇಳಿಕೊಡುತ್ತಿದ್ದಾರೆ. ಶಿಕ್ಷಕಿ ಲಕ್ಷ್ಮೀ ವಿಜ್ಞಾನ, ವೋಸಿನ್ ತಾಜ್ ಕನ್ನಡ ಹಾಗೂ ಸಮಾಜ ವಿಜ್ಞಾನ ಪಾಠ ಮಾಡುತ್ತಿದ್ದಾರೆ. ಕಲಾಶಿಕ್ಷಕರಾದ ಮಹದೇವು ಹಾಗೂ ಸುಬ್ಬಲಕ್ಷ್ಮೀ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶಿಸ್ತಿನಿಂದ ಕಲಿಕೆ: ಕಾಡಿನಲ್ಲಿ ಹಕ್ಕಿಗಳಂತೆ ಸ್ವಚ್ಛಂದವಾಗಿದ್ದ ಮಕ್ಕಳು, ಶಾಲೆ ಆರಂಭಕ್ಕೂ ಮುನ್ನವೇ ಬೆಳಗ್ಗೆ 9.30ಕ್ಕೆ ತರಗತಿಯಲ್ಲಿ ಕುಳಿತು, ಶಿಕ್ಷಕರು ಬಂದಾಗ ಎದ್ದು ನಿಂತು ವಂದಿಸುತ್ತಾರೆ. ಶಿಕ್ಷಕರ ಪಾಠವನ್ನು ಆಸಕ್ತಿಯಿಂದ ಕೇಳಿ ಅಭ್ಯಾಸ ಮಾಡುತ್ತಾರೆ. ಕನ್ನಡ ವರ್ಣಮಾಲೆ, ಕಕಾಕಿಕೀ..., ಇಂಗ್ಲಿಷ್ ಲೆಟರ್ಸ್, ಕನ್ನಡ ಪದ್ಯಗಳನ್ನು ಕಲಿಯುತ್ತಾರೆ. ಒಟ್ಟಾರೆ ಸದಾ ಶಾಲೆ, ಟ್ಯೂಷನ್, ಓದಿನಲ್ಲೇ ಮುಳುಗುವ ನಗರದ ಮಕ್ಕಳಿಗೆ ಸರಿಸಮವಾಗಿ ಕಲಿಕೆಯಲ್ಲಿ ತೊಡಗಿದ್ದಾರೆ.



ಆಟ–ನೃತ್ಯದಲ್ಲಿ ತಲ್ಲೀನ

ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಲಾಗುತ್ತದೆ. ಓಡಿಹೋಗುವ ಮೂರ್ನಾಲ್ಕು ಜನರನ್ನು ಬೆನ್ನತ್ತಿ ಹಿಡಿಯುವ ಆಟ, ಕುಂಟೆಬಿಲ್ಲೆ, ಕಬಡ್ಡಿ ಹೀಗೆ ವಿವಿಧ ಆಟೋಟಗಳಲ್ಲಿ ಮಕ್ಕಳು ಮೈಮರೆಯುತ್ತಾರೆ. ಇದರ ನಡುವೆ ಆನೆಗಳಿಗೆ ಮೇವು ತಿನ್ನಿಸಿ ಖುಷಿಪಡುತ್ತಾರೆ. ಆಕರ್ಷಕವಾಗಿ ನೃತ್ಯ ಮಾಡುವುದರಲ್ಲಿ ಮಕ್ಕಳು ಸೈ ಎನಿಸಿಕೊಂಡಿದ್ದಾರೆ. 'ಜಕ್ಕಣಕ ಜಕ್ಕಣಕ...' ಇನ್ನಿತರ ಹಾಡಿಗೆ ಹೆಜ್ಜೆ ಹಾಕುತ್ತಾರೆ. ಶಿಕ್ಷಕರೂ ಜೊತೆಗೂಡಿ ಮಕ್ಕಳಿಗೆ ಹೇಳಿಕೊಡುವ ಮೂಲಕ ಅವರನ್ನು ಉತ್ತೇಜಿಸುತ್ತಾರೆ. ಒಟ್ಟಾರೆ 'ತಾತ್ಕಾಲಿಕ ಶಾಲೆ'ಯಲ್ಲಿ ಆಟದೊಂದಿಗೆ ಪಾಠ ಕಲಿಯುತ್ತಾ ಸಂಭ್ರಮಿಸುತ್ತಿದ್ದಾರೆ.

ಮಕ್ಕಳ ಆಸಕ್ತಿ, ಕಲಿಕಾ ಪ್ರಗತಿಗೆ ಶಿಕ್ಷಕರ ಶಹಬ್ಬಾಸ್

ಶಿಕ್ಷಕರಿಂದ ಶ್ಲಾಘನೆ: ಮಕ್ಕಳ ಕಲಿಕಾ ಆಸಕ್ತಿ ಬಗ್ಗೆ ಶಿಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. '7ನೇ ತರಗತಿ ವಿದ್ಯಾರ್ಥಿ ಜಗ್ಗ, ಗಣಿತದ ಏರಿಕೆ ಕ್ರಮ ಮತ್ತು ಇಳಿಕೆ ಕ್ರಮಗಳನ್ನು, 2ನೇ ತರಗತಿಯ ಸಹನಾ ಮತ್ತು ಫರಾನ್, ಕನ್ನಡ ವರ್ಣಮಾಲೆ ಹಾಗೂ ಇಂಗ್ಲಿಷ್ ಲೆಟರ್ಸ್‌ಗಳನ್ನು ಕೇವಲ 2 ದಿನಗಳಲ್ಲಿ ಕಲಿತಿದ್ದಾರೆ. 3ನೇ ತರಗತಿಯ ಅಭಿ, ಕೃಷ್ಣ, ಗಾಯತ್ರಿ, 5ನೇ ತರಗತಿಯ ಪಲ್ಲವಿ, 6ನೇ ತರಗತಿಯ ಕಾರುಣ್ಯ, ಸಹನಾ, 7ನೇ ತರಗತಿಯ ಸುಬ್ರಮಣಿ ನಗರದ ಮಕ್ಕಳಿಗಿಂತ ವೇಗವಾಗಿ ಪಠ್ಯ ವಿಷಯ ಕಲಿತಿದ್ದಾರೆ. ಈ ಬಾರಿ ಹೆಚ್ಚು ಮಕ್ಕಳು ಹೊಸಬರಾಗಿದ್ದರೂ ಕಲಿಕೆಯಲ್ಲಿ ತುಂಬಾ ಆಸಕ್ತಿ ತೋರುತ್ತಿದ್ದಾರೆ. ಕಾಡಿನಲ್ಲೇ ಬೆಳೆದಿರುವ ಕಾರಣ ಶಾಲೆಯಲ್ಲಿ ಕೂರುವುದು ಕಷ್ಟ, ಆದರೂ ಮಕ್ಕಳಲ್ಲಿರುವ ಕಲಿಕಾ ಆಸಕ್ತಿ ನೋಡಿದರೆ ಖುಷಿಯಾಗುತ್ತದೆ' ಎಂದು ಶಿಕ್ಷಕಿ ನೂರ್ ಫಾತಿಮಾ ಶ್ಲಾಘಿಸಿದರು.

ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡಿ ತಿಂಗಳಾದರೂ ಇನ್ನೂ ಸಿಗದ ಸ್ಥಳ ನಿಯುಕ್ತಿ!

ಮೈಸೂರು, ಆ.30(ಎಸ್‌ಪಿಎನ್)–ಸಹ ಶಿಕ್ಷಕರ ಹುದ್ದೆಯಿಂದ ಮುಖ್ಯ ಶಿಕ್ಷಕರ ಹುದ್ದೆಗೆ ಕೌನ್ಸಿಲಿಂಗ್ ಮೂಲಕ ಬಡ್ತಿ ನೀಡಿ ತಿಂಗಳು ಕಳೆದರೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜಿಲ್ಲಾ ಹಂತದ ಅಧಿಕಾರಿಗಳು ಸ್ಥಳ ನಿಯುಕ್ತಿ ಆದೇಶ ನೀಡುತ್ತಿಲ್ಲ ಮೈಸೂರು ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ಸಂಘ ಆರೋಪಿಸಿದೆ.

ಮೈಸೂರು ಜಿಲ್ಲೆಯ ವಿವಿಧ ತಾಲೂಕಿನ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಸಹಶಿಕ್ಷಕರು, ಇದೀಗ ಮುಖ್ಯಶಿಕ್ಷಕರ ಹುದ್ದೆಗೆ ಆ.2 ಮತ್ತು ಆ.3ರಂದು ನಡೆಸಿದ್ದ ಕೌನ್ಸಿಲಿಂಗ್‌ನಲ್ಲಿ ಕೆಲವರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡಲು ಸ್ಥಳ ಆಯ್ಕೆಗೆ ಅವಕಾಶ ನೀಡಲಾಗಿತ್ತು.

ಕೌನ್ಸಿಲಿಂಗ್‌ನಲ್ಲಿ ಬಡ್ತಿ ಪಡೆದಿದ್ದ ಶಿಕ್ಷಕರಲ್ಲಿ ಬಹುತೇಕ ನಿವೃತ್ತಿ ಅಂಚಿನಲ್ಲಿದ್ದು, ಈ ತಿಂಗಳ ಅಂತ್ಯಕ್ಕೆ ಬಡ್ತಿ ಪಡೆದ ಹಲವರು ಬಡ್ತಿ ಪಡೆಯದೇ ನಿವೃತ್ತಿ ಹೊಂದುತ್ತಿದ್ದಾರೆ. ಅಂತಹ ಶಿಕ್ಷಕರಿಗೆ ವೃತ್ತಿಯಲ್ಲಿ ಒಮ್ಮೆ ಸಿಗುವ ಬಡ್ತಿಗೂ ಆದೇಶ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯ ಬಹುತೇಕ ಶಾಲೆಗಳಲ್ಲಿ ಪಠ್ಯ ಜೊತೆಗೆ ಪ್ರಭಾರ ಮುಖ್ಯಶಿಕ್ಷಕರಾಗಿ ಕೆಲಸ ಮಾಡುತ್ತಿದ್ದು, ಈ ಶಿಕ್ಷಕರಿಗೆ ಕಾರ್ಯ ಒತ್ತಡ ಹೆಚ್ಚಾಗಿದೆ. ಹಾಗಾಗಿ ಈ ಕೂಡಲೇ ಬಡ್ತಿ ಹೊಂದಿದ ಶಿಕ್ಷಕರಿಗೆ ಸ್ಥಳ ನಿಯುಕ್ತಿ ಆದೇಶ ನೀಡಲು ಶಾಲಾ ಶಿಕ್ಷಣ ಇಲಾಖೆ ಆಯುಕ್ತರು, ಸಚಿವರು ಗಮನಹರಿಸುವಂತೆ ಒತ್ತಾಯಿಸಿ ಡಿಡಿಪಿಐ ಮೂಲಕ ಎಂದು ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಹಾಲಿನ ದರ ಪ್ರತಿ ಲೀಟರ್‌ಗೆ 3 ರೂ. ಹೆಚ್ಚಳಕ್ಕೆ ಪ್ರಸ್ತಾವ


ಬೆಂಗಳೂರು: ಪ್ರತಿ ಲೀಟರ್‌ಗೆ ಹಾಲಿನ ದರ 3 ರೂಪಾಯಿ ಹೆಚ್ಚಿಸುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಪ್ರಸ್ತಾವ ಸಲ್ಲಿಸಿದೆ.


15 ಹಾಲು ಒಕ್ಕೂಟಗಳು ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿವೆ. ಕಳೆದ ಮೂರು ವರ್ಷಗಳ ಹಿಂದೆ ಸರ್ಕಾರ ಹಾಲಿನ ದರ ಪ್ರತಿ ಲೀಟರ್‌ಗೆ 2 ರೂ. ಏರಿಕೆ ಮಾಡಿತ್ತು. ಬಳಿಕ ಸರ್ಕಾರ ಹಾಲಿನ ದರವನ್ನು ಏರಿಕೆ ಮಾಡಲೇ ಇಲ್ಲ. ಹಲವು ಬಾರಿ ಸರ್ಕಾರಕ್ಕೆ ದರ ಏರಿಕೆ ಪ್ರಸ್ತಾವ ಸಲ್ಲಿಸಿದ್ದರೂ ಕ್ರಮ ಕೈಗೊಂಡಿರಲಿಲ್ಲ. ಆದರೆ ಈ ಬಾರಿ ದರ ಏರಿಕೆ ಮಾಡಲೇಬೇಕು ಎಂದು ಕೆಎಂಎಫ್ ಒತ್ತಾಯಿಸಿದೆ. ಈಗ ಲೀಟರ್‌ಗೆ 37 ರೂಪಾಯಿ ನೀಡುತ್ತಿದ್ದಾರೆ. 3 ರೂಪಾಯಿ ದರ ಏರಿಕೆ ಮಾಡಿದರೆ, 40 ರೂಪಾಯಿ ಏರಿಕೆ ಆಗಲಿದೆ. ಬೇರೆ ರಾಜ್ಯಗಳಲ್ಲಿ ಹೆಚ್ಚಿನ ಬೆಲೆಗೆ ಹಾಲು ಮಾರಾಟ ಮಾಡುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಕೆಎಂಎಫ್‌ನಿಂದ ಕಡಿಮೆ ಬೆಲೆಗೆ ಹಾಲು ಮಾರಾಟ ಮಾಡಲಾಗುತ್ತಿದೆ. ಹೀಗಾಗಿ ದರ ಏರಿಕೆ ಪ್ರಸ್ತಾವವನ್ನು ಸರ್ಕಾರದ ಮುಂದಿಡಲಾಗಿದೆ.


ಸರ್ಕಾರ ದರ ಏರಿಕೆ ಮಾಡದಿದ್ದರೆ ಪ್ರತಿಭಟನೆ ಮಾಡಲು ಹಾಲು ಒಕ್ಕೂಟದವರು ಚಿಂತನೆ ನಡೆಸಿದ್ದಾರೆ. ಬೆಲೆ ಏರಿಕೆ ಮಧ್ಯೆ ಹಾಲು ಉತ್ಪಾದನೆ, ಹೈನುಗಾರಿಕೆ ಕಷ್ಟ ಆಗುತ್ತಿದೆ. ಉಳಿತಾಯ ಮಾಡುವುದಕ್ಕೆ ಸಾಧ್ಯ ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹಾಲಿನ ದರ ಏರಿಕೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎನ್ನಲಾಗಿದೆ.

ಮೈಸೂರು–ಬೆಂಗಳೂರು ಬಸ್ ಸಂಚಾರ ಪುನಾರಂಭ


ಮೈಸೂರು,ಆ.30–ಮೈಸೂರು–ಬೆಂಗಳೂರು ನಡುವೆ ಬಸ್ ಸಂಚಾರ ಪುನಾರಂಭ ಗೊಂಡಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ಮೈಸೂರು–ಬೆಂಗಳೂರು ನಡುವಿನ ಮಂಡ್ಯ, ಚನ್ನಪಟ್ಟಣ, ರಾಮನಗರ, ಬಿಡದಿ ಬಳಿ ಭಾರೀ ಮಳೆಯಿಂದ ಹೊಸದಾಗಿ ನಿರ್ಮಾಣವಾಗುತ್ತಿರುವ ದಶಪಥ ಹೆದ್ದಾರಿ ಜಲಾವೃತ ಗೊಂಡಿದ್ದ ಹಿನ್ನೆಲೆ ಬಸ್ ಸಂಚಾರದ ಮಾರ್ಗ ಬದಲಾವಣೆ ಮಾಡಲಾಗಿತ್ತು. ಮಂಗಳವಾರ ಮಳೆ ಅಬ್ಬರ ಕಡಿಮೆಯಾಗಿ ನೀರಿನ ಪ್ರಮಾಣ ತಗ್ಗಿದ ಹಿನ್ನೆಲೆಯಲ್ಲಿ ಬಸ್ ಸಂಚಾರ ಪುನಾರಂಭವಾಗಿದೆ

























ಕೊಡಗಲ್ಲಿ ಹಶೀಶ್ ಆಯಿಲ್ ಮಾದಕವಸ್ತು ಮಾರಾಟ ಜಾಲ ಪತ್ತೆ

ಭಾಗಮಂಡಲ ಪೊಲೀಸರಿಂದ ಕೇರಳದ ಮೂವರ ಬಂಧನ

- ಗಡಿಪಾರು ಆರೋಪಿ ಸಹ ಭಾಗಿ
- ಕಾರಿನ ಎರಡು ನಂಬರ್ ಪ್ಲೇಟ್ ಪತ್ತೆ
- 10 ಲಕ್ಷ ರೂ. ಮೌಲ್ಯದ ಮಾದಕವಸ್ತು ವಶ





ಮಡಿಕೇರಿ, ಆ.30– ಕೊಡಗು ಜಿಲ್ಲೆಯಲ್ಲಿ ಹಶೀಶ್ ಆಯಿಲ್(ಗಾಂಜಾದಿಂದ ತಯಾರಿಸಲಾದ ಅಂಟು ಮಾದರಿಯ ಮಾದಕ ವಸ್ತು) ಮಾರಾಟ ಜಾಲ ಬಯಲಿಗೆಳೆಯುವಲ್ಲಿ ಭಾಗಮಂಡಲ ಪೊಲೀಸರು ಯಶಸ್ವಿಯಾಗಿದ್ದು, ಕೇರಳ ಮೂಲದ ಮೂವರು ಆರೋಪಿಗಳನ್ನು ಬಂಧಿಸಿ, ಅವರ ಬಳಿ ಇದ್ದ 10 ಲಕ್ಷ ರೂ. ಮೌಲ್ಯದ 1 ಕೆ.ಜಿ 160 ಗ್ರಾಂ ಹಶೀಶ್ ಆಯಿಲ್ ಅನ್ನು ವಶಪಡಿಸಿಕೊಂಡಿದ್ದಾರೆ.

ಕೇರಳ ರಾಜ್ಯದ ಕಾಸರಗೋಡುವಿನ ಅಹಮದ್ ಕಬೀರ್(37), ಕಾಂಞಂಗಾಡ್ ಮೂಲದ ಅಬ್ದುಲ್ ಖಾದರ್(27) ಹಾಗೂ ಮಹಮದ್ ಮುಜಮಿಲ್(27) ಬಂಧಿತ ಆರೋಪಿಗಳು. ಆ.29ರಂದು ಕೇರಳ ಕಡೆಯಿಂದ ಕರಿಕೆ ಮಾರ್ಗವಾಗಿ ತಾವೂರು ಕಡೆಗೆ ಮಾರುತಿ ಸುಜುಕಿ ಸೆಲೆರಿಯೋ ಕಾರು (ಕೆಎಲ್.33–ಎಫ್6825) ತೆರಳುತ್ತಿತ್ತು. ಈ ಸಂದರ್ಭ ಕಾರಿನಲ್ಲಿದ್ದ ವ್ಯಕ್ತಿಗಳು ಅನುಮಾನಾಸ್ಪದವಾಗಿ ವರ್ತಿಸುತ್ತಿರುವ ಬಗ್ಗೆ ಭಾಗಮಂಡಲ ಪೊಲೀಸರಿಗೆ ಮಾಹಿತಿ ಲಭಿಸಿತು. ಈ ಮಾಹಿತಿ ಆಧರಿಸಿ ಕಾರ್ಯಪ್ರವೃತ್ತರಾದ ಪೊಲೀಸರು ಕಾರಿನಲ್ಲಿದ್ದವರನ್ನು ವಿಚಾರಿಸಿ ಕಾರಿನ ತಪಾಸಣೆ ನಡೆಸಿದರು.

ಈ ವೇಳೆ ಕಾರಿನ ಡಿಕ್ಕಿಯಲ್ಲಿ ಕೆಎ.19–ಎಂ.ಹೆಚ್.2310 ಸಂಖ್ಯೆಯ 2 ನಂಬರ್ ಪ್ಲೇಟ್‌ಗಳು ಪತ್ತೆಯಾಗಿದೆ. ಮಾತ್ರವಲ್ಲದೇ ಪ್ಲಾಸ್ಟಿಕ್ ಡಬ್ಬದ ಒಳಭಾಗ ಕಪ್ಪು ಬಣ್ಣದ ಅಂಟು ಮಾದರಿಯ ವಸ್ತು ಕಂಡು ಬಂದಿದೆ. ಈ ಬಗ್ಗೆ ಕಾರಿನ ಚಾಲಕನನ್ನು ವಿಚಾರಿಸಿದ ಸಂದರ್ಭ ಹಶೀಶ್ ಎಂಬ ಮಾದಕ ವಸ್ತುವಾಗಿದ್ದು, ಗಿರಾಕಿಗಳಿಗೆ ಮಾರಾಟ ಮಾಡುವ ಸಲುವಾಗಿ ಗೆಳೆಯರ ಜೊತೆ ಬಂದಿರುವುದಾಗಿ ಮಾಹಿತಿ ನೀಡಿದ್ದಾನೆ. ಈ ಸಂದರ್ಭ ಸ್ಥಳದಲ್ಲೇ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಘಟನೆ ಕುರಿತು ಭಾಗಮಂಡಲ ಪೊಲೀಸ್ ಠಾಣೆಯಲ್ಲಿ ಎನ್.ಡಿ.ಪಿ.ಎಸ್ ಕಾಯಿದೆ ಅಡಿಯಲ್ಲಿ 3 ಮಂದಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಗಡಿಪಾರು ಆರೋಪಿ: ಆಂಧ್ರಪ್ರದೇಶದ ಗುಂಟೂರಿನಿಂದ ಮಾದಕ ದ್ರವ್ಯ ತಂದಿರುವುದಾಗಿ ವಿಚಾರಣೆ ವೇಳೆ ಆರೋಪಿಗಳು ಹೇಳಿಕೆ ನೀಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಮಲ್ಚೀರ ಅಯ್ಯಪ್ಪ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಅಹಮದ್ ಕಬೀರ್ ವಿರುದ್ಧ ಈ ಹಿಂದೆಯೇ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವಾಹನ ಕಳವು ಪ್ರಕರಣ ದಾಖಲಾಗಿದೆ. ಕೇರಳದ ವಿವಿಧ ಪೊಲೀಸ್ ಠಾಣೆಗಳಲ್ಲಿ ವಾಹನ ಕಳವು, ದರೋಡೆ ಹಾಗೂ ಹನಿಟ್ರ್ಯಾಪ್ ಪ್ರಕರಣಗಳಲ್ಲಿ ಈತ ಭಾಗಿಯಾಗಿದ್ದಾನೆ. ಈತನನ್ನು ಬೇಕಲ್ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಗಡಿಪಾರು ಮಾಡಲಾಗಿದ್ದು, ಪ್ರಸ್ತುತ ತಲೆಮರೆಸಿಕೊಂಡ ಆರೋಪಿಯಾಗಿದ್ದ ಎಂದು ಅವರು ವಿವರಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ ಮಾರ್ಗದರ್ಶನದಲ್ಲಿ ಮಡಿಕೇರಿ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ನಿರ್ದೇಶನದಂತೆ ಮಡಿಕೇರಿ ಗ್ರಾಮಾಂತರ ಠಾಣೆ ವೃತ್ತನಿರೀಕ್ಷಕ ಅನೂಪ್ ಮಾದಪ್ಪ, ಭಾಗಮಂಡಲ ಪೊಲೀಸ್ ಠಾಣಾಧಿಕಾರಿ ಪ್ರಿಯಾಂಕ, ಎಎಸ್‌ಐ ಬೆಳ್ಳಿಯಪ್ಪ, ಸಿಬ್ಬಂದಿಗಳಾದ ಇಬ್ರಾಹಿಂ, ಬಿ.ಸಿ. ಮಹೇಶ್, ರಾಮಲಿಂಗ ಶೇಗುಣಸಿ, ಮಹದೇವಸ್ವಾಮಿ, ಪುನೀತ್ ಕುಮಾರ್, ಸುರೇಶ್ ಕುಮಾರ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ದೆಹಲಿಯಲ್ಲಿ ಕೊಡಗಿನ ವ್ಯಕ್ತಿ ಹೃದಯಾಘಾತದಿಂದ ನಿಧನ



ನಾಪೋಕ್ಲು, ಆ.30– ವಿರಾಜಪೇಟೆ ತಾಲೂಕು ಕಂಡಂಗಲಾ ಗ್ರಾಮದ ಮೇಚಿಯಂಡ ಕಂಠಿ ಕಾವೇರಪ್ಪ ಅವರ ದ್ವಿತೀಯ ಪುತ್ರ ಕರುಣ್ ಗಣಪತಿ (38) ಅವರು ದೆಹಲಿಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ತಂದೆ, ತಾಯಿ, ಪತ್ನಿ ಹಾಗೂ ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ (ಸೆ.1) ಸ್ವಗ್ರಾಮ ಕಂಡಂಗಾಳದಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐ. ತಿಮ್ಮಯ್ಯ

ಗುಡ್ಡೆಹೊಸೂರು, ಆ.30– ಗುಡ್ಡೆಹೊಸೂರು ಗ್ರಾಮದ ನಿವಾಸಿ ಐಮುಡಿಯಂಡ ತಿಮ್ಮಯ್ಯ (80) ಅವರು ಮಂಗಳವಾರ ನಿಧನರಾದರು, ಅವರು ಪತ್ನಿ, ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಬುಧವಾರ ಬಸವನಹಳ್ಳಿ ಗ್ರಾಮದ ಅವರ ತೋಟದಲ್ಲಿ ನಡೆಯಲಿದೆ.

ನಾಗೇಶ್



ಸೋಮವಾರಪೇಟೆ, ಆ.30–ಇಲ್ಲಿನ ಮಹದೇಶ್ವರ ಬ್ಲಾಕಿನ ದಿ. ನಂಜುಂಡಯ್ಯ ಅವರ ಪುತ್ರ ವಿ.ಎನ್.ನಾಗೇಶ್(53) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಸೇರಿದಂತೆ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕರ್ಕಳ್ಳಿಯ ರುದ್ರಭೂಮಿಯಲ್ಲಿ ಮಂಗಳವಾರ ನಡೆಯಿತು.

ನನ್ನ ಸಾವಿಗೆ ಪ್ರಿಯಕರನೇ ಕಾರಣ ಎಂದು
ಡೆತ್‌ನೋಟ್ ಬರೆದಿಟ್ಟು ಯುವತಿ ಆತ್ಮಹತ್ಯೆ



ಕುಶಾಲನಗರ, ಆ.30– ತನ್ನ ಸಾವಿಗೆ ಪ್ರಿಯಕರನೇ ಕಾರಣ ಎಂದು ಡೆತ್‌ನೋಟ್ ಬರೆದಿಟ್ಟು ಯುವತಿಯೊಬ್ಬಳು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಸಮೀಪದ ಮುಳ್ಳುಸೋಗೆ ಗ್ರಾಪಂ ವ್ಯಾಪ್ತಿಯ ಮಾರುತಿ ಬಡಾವಣೆಯಲ್ಲಿ ನಡೆದಿದೆ.

ಬಡಾವಣೆಯ ನಿವಾಸಿ ಕಾಂತರಾಜು ಅವರ ಸಾಕು ಪುತ್ರಿ (ಪತ್ನಿ ಎಲಿಜಬೆತ್ ಸಹೋದರಿ ಪುತ್ರಿ) ಲ್ಯಾನ್ಸಿ (21) ಆತ್ಮಹತ್ಯೆಗೆ ಶರಣಾದ ದುರ್ದೈವಿ. ಯುವತಿ ಲ್ಯಾನ್ಸಿ ಹಾಗೂ ಗ್ರಾಪಂ ಅಧ್ಯಕ್ಷರ ಪುತ್ರ ಪರಸ್ಪರ ಪ್ರೇಮಿಸುತ್ತಿದ್ದರು ಎನ್ನಲಾಗಿದೆ. ಯುವಕ ಕೂಡ ಲ್ಯಾನ್ಸಿಯನ್ನು ವಿವಾಹವಾಗುವುದಾಗಿ ಭರವಸೆ ನೀಡಿದ್ದನಾದರೂ, ವಿಳಂಬ ಮಾಡುತ್ತಿದ್ದ. ಇದರಿಂದ ಮನನೊಂದ ಯುವತಿ ಸೋಮವಾರ ಸಂಜೆಯೇ ಆತ್ಮಹತ್ಯೆ ಮಾಡಿಕೊಂಡಿದ್ದು, ಸಾವಿಗೆ ಪ್ರಿಯಕರ ಕಾರಣ ಎಂದು ಡೆತ್‌ನೋಟ್ ಬರೆದಿದ್ದು, ಆತನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಾಂತರಾಜು ಕುಶಾಲನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅದ್ದೂರಿ ಮೆರವಣಿಗೆ ಮೂಲಕ ಆಗಮಿಸಿದ ಗೌರಮ್ಮ

ಮುತ್ತೈದೆಯರಿಂದ ಬಾಗಿನ ಸಮರ್ಪಣೆ



ವಿರಾಜಪೇಟೆ, ಆ.30– ಗೌರಿ–ಗಣೇಶ ಹಬ್ಬದ ಅಂಗವಾಗಿ ಮೊದಲ ದಿನವಾರ ಮಂಗಳವಾರ ಮಂಗಳ ಗೌರಿಯನ್ನು ಅತ್ಯಂತ ವಿಜೃಂಭಣೆಯಿಂದ ಬರಮಾಡಿಕೊಳ್ಳಲಾಯಿತು.

ಶ್ರೀ ಬಸವೇಶ್ವರ ದೇವಸ್ಥಾನದ ಗೌರಿ ಗಣೇಶ ಉತ್ಸವ ಸಮಿತಿ ವತಿಯಿಂದ ವರ್ಷಪ್ರತಿ ಆಚರಿಸಿಕೊಂಡು ಬರುತ್ತಿರುವಂತೆಯೇ ಇಂದು ಗೌರಮ್ಮನನ್ನು ವೈಭವದ ಮೆರವಣಿಗೆ ಮೂಲಕ ಭಕ್ತಿ ಪೂರ್ವಕವಾಗಿ ಪ್ರತಿಷ್ಠಾಪಿಸಲಾಯಿತು. ಗೌರಮ್ಮನಿದ್ದ ಪಲ್ಲಕ್ಕಿ ಮೆರವಣಿಗೆಯು ವಿರಾಜಪೇಟೆ ನಗರದ ದಖ್ಖನಿ ಮೊಹಲ್ಲಾ, ತೆಲುಗರ ಬೀದಿ, ಮೊಗರಗಲ್ಲಿ, ಚರ್ಚ್ ರಸ್ತೆ ದೇವಂಗಾ ಬೀದಿ, ದೊಡ್ಡಮಠ, ಮೀನುಪೇಟೆ, ಸುಣ್ಣದಬೀದಿ, ಚಿಕ್ಕಪೇಟೆ ಮೂಲಕ ಸಾಗಿತು. ಈ ವೇಳೆ ಗೌರಮ್ಮನಿಗೆ ಮುತ್ತೈದೆಯರು ಬಾಗಿನ ಅರ್ಪಿಸುವ ಮೂಲಕ ಪೂಜೆ ಸಲ್ಲಿಸಿದರು.

ನಂತರ ಪಲ್ಲಕ್ಕಿ ಗೌರಮ್ಮನ ಮೂರ್ತಿಯನ್ನು ಸಂಜೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ಇದಕ್ಕೂ ಮೊದಲು ಬೆಳಗ್ಗೆ 9 ಗಂಟೆಗೆ ನೆಲ್ಲಮಕ್ಕಡ ಮೋಹನ್ ಉತ್ತಪ್ಪ ಅವರ ಕೆರೆಯಲ್ಲಿ ಪೂಜೆ ಸಲ್ಲಿಸಿದ ಬಳಿಕ ಮೆರವಣಿಗೆ ಪ್ರಾರಂಭಗೊಂಡಿತು.

ಕೋಳಿ ಸಾಗಿಸುತ್ತಿದ್ದ ವಾಹನ ಮಗುಚಿ ಚಾಲಕ ಸಾವು

ಸಹಾಯಕನಿಗೂ ಗಾಯ



ಸುಂಟಿಕೊಪ್ಪ ಆ.30– ಕೋಳಿ ಸಾಗಾಣಿಕೆ ಮಾಡುತ್ತಿದ್ದ ಸರಕು ಸಾಗಣೆ ವಾಹನವೊಂದು ಚಾಲಕನ ನಿಯಂತ್ರಣ ಕಳೆದುಕೊಂಡು ಮಗುಚಿ ಬಿದ್ದ ಪರಿಣಾಮ ಚಾಲಕ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ವರದಿಯಾಗಿದೆ.

ಕುಶಾಲನಗರ–ಮಡಿಕೇರಿ ನಡುವಿನ ರಾಷ್ಟ್ರೀಯ ಹೆದ್ದಾರಿಯ ಕೊಡಗರಹಳ್ಳಿ ಮಾರುತಿ ನಗರ ತಿರುವಿನಲ್ಲಿ ಮಂಗಳವಾರ ಮುಂಜಾನೆ ಈ ದುರ್ಘಟನೆ ನಡೆದಿದೆ. ಮಂಗಳೂರು ಮೂಲದ ಲಾರಿ ಚಾಲಕ ನಾಗಭೂಷಣ್ ಮೃತಪಟ್ಟಿದ್ದು, ವಾಹನ ಸಹಾಯಕ ಬಿಜಯ್ ಓರಾನ್ ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ. ಮಂಗಳವಾರ ಮುಂಜಾನೆ ಮೈಸೂರಿನಿಂದ ಮಂಗಳೂರು ಕಡೆಗೆ ಈ ವಾಹನ ಸಾಗುತ್ತಿತ್ತು ಎಂದು ವಾಹನದಲ್ಲಿದ್ದ ಬಿಜಯ್ ಓರಾನ್ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಘಟನಾ ಸ್ಥಳಕ್ಕೆ ಕುಶಾಲನಗರ ಡಿವೈಎಸ್‌ಪಿ ಆರ್.ವಿ ಗಂಗಾಧರಪ್ಪ, ವೃತ್ತ ನಿರೀಕ್ಷಕ ಬಿ.ಜೆ.ಮಹೇಶ್, ಸುಂಟಿಕೊಪ್ಪ ಠಾಣಾಧಿಕಾರಿ ಮಂಜು ಭೇಟಿ ನೀಡಿ ಮಹಜರು ನಡೆಸಿದರು. ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ದಂಡ ವಸೂಲಿ

ಮಡಿಕೇರಿ, ಆ.30– ನಗರದ ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಹಾಗೂ ಕೋಟ್ಪಾ (COTPA) ಕಾಯ್ದೆ ಉಲ್ಲಂಘನೆ ಕುರಿತು ಮಂಗಳವಾರ 13 ಅಂಗಡಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಲಾಯಿತು.

ಸೆಕ್ಷನ್ 04 ಅಡಿಯಲ್ಲಿ 12 ಪ್ರಕರಣಗಳಿಗೆ 1900 ರೂ. ದಂಡ ಹಾಗೂ ಸೆಕ್ಷನ್ 60 ಅಡಿಯಲ್ಲಿ 1 ಪ್ರಕರಣಕ್ಕೆ 100 ರೂ. ದಂಡ ವಿಧಿಸಿ, ಒಟ್ಟು 14 ಪ್ರಕರಣಗಳಿಗೆ 2000 ರೂ. ದಂಡ ವಿಧಿಸಿ ಆರೋಗ್ಯ ಶಿಕ್ಷಣ ಮಾಹಿತಿಯನ್ನು ಆರೋಗ್ಯ ಇಲಾಖೆ ಅಧಿಕಾರಿಗಳು ನೀಡಿದರು.

ಸಂಗ್ರಹಣೆಯಾದ ದಂಡವನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಜಂಟಿ ಖಾತೆಗೆ ಜಮೆ ಮಾಡಲಾಯಿತು. ಅನಿರೀಕ್ಷಿತ ಭೇಟಿ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿಗಳು, ಜಿಲ್ಲಾ ಸಮಾಜ ಕಾರ್ಯಕರ್ತರು, ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಕರು ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿಗಳು ಇದ್ದರು.

ಹೊನ್ನಮ್ಮ ಕೆರೆಗೆ ಬಾಗಿನ ಅರ್ಪಿಸಿದ ಶಾಸಕ ಅಪ್ಪಚ್ಚು ರಂಜನ್



ಮಡಿಕೇರಿ, ಆ.30– ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಇತಿಹಾಸ ಪ್ರಸಿದ್ಧ ದೊಡ್ಡಮಳ್ತೆಯ ಹೊನ್ನಮ್ಮ ಕೆರೆಗೆ ಗೌರಿ–ಗಣೇಶ ಹಬ್ಬದ ಪ್ರಯುಕ್ತ ಮಂಗಳವಾರ ವಿಶೇಷ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿದರು.

ಬಳಿಕ ಮಾತನಾಡಿದ ಅವರು ಹೊನ್ನಮ್ಮನ ಕೆರೆಯೂ ಚರಿತ್ರೆಯ ಪುಟಗಳಿಗೆ ಸೇರಿದೆ. ಬಾಲ್ಯದಿಂದಲೂ ಹೊನ್ನಮ್ಮನ ಕೆರೆ ಬಗ್ಗೆ ಭಕ್ತಿಭಾವ ಹೊಂದಲಾಗಿದೆ ಎಂದರು. ಹೊನ್ನಮ್ಮನ ಕೆರೆ ಮತ್ತು ದೇವಸ್ಥಾನದ ಅಭಿವೃದ್ಧಿಗೆ ಒಂದು ಕೋಟಿ ರೂ. ಮೀಸಲಿಟ್ಟಿದ್ದೆ. ಪ್ರಸ್ತುತ ಹೊನ್ನಮ್ಮನ ಕೆರೆಯು ಪ್ರಸಿದ್ಧ ಧಾರ್ಮಿಕ ಹಾಗೂ ಪ್ರವಾಸಿ ಕೇಂದ್ರವಾಗಿದೆ. ಸ್ಥಳೀಯ ಗ್ರಾಮಸ್ಥರ ಅಭಿಪ್ರಾಯ ಗಳನ್ನು ಪಡೆದು ಮುಂದಿನ ದಿನಗಳಲ್ಲಿ ಪ್ರವಾಸೋದ್ಯಮಕ್ಕೆ ಒತ್ತು ನೀಡುವ ಕೆಲಸ ಮಾಡಲಾಗುತ್ತದೆ ಎಂದರು.

ಮುಂದುವರೆದ ಮಳೆ; ಯಳಂದೂರು, ಕೊಳ್ಳೇಗಾಲದಲ್ಲಿ ಭಾರೀ ಅವಾಂತರ

ಮಾಂಬಳ್ಳಿ ಪೊಲೀಸ್ ಠಾಣೆ, ಆಸ್ಪತ್ರೆ, ಜಮೀನುಗಳು ಸೇರಿದಂತೆ ಹಲವು ಗ್ರಾಮಗಳು ಜಲಾವೃತ



ಮುಡಿಗುಂಡ ಸಮೀಪದ ದೇವಾಲಯ ಜಲಾವೃತ



ಬೂದಿತಿಟ್ಟು ಬಸ್ ನಿಲ್ದಾಣ ನೀರಿನಿಂದ ಮುಳುಗಿರುವುದು.



ಜಲಾವೃತಗೊಂಡ ಮಾಂಬಳ್ಳಿ ಪೊಲೀಸ್ ಠಾಣೆ.

ಯಳಂದೂರು/ಕೊಳ್ಳೇಗಾಲ, ಆ.30–ಜಿಲ್ಲೆಯಲ್ಲಿ ಕಳೆದ ಕೆಲ ದಿನಗಳಿಂದ ಸುರಿಯುತ್ತಿದ್ದ ಮಳೆ ಮಂಗಳವಾರ ಕೊಂಚ ತಗ್ಗಿದ್ದು, ಕೊಳ್ಳೇಗಾಲ ಹಾಗೂ ಯಳಂದೂರಿನಲ್ಲಿ ಮಾತ್ರ ಮುಂದುವರೆದಿದೆ. ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಗ್ಗೆವರೆಗೂ ಮಳೆ ಸುರಿದ ಪರಿಣಾಮ ಎರಡೂ ತಾಲೂಕುಗಳಲ್ಲಿ ಭಾರೀ ಅವಾಂತರ ಸೃಷ್ಟಿಯಾಗಿದೆ.

ಯಳಂದೂರು ತಾಲೂಕಿನಾದ್ಯಂತ ಮಳೆ ಆರ್ಭಟ ಹೆಚ್ಚಾಗಿದ್ದು, ಸುವರ್ಣಾವತಿ ನದಿ ಉಕ್ಕಿ ಹರಿಯುತ್ತಿದೆ. ಸುವರ್ಣಾವತಿ ಜಲಾಶಯದ ಹೆಚ್ಚುವರಿ ನೀರಿನಿಂದ ಎಲ್ಲೆಲ್ಲೂ ಜಲದಿಗ್ಬಂಧನ ಏರ್ಪಡುತ್ತಿದೆ. ಸತತ ಮಳೆಯಿಂದ ಕೆರೆ–ಕಟ್ಟೆಗಳು ತುಂಬಿ ಕೋಡಿ ಬಿದ್ದಿದೆ. ಮೂರು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ಯಳಂದೂರು ತಾಲೂಕು ಭಾಗಶಃ ಮುಳುಗಿದೆ.

ಒಡೆದ ಕೆರೆ ಏರಿ: ಭಾರೀ ಮಳೆಯಿಂದ ಶನಿವಾರ ಯಳಂದೂರು ತಾಲೂಕಿನ ಯರಗಂಬಳ್ಳಿ ಬಳಿಯ ಉಳುಗೆರೆ ಕೆರೆ ಏರಿ ಒಡೆದು ನೂರಾರು ಎಕರೆ ಕೃಷಿ ಪ್ರದೇಶಕ್ಕೆ ನೀರು ನುಗ್ಗಿ ಅಪಾರ ಹಾನಿ ಸಂಭವಿಸಿತ್ತು. ಈ ಅವಾಂತರದ ನಡುವೆಯೇ ಗುಂಬಳ್ಳಿ ಗ್ರಾಮದ ಕೆರೆ ಏರಿ ಸಹ ಮಂಗಳವಾರ ಒಡೆದಿದ್ದು, ಅಪಾರ ಹಾನಿ ಉಂಟಾಗಿದೆ. ನೂರಾರು ಎಕರೆ ಫಸಲು ಕೊಚ್ಚಿಹೋಗಿದ್ದು, ತಗ್ಗು ಪ್ರದೇಶಗಳ ನೂರಾರು ಮನೆಗಳು ಜಲಾವೃತವಾಗಿದೆ.

ಪೊಲೀಸ್ ಠಾಣೆ, ಆಸ್ಪತ್ರೆ ಜಲಾವೃತ: ಮಳೆ ನಡುವೆಯೇ ಸುವರ್ಣಾವತಿ ನದಿ ನೀರಿನ ಮಟ್ಟ ಮಂಗಳವಾರ ಬೆಳಗ್ಗೆ ಏಕಾಏಕಿ ನೀರು ಏರಿಕೆಯಾಗಿದ್ದರಿಂದ ತಾಲೂಕಿನ ಮಾಂಬಳ್ಳಿ ಗ್ರಾಮದ ಪೊಲೀಸ್ ಠಾಣೆಗೆ ನೀರು ನುಗ್ಗಿತು. ಸದ್ಯ ಸಿಬ್ಬಂದಿಯನ್ನು ಅಗ್ನಿಶಾಮಕ ಸಿಬ್ಬಂದಿ ಬೋಟ್‌ನಲ್ಲಿ ಕರೆ ತಂದರು. ಮಾಂಬಳ್ಳಿ ಗ್ರಾಮದ ಹಲವು ಮನೆಗಳು ಜಲಾವೃತಗೊಂಡಿವೆ. ಅಲ್ಲದೆ ಸಿಲ್ಕ್‌ವೇಸ್ಟ್‌ನ ಶೆಡ್‌ನಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಸಿಲ್ಕ್ ವೇಸ್ಟ್ ನೀರಿನಲ್ಲಿ ಕೊಚ್ಚಿ ಹೋಗಿದ್ದರೆ, ಗುಂಬಳ್ಳಿ ಗ್ರಾಮದ ಕೆರೆಯ ಏರಿ ಒಡೆದಿದ್ದರ ನೀರಿನಿಂದ ಉಪ್ಪಿನಮೋಳೆ ಗ್ರಾಮದ ಬಳಿಯ ಪ್ರಾಥಮಿಕ ಆರೋಗ್ಯ ಕೇಂದ್ರ ಸಂಪೂರ್ಣ ಜಲಾವೃತವಾಗಿ, ಅಲ್ಲಿನ ಸಿಬ್ಬಂದಿ ಕೆಲಕಾಲ ಜಲದಿಗ್ಬಂಧನಕ್ಕೊಳಗಾದರು. ಸಂಪೂರ್ಣವಾಗಿ ಆರೋಗ್ಯ ಸೇವೆ ಸ್ಥಗಿತಗೊಳಿಸಲಾಗಿತ್ತು.

ಪ್ರವಾಹ ಸೃಷ್ಟಿ: ಇದಲ್ಲದೆ ಪ್ರಸಿದ್ಧ ಕೃಷ್ಣಯ್ಯನ ಕಟ್ಟೆ (ಹೊಸಹಳ್ಳಿ ಕೆರೆ) ಕೋಡಿ ಬಿದ್ದಿದ್ದು, ಕಂದಹಳ್ಳಿ, ಅಂಬಳೆ, ವೈ.ಕೆ.ಮೋಳೆ, ಗಣಿಗನೂರು, ಚಾಮಲಾಪುರ, ಯರಿಯೂರು, ಅಗರ, ಮಾಂಬಳ್ಳಿ, ಮದ್ದೂರು, ಸೇರಿದಂತೆ ಹಲವು ಗ್ರಾಮಗಳಲ್ಲಿ ಭಾರೀ ಪ್ರವಾಹ ಸೃಷ್ಟಿಯಾಗಿದೆ. ಹಲವು ಮನೆಗಳಿಗೆ ಹಾನಿಯಾಗಿದೆ.

ಕೊಳ್ಳೇಗಾಲ ವರದಿ: ಕೊಳ್ಳೇಗಾಲ ನಗರ ಹಾಗೂ ತಾಲೂಕಿನ ಹಲವೆಡೆ ಮಳೆಯಿಂದ ಸಾಕಷ್ಟು ನಷ್ಟ ಉಂಟಾಗಿದೆ. ಅಧಿಕ ಮಳೆ ಹಾಗೂ ಭರ್ತಿಯಾದ ಹೊನ್ನಹೊಳೆ ಚಾನಲ್‌ನ ಹೆಚ್ಚುವರಿ ನೀರು ಮುಡಿಗುಂಡ, ಬೆಂಡ್ರಳ್ಳಿ, ಬೂದಿತಿಟ್ಟು ಗ್ರಾಮಗಳಿಗೆ ನುಗ್ಗಿ ನೂರಾರು ಎಕರೆ ಪ್ರದೇಶ ಜಲಾವೃತಗೊಂಡಿದ್ದಲ್ಲದೆ, ಸಾರ್ವಜನಿಕರು ಸಂಚಾರಕ್ಕೂ ಪರದಾಡುವಂತಾಯಿತು.

ರಸ್ತೆ ಸಂಪರ್ಕ ಕಡಿತ: ಮಂಗಳವಾರ ಬೆಳಗ್ಗೆ ಮಳೆಗೆ ಬೂದಿತಿಟ್ಟು, ಬೆಂಡ್ರಳ್ಳಿ, ಕುಣಗಳ್ಳಿ ಗ್ರಾಮಗಳ ರಸ್ತೆಯ ಮೇಲೆ ನೀರು ಹರಿದ ಪರಿಣಾಮ ಪೊಲೀಸ್ ಇಲಾಖೆ ಮುಂಜಾಗ್ರತಾ ಕ್ರಮವಾಗಿ ಬ್ಯಾರಿಕೇಡ್ ಹಾಕಿ ರಸ್ತೆ ಸಂಚಾರ ಬಂದ್ ಮಾಡಿತ್ತು. ಅಲ್ಲದೆ ಮಾಂಬಳ್ಳಿ ಮೂಲಕವಾಗಿ ಸಂಚರಿಸುವ ಸುರಾಪುರ–ಕುಣಗಳ್ಳಿ ಸಂಪರ್ಕ ಸೇತುವೆ ಮೇಲೆ ಹೊನ್ನಹೊಳೆ ಹರಿದಿದ್ದರಿಂದ ಸಂಚಾರ ನಿಷೇಧಿಸಲಾಗಿತ್ತು.

ಹೊನ್ನಹೊಳೆಯೂ ಉಕ್ಕಿ ಹರಿಯುತ್ತಿದ್ದು, ಮುಡಿಗುಂಡ ಸಮೀಪದ ಅಯ್ಯಪ್ಪ ಸ್ವಾಮಿ, ಗಣಪತಿ–ಶಿವನ ದೇವಾಲಯ ಸಹ ಜಲಾವೃತವಾಯಿತು. ಕುಣಗಳ್ಳಿ ಸಮೀಪದ ಇಟ್ಟಿಗೆಗೂಡು, ಬೆಂಡ್ರಳ್ಳಿ ಗ್ರಾಮದ ರೈತರು ಬೆಳೆದ ಭತ್ತ, ರಾಗಿ, ಕಬ್ಬು ಇನ್ನಿತರೆ ಫಸಲಿನ ಜಮೀನುಗಳಿಗೆ ನುಗ್ಗಿದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಮಳೆಗೆ ಗೋಡೆ ಕುಸಿತ: ಸತತ ಮಳೆಗೆ ಕೊಳ್ಳೇಗಾಲ ನಗರದ ಸಂತೆ ಬೀದಿಯ ನಿವಾಸಿ ರಘುನಂದನ್ ಅವರ ಮನೆಯ ಗೋಡೆ, ಮೇಲ್ಛಾವಣಿ ಕುಸಿದು ಕುಟುಂಬಸ್ಥರು ತೊಂದರೆ ಅನುಭವಿಸಿದರು. ಸದ್ಯ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ರಘುನಂದನ್, ಪತ್ನಿ ಸೇರಿದಂತೆ ನಾಲ್ಕು ಮಕ್ಕಳು ಸೂರು ಕಳೆದುಕೊಂಡಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಕೂಡಲೇ ಸೂಕ್ತ ವ್ಯವಸ್ಥೆ ಮಾಡಿಕೊಡಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಶಾಸಕರು, ಅಧಿಕಾರಿಗಳ ತಂಡ ಭೇಟಿ.....

ಮಂಗಳವಾರ ಶಾಸಕ ಎನ್.ಮಹೇಶ್ ಯಳಂದೂರು ಪಟ್ಟಣ ಸೇರಿದಂತೆ ಮಾಂಬಳ್ಳಿ, ಬೂದಿತಿಟ್ಟು, ಗಣಿಗನೂರು ಸೇರಿದಂತೆ ಅನೇಕ ಕಡೆ ಉಪವಿಭಾಗಾಧಿಕಾರಿ ಗೀತಾ ಹುಡೇದ, ಡಿವೈಎಸ್ಪಿ ನಾಗರಾಜು, ಮುಖ್ಯಾಧಿಕಾರಿ ಮಲ್ಲೇಶ್ ನೇತೃತ್ವದಲ್ಲಿ ಜಲಾವೃತಗೊಂಡಿರುವ ಸ್ಥಳಗಳಿಗೆ ಭೇಟಿ ನೀಡಿ ಪರೀಶಿಲಿಸಿದರು. ಅಲ್ಲದೆ ಮನೆ, ಕೃಷಿ ಭೂಮಿಯಲ್ಲಿ ಫಸಲು ಕಳೆದುಕೊಂಡ ಸಂತ್ರಸ್ತರಿಗೆ ಪರಿಹಾರವನ್ನು ಶೀಘ್ರವೇ ನೀಡಬೇಕು ಎಂದು ಸೂಚಿಸಿದರಲ್ಲದೆ, ಮಳೆ ಹಾನಿ ನಿರ್ವಹಿಸಲು ಜಿಲ್ಲಾಡಳಿತ ಸಂಪೂರ್ಣ ಸಜ್ಜುಗೊಂಡಿದ್ದು, ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.



ಯಳಂದೂರು ಬಾಳೆತೋಟವೊಂದರ ಜಲಾವೃತ ದೃಶ್ಯ.

ಮನೆ ಗೋಡೆ, ಕೊಟ್ಟಿಗೆ ಕುಸಿತ



ಬೇಗೂರು, ಆ.30–ಮಂಗಳವಾರ ಸುರಿದ ಭಾರೀ ಮಳೆಗೆ ಮನೆಯ ಗೋಡೆ ಮತ್ತು ದನದ ಕೊಟ್ಟಿಗೆ ಕುಸಿದಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸುರೇಶ್ ಅವರ ಮನೆಯ ಅಡುಗೆ ಮನೆಯ ಗೋಡೆ ಕುಸಿದಿದ್ದು, ಮನೆಯಲ್ಲಿದ್ದವರೆಲ್ಲ ಹೊರಗೆ ಬಂದು ಅಪಾಯದಿಂದ ಪಾರಾಗಿದ್ದಾರೆ. ಕೆಲದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಇವರ ಮನೆ ಶಿಥಿಲವಾಗಿತ್ತು. ಮಂಗಳವಾರ ಬೆಳಗ್ಗೆ ಮನೆ ಸೇರಿದಂತೆ ಮನೆಗೆ ಹೊಂದಿಕೊಂಡಿದ್ದ ದನದ ಕೊಟ್ಟಿಗೆಯೂ ಕುಸಿದಿದ್ದು ಕೊಟ್ಟಿಗೆಯಲ್ಲಿದ್ದ ಹಸು ತೀವ್ರವಾಗಿ ಗಾಯಗೊಂಡಿದೆ. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಪರಿಹಾರ ಕಲ್ಪಿಸುವಂತೆ ಸೂರು ಕಳೆದುಕೊಂಡಿರುವ ಸಂತ್ರಸ್ತ ಕುಟುಂಬ ಆಗ್ರಹಿಸಿದೆ.

ಮಳೆ ಹಾನಿ ಪ್ರದೇಶಗಳಿಗೆ ಶಾಸಕ, ಅಧಿಕಾರಿಗಳ ಭೇಟಿ



ಸಂತ್ರಸ್ತರಿಗೆ ಪರಿಹಾರ ವಿತರಿಸಿದ ಶಾಸಕ ಪುಟ್ಟರಂಗಶೆಟ್ಟಿ

ಚಾಮರಾಜನಗರ: ತಾಲೂಕಿನಲ್ಲಿ ಭಾನುವಾರದ ಭಾರೀ ಮಳೆಗೆ ಹಲವು ಗ್ರಾಮಗಳು ಜಲಾವೃತಗೊಂಡಿದ್ದ ಪ್ರದೇಶ ಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕಿನ ಜ್ಯೋತಿಗೌಡನಪುರ, ಕರೇಮೊಳೆ, ಹುಲ್ಲೇಪುರ, ಅಮ್ಮನಪುರ ಗ್ರಾಮಗಳಿಗೆ ಭೇಟಿ ನೀಡಿ ಮಳೆಯಿಂದ ಆಗಿರುವ ಅನಾಹುತವನ್ನು ವೀಕ್ಷಿಸಿದರು. ಸಂತ್ರಸ್ತ ಕುಟುಂಬಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ 10 ಸಾವಿರ ರೂ.ಗಳ ಚೆಕ್ ಮತ್ತು ಆಹಾರ ಕಿಟ್ ಅನ್ನು ವಿತರಿಸಿದರು.

ಕಾಡಾ ಅಧ್ಯಕ್ಷರ ಕಾರ್ಯಾಚರಣೆ: ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಅವರು ಕಾಗಲವಾಡಿ ಮೋಳೆ, ಕೂಡ್ಲೂರು, ಕರಿಯನಕಟ್ಟೆ ಸೇರಿದಂತೆ ಇನ್ನಿತರ ಅನೇಕ ಗ್ರಾಮಗಳಿಗೆ ಭೇಟಿ ನೀಡಿ ವೀಕ್ಷಿಸಿದರು. ಮಳೆಯಿಂದ ಮನೆ ಕಳೆದುಕೊಂಡ ಸಂತ್ರಸ್ತರನ್ನು ಕೂಡಲೇ ಸ್ಥಳಾಂತರಿಸುವಂತೆ ಹಾಗೂ ಅವರಿಗೆ ತಿಂಡಿ, ಊಟದ ವ್ಯವಸ್ಥೆ ಕಲ್ಪಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಿದರು.

ತಾಲೂಕಿನಲ್ಲಿ ಜಲಾವೃತಗೊಂಡಿದ್ದ ಪ್ರದೇಶದಲ್ಲಿ ಮಂಗಳವಾರ ನೀರನ್ನು ತೆರವುಗೊಳಿಸುವ ಕಾರ್ಯ ನಡೆಯಿತು. ಜಮೀನುಗಳಲ್ಲಿ ನೀರು ನಿಂತಿರುವುದರಿಂದ ಫಸಲು ಬಹುತೇಕ ನಾಶವಾಗಿವೆ. ರೈತರು ಜಮೀನಿಗಳಿಗೆ ಕಾಲಿಡಲಾಗದ ಸ್ಥಿತಿ ಇದೆ.

ಪರಿಹಾರ ಕಾರ್ಯ ವೀಕ್ಷಿಸಿದ ಸಿಇಓ: ಮಳೆ ಹಾನಿ ಹಾಗೂ ಪ್ರವಾಹ ಪೀಡಿತ ವಿವಿಧ ಪ್ರದೇಶಗಳಿಗೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಇಂದು ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಪರಿಹಾರ ಕಾರ್ಯಾಚರಣೆ ವೀಕ್ಷಿಸಿದರು.

ಯಳಂದೂರು ತಾಲೂಕಿನ ಮದ್ದೂರು, ಅಗರ ಮಾಂಬಳ್ಳಿ, ಚಾಮರಾಜನಗರ ತಾಲೂಕಿನ ಬೂದಿತಿಟ್ಟು, ಕೊಳ್ಳೇಗಾಲ ತಾಲೂಕಿನ ಮುಡಿಗುಂಡ ಮುಡಿಗುಂಡ ಬಳಿ ಜಲಾವೃತವಾಗಿರುವ ಭಾಗಗಳಿಗೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಜನರ ಅಹವಾಲು ಆಲಿಸಿದರು.

ಜಲಾವೃತವಾಗಿದ್ದ ಪ್ರದೇಶಗಳಲ್ಲಿನ ನೀರು ತೆರವು, ಇತರೆ ಕಾರ್ಯಗಳನ್ನು ಪರಿಶೀಲಿಸಿ ಅಗತ್ಯ ಸೂಚನೆಗಳನ್ನು ನೀಡಿದರು.

ಜಿಪಂ ಸಹಾಯಕ ಯೋಜನಾಧಿಕಾರಿ ಪ್ರೇಮ್‌ಕುಮಾರ್, ಆಯಾ ಭಾಗದ ಪಿಡಿಓಗಳು, ಇತರೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಗೌರಿ ಹಬ್ಬ ಸಂಭ್ರಮದ ಆಚರಣೆ

ಗಣೇಶನ ಪ್ರತಿಷ್ಠಾಪಿಸಲು ಸಕಲ ಸಿದ್ಧತೆ





ಚಾಮರಾಜನಗರ, ಆ.30–ಜಿಲ್ಲೆಯಾದ್ಯಂತ ಕಳೆದೆರಡು ದಿನಗಳಿಂದ ಸುರಿಯುತ್ತಿದ್ದ ಮಳೆ ಮಂಗಳವಾರ ಸ್ವಲ್ಪ ಬಿಡುವು ನೀಡಿತ್ತು. ಹೀಗಾಗಿ ಜಿಲ್ಲೆಯ ಜನರು ಸಡಗರ–ಸಂಭ್ರಮದಿಂದ ಗೌರಿ ಹಬ್ಬ ಆಚರಿಸಿದರು. ಬುಧವಾರ ಗಣೇಶ ಹಬ್ಬ ಆಚರಣೆಗೆ ಸಿದ್ಧತೆ ನಡೆದಿದೆ.

ಜಿಲ್ಲಾದ್ಯಂತ ಭಾನುವಾರ ಸುರಿದ ಮಳೆಗೆ ಜನರು ತತ್ತರಿಸಿದ್ದರು. ಮಂಗಳವಾರ ಮುಂಜಾನೆಯಿಂದ ಮೋಡ ಕವಿದ ವಾತಾವರಣ ಕಂಡು ಬಂದರೂ ಮಳೆ ಬೀಳಲಿಲ್ಲ. ಮಧ್ಯಾಹ್ನ ವೇಳೆಗೆ ಬಿಸಿಲು ಬಂದಿತು.

ಸಂಭ್ರಮದ ಗೌರಿ ಹಬ್ಬ: ಜಿಲ್ಲಾದ್ಯಂತ ಮಂಗಳವಾರ ಗೌರಿ ಹಬ್ಬವನ್ನು ದೇವಾಲಯಗಳು ಸೇರಿದಂತೆ ಅಲ್ಲಲ್ಲಿ ಪ್ರತಿಷ್ಠಾಪಿಸಿದ್ದ ಗೌರಿ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ಬಾಗಿನ ಅರ್ಪಿಸಿದರು. ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದಲ್ಲಿರುವ ಸ್ವರ್ಣಗೌರಿ ದೇಗುಲದಲ್ಲಿ ವಿವಿಧ ಪೂಜೆ ಕೈಂಕರ್ಯದೊಂದಿಗೆ ಗೌರಿ ಪೂಜಿಸಲಾಯಿತು. ಗೌರಿ ದೇಗುಲವೇ ಗ್ರಾಮದಲ್ಲಿರುವುದರಿಂದ ಗೌರಿಯನ್ನು ಗ್ರಾಮದ ಬೇರೆಲ್ಲೂ ಪ್ರತಿಷ್ಠಾಪಿಸುವುದಿಲ್ಲ. ಅಸಂಖ್ಯಾತ ಭಕ್ತರು ದೇಗುಲಕ್ಕೆ ಆಗಮಿಸಿ, ದೇವರ ದರ್ಶನ ಪಡೆದರು.

ಇಂದು ಗಣೇಶ ಹಬ್ಬ: ಯುವಕರು ಗಣೇಶ ಹಬ್ಬವನ್ನು ಆಚರಿಸಲು ಸಿದ್ಧತೆಯಲ್ಲಿ ತೊಡಗಿದ್ದರು. ನಗರದಲ್ಲಿ ಮಾರಾಟಕ್ಕೆ ಇಡಲಾಗಿದ್ದ ಗಣೇಶಮೂರ್ತಿಯನ್ನು ಖರೀದಿಸುವ ಕಾರ್ಯದಲ್ಲಿ ಗ್ರಾಹಕರು ತೊಡಗಿದ್ದು ಕಂಡು ಬಂತು. ನಗರದ ಶ್ರೀ ವಿದ್ಯಾಗಣಪತಿ ಮಂಡಳಿಯು ಇಲ್ಲಿನ ರಥಬೀದಿಯಲ್ಲಿ ಬುಧವಾರ ಬೆಳಗ್ಗೆ 11 ಗಂಟೆಯಿಂದ 12.15ರವರೆಗೆ ಸಲ್ಲುವ ಮುಹೂರ್ತದಲ್ಲಿ ಗಣಪತಿ ಪ್ರತಿಷ್ಠಾಸಲು ಸಿದ್ಧತೆ ಕೈಗೊಂಡಿದೆ. ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲೂ ಗಣೇಶ ಹಬ್ಬ ಸಂಭ್ರಮಾಚರಣೆ ಮನೆಮಾಡಿದೆ.

ಗುಂಡ್ಲುಪೇಟೆ ವರದಿ: ಪಟ್ಟಣ ಹಾಗೂ ತಾಲೂಕಿನಾದ್ಯಂತ ಗೌರಿ ಹಬ್ಬವನ್ನು ಹೆಂಗಳೆಯರು ಶ್ರದ್ಧಾ ಭಕ್ತಿ ಮತ್ತು ಸಂಭ್ರಮ, ಸಡಗರದಿಂದ ಆಚರಣೆ ಮಾಡಿದರು. ಪಟ್ಟಣದಲ್ಲಿ ಮುಂಜಾನೆ 6ಗಂಟೆಯಿಂದಲೇ ಗೌರಿ ಗುಡಿಗೆ ತೆರಳಿ ಮಾತೆ ಗೌರಿಗೆ ವಿಶೇಷ ಪೂಜೆ ಸಲ್ಲಿಸುವುದು, ಬಾಗಿನ ಅರ್ಪಿಸುವುದು ನಿರಂತರವಾಗಿ ಸಾಗಿತು. ಈ ಸಂಖ್ಯೆ ಗಂಟೆಗಳು ಕಳೆಯುತ್ತಿದ್ದಂತೆಯೇ ಸುಮಂಗಲಿಯರು ಗೌರಿ ಪ್ರತಿಷ್ಠಾಪಿಸಿರುವ ದೇವಾಲಯ ಮತ್ತು ಮನೆಗಳಿಗೆ ತೆರಳಿ ಬಾಗಿನ ಅರ್ಪಿಸಿ, ಪೂಜೆ ಸಲ್ಲಿಸಿದರು.

ಮೂರನೇ ಪುಟದಿಂದ

ದಶಪಥ ಹೆದ್ದಾರಿ ಪುನರ್‌ವಿನ್ಯಾಸ

ಹರಿದು ಬಂದರೂ ಸರಾಗವಾಗಿ ಒಂದು ಬದಿಯಿಂದ ಇನ್ನೊಂದು ಬದಿಗೆ ಹರಿದು ಹೋಗುವಂತೆ ಮಾಡುತ್ತೇವೆ ಎಂಬ ಭರವಸೆಯನ್ನು ಗುತ್ತಿಗೆ ದಾರರು ಸರ್ಕಾರಕ್ಕೆ ನೀಡಿದ್ದಾರೆ. ಅಷ್ಟೇ ಅಲ್ಲ, ಕೆಲವೆಡೆ ರಸ್ತೆಯಲ್ಲಿರುವ ನೇರ ಉಬ್ಬು ತಗ್ಗುಗಳನ್ನು ಸರಿಪಡಿಸುವು ದಾಗಿಯೂ ತಿಳಿಸಿದ್ದಾರೆ. ಕೆಲ ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ಬೆಂಗಳೂರು–ಮೈಸೂರು ರಸ್ತೆಯ ಸಂಚಾರ ಬಂದ್ ಆಗಿದೆ. ರಸ್ತೆಯ ಕಾಮಗಾರಿಯಿಂದ ರಾಮ ನಗರ ಜಿಲ್ಲೆಯ ಕೆಲವು ಗ್ರಾಮಗಳು ಜಲಾವೃತಗೊಂಡಿದ್ದವು.

ಆ ಕ್ಷೇತ್ರವನ್ನು ಪ್ರತಿನಿಧಿಸುವ ಹೆಚ್.ಡಿ. ಕುಮಾರಸ್ವಾಮಿ ಅವರ ಆಹ್ವಾನದ ಮೇರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅವರ ಸಂಪುಟ ಸಹೋದ್ಯೋಗಿಗಳು ಖುದ್ದಾಗಿ ಬಂದು ಅತಿವೃಷ್ಟಿಯಿಂದಾಗಿರುವ ಹಾನಿ ಮತ್ತು ರಸ್ತೆ ಕಾಮಗಾರಿಯನ್ನು ಪರಿಶೀಲನೆ ಮಾಡಿದ್ದರು. ಪರಿಶೀಲನೆ ನಂತರ ಮುಖ್ಯಮಂತ್ರಿಯವರು ಗುತ್ತಿಗೆದಾರರಿಗೆ ಕೆಲವು ಭಾಗದಲ್ಲಿ ರಸ್ತೆಯ ಪುನರ್‌ವಿನ್ಯಾಸ ಮಾಡಿ, ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕಾಮಗಾರಿ ಕೈಗೊಳ್ಳಬೇಕೆಂದು ಆದೇಶ ಮಾಡಿದ್ದರು. ಅಷ್ಟೇ ಅಲ್ಲ, ಕೇಂದ್ರ ಭೂ ಸಾರಿಗೆ ಸಚಿವ ಗಡ್ಕರಿ ಅವರು ಮೂರು ನಾಲ್ಕು ದಿನದಲ್ಲಿ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ಆ ಸಂದರ್ಭದಲ್ಲಿ ಅವರ ಜೊತೆ ಚರ್ಚೆ ಮಾಡುವುದಾಗಿ ತಿಳಿಸಿದ್ದರು. ನಿನ್ನೆ ಆದ ಅವಾಂತರದಿಂದ ಎಚ್ಚೆತ್ತ ಗುತ್ತಿಗೆದಾರರು ರಸ್ತೆಯ ಕೆಲವು ಭಾಗವನ್ನು ಪುನರ್‌ವಿನ್ಯಾಸ ಮಾಡುವುದಾಗಿ ಮತ್ತು ಮುಂದೆ ಇಂತಹ ತೊಂದರೆಯಾಗದಂತೆ ನೋಡಿಕೊಳ್ಳುವ ಭರವಸೆ ನೀಡಿದ್ದಲ್ಲದೆ, ಇನ್ನು ನಾಲ್ಕು ತಿಂಗಳಲ್ಲಿ ಈ ರಸ್ತೆಯ ಕಾಮಗಾರಿಯನ್ನು ಪೂರ್ಣಗೊಳಿಸುತ್ತಿದ್ದು, ಆ ವೇಳೆಗೆ ಈ ಸಮಸ್ಯೆ ಇರುವುದಿಲ್ಲ ಎಂಬ ಭರವಸೆಯನ್ನು ಸರ್ಕಾರಕ್ಕೆ ನೀಡಿದ್ದಾರೆ.

ನಾವೆಲ್ಲರೂ ಸೇರಿ ಸರಿಪಡಿಸೋಣ

ಬದಲು ಈಜು ಕೊಳಗಳನ್ನು ಸಂಸದ ಪ್ರತಾಪ್ ಸಿಂಹ ನಿರ್ಮಾಣ ಮಾಡಿದ್ದಾರೆ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಾಪ್ ಸಿಂಹ ಅವರು ಮಂಗಳವಾರ ರಾತ್ರಿ ತಮ್ಮ ಫೇಸ್‌ಬುಕ್ ಲೈವ್ ಮೂಲಕ ಪ್ರತಿಕ್ರಿಯಿಸಿದ್ದಾರೆ. ಈ ರಸ್ತೆಯ ಅಲೈನ್ ಮೆಂಟ್ ಅನ್ನು 2015–16ನೇ ಸಾಲಿನಲ್ಲಿಯೇ 'ಸಿಕಾನ್' ಸಂಸ್ಥೆ ಮಾಡಿದ್ದು, ಅದಕ್ಕೆ ಲೋಕೋಪಯೋಗಿ ಇಲಾಖೆ, ಅರಣ್ಯ ಇಲಾಖೆ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಪರಿಶೀಲಿಸಿ ಅನುಮತಿ ನೀಡಿವೆ. ಕೇವಲ ರಸ್ತೆಗೆ ಮಾತ್ರ ನೀರು ನುಗ್ಗಿಲ್ಲ, ರಾಮನಗರದ ದಲಿತರ ಕೇರಿ, ಮುಸ್ಲಿಮರ ಬಡಾವಣೆಗಳಿಗೂ ನೀರು ನುಗ್ಗಿದೆ. ಜೆಡಿಎಸ್, ಕಾಂಗ್ರೆಸ್ ಮತ್ತು ಸಂಸದೆ ಸುಮಲತಾ ಅಂಬರೀಷ್ ಅವರು ಕೇಳಿದ ಬೈಪಾಸ್, ರ‍್ಯಾಪ್ ಮತ್ತು ಸೇತುವೆ ಗಳನ್ನು ನಿರ್ಮಿಸಿಕೊಟ್ಟಿದ್ದೇವೆ. ಕೆಲವು ಕಡೆ ಅವೈಜ್ಞಾನಿಕವಾಗಿದೆ ಎಂದರೆ ಬದಲಾ ಯಿಸೋಣ ಎಂದರು. ಒಂದು ರಸ್ತೆ ನಿರ್ಮಾಣವಾಗುತ್ತಿದೆ ಎಂದರೆ ದೇಶ ನಿರ್ಮಾಣವಾಗುತ್ತಿದೆ ಎಂಬಂತೆ ಅದಕ್ಕೆ ಉದಾಹರಣೆಯಾಗಿ ನಮ್ಮ ಮುಂದೆ ಅಮೇರಿಕಾ ಇದೆ. ಆರೋಪ ಪ್ರತ್ಯಾರೋಪಗಳು ಬೇಡ. ನೀವು ನನಗಿಂತ ಹಿರಿಯರು, ರಾಜ ಕೀಯವಾಗಿ ಏನೇ ಇರಬಹುದು. ಆದರೆ ನಾಡಿಗಾಗಿ ಉತ್ತಮ ಕೆಲಸಗಳನ್ನು ಮಾಡಿದ್ದು, ಆರ್‌ಟಿಇ ವಿಚಾರವಾಗಿ ಮತ್ತು ರೈತರ ಸಾಲಮನ್ನಾದ ಬಗ್ಗೆ ನೀವು ದಿಟ್ಟ ನಿರ್ಧಾ ರಗಳನ್ನು ತೆಗೆದುಕೊಂಡಿದ್ದೀರಿ. ನನಗೆ ನೀವೆ ಮಾರ್ಗದರ್ಶನ ಮಾಡಿ. ಮುಂದಿನ ಇನ್ನೂ ಎರಡು ವರ್ಷಗಳು ಇದೇ ರೀತಿಯ ಮಳೆ ಕಾಣಬಹುದಾಗಿದೆ. ಪ್ರಕೃತಿ ನಮ್ಮ ವಿರುದ್ಧ ಮುನಿದಿದೆ. ಅದರಿಂದ ಸರಿಪಡಿಸುವ ಕಾರ್ಯಕ್ಕೆ ನಾವೆಲ್ಲರೂ ಒಗ್ಗೂಡಬೇಕು. ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂದು ತಿಳಿಸಿದ್ದಾರೆ.

ಭಾರೀ ಮಳೆಯಿಂದ ಅಪಾರ ಹಾನಿ

ಮತ್ತು ಸಾರ್ವಜನಿಕ ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಕಳೆದ ಎರಡು ದಿನಗಳಿಂದ 20 ಜಿಲ್ಲೆಗಳಲ್ಲಿ ಬಿದ್ದಿರುವ ಮಳೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ರೈತರ ಬೆಳೆ ನಾಶವಾಗಿದೆ. ಮಳೆ ನಿಂತ ಕೂಡಲೇ ನಮ್ಮ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಸರ್ಕಾರಕ್ಕೆ ವರದಿ ನೀಡಲಿದ್ದಾರೆ. ಈ ಮಳೆಯಿಂದ 184 ಮನೆಗಳು ಕುಸಿದಿದ್ದು, 258 ಜಾನುವಾರುಗಳು ಮೃತಪಟ್ಟಿದ್ದರೆ, ಇಬ್ಬರು ಪ್ರಾಣತೆತ್ತಿದ್ದಾರೆ. ರಾಜ್ಯದ 27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಬಿದ್ದಿದೆ. ಅತಿವೃಷ್ಟಿ ಮತ್ತು ಪ್ರವಾಹದಿಂದ 7647 ಕೋಟಿ ರೂ. ಹಾನಿ ಸಂಭವಿಸಿದೆ. ಒಂದೆರಡು ದಿನದಲ್ಲೇ ಕೇಂದ್ರಕ್ಕೆ ಪ್ರಾಥಮಿಕ ವರದಿ ಸಲ್ಲಿಸಿ, ಎನ್‌ಡಿಆರ್‌ಎಫ್ ನಿಧಿಯಿಂದ ಒಂದು ಸಾವಿರ ಕೋಟಿ ರೂ. ಅನ್ನು ತುರ್ತಾಗಿ ಬಿಡುಗಡೆ ಮಾಡುವಂತೆ ಕೋರುವುದಾಗಿ ತಿಳಿಸಿದರು. ಮಳೆ ಪೂರ್ಣವಾಗಿ ನಿಂತ ನಂತರ ಜಿಲ್ಲಾಡಳಿತ ದಿಂದ ವರದಿ ತರಿಸಿ, ಕೇಂದ್ರಕ್ಕೆ ಮತ್ತೊಂದು ವರದಿ ಸಲ್ಲಿಸುವುದಾಗಿಯು ಹೇಳಿದರು.

ಇಲ್ಲಿಗೆ ಬಂದರೆ ಸ್ವಿಮ್ ಮಾಡಬಹುದು

ಬಿಡದಿ ಬಳಿ ಬಂದು ಅಧಿಕಾರಿಗಳ ಸಭೆ ಮಾಡಿದ್ದರು. ನಿನ್ನೆ ಅವರೇ ಸಂಗಬಸಪ್ಪನ ದೊಡ್ಡಿ ಬಳಿ ಹೈವೆಗೆ ಬಂದಿದ್ದರೆ ಸ್ವತಃ ಸ್ವಿಮ್ ಮಾಡಬಹುದಿತ್ತು. ಚೆನ್ನಾಗಿ ನೀರು ನಿಂತಿತ್ತು. ವಾಹನಗಳು ಸಂಚಾರ ಮಾಡಲಿಕ್ಕೆ ರಸ್ತೆ ಮಾಡಿ ಅಂದರೆ ಹೆದ್ದಾರಿಯಲ್ಲಿ ಸ್ವಿಮ್ಮಿಂಗ್ ಪೂಲ್ ನಿರ್ಮಾಣ ಮಾಡಿದ್ದಾರೆ. ಅವರಿಗೆ ಕಣ್ಣಿದ್ದರೆ ಬಂದು ನೋಡಲಿ ಎಂದು ಕಿಡಿಕಾರಿದರು. ಕೆರೆ ಒಡೆದಿದ್ದರಿಂದ ಈ ರೀತಿ ಪ್ರವಾಹ ಆಗಿದೆ ಎಂದು ಅವರು ಹೇಳಿದ್ದಾರೆ. ಒಬ್ಬ ಜವಾಬ್ದಾರಿಯುತ ವ್ಯಕ್ತಿ ಹೀಗೆ ಮಾತನಾಡುವುದಲ್ಲ. ಶಾಶ್ವತವಾದ ಕೆಲಸ ಆಗಬೇಕು. ಸರ್ಟಿಫಿಕೇಟ್ ಕೊಡೋದಕ್ಕಲ್ಲ ಇವರು ಇರುವುದು. ಕಾಮಗಾರಿ ತಪ್ಪಾಗಿದ್ದರೆ ಸರಿಪಡಿಸಬೇಕು. ಪ್ರತಾಪ್ ಸಿಂಹ ಬರೀ ಪ್ರಚಾರ ತೆಗೆದುಕೊಳ್ಳೋದು ನಿಲ್ಲಿಸಲಿ. ಮೊದಲು ಜನರ ಕೆಲಸ ಮಾಡಲಿ ಎಂದು ಟಾಂಗ್ ಕೊಟ್ಟರು.

ಪದ್ಮಭೂಷಣ ಪ್ರಶಸ್ತಿ ನೀಡಬೇಕು

ಯೋಜನೆ ರೂಪಿಸಬೇಕು. ಆದರೆ ಈ ರಸ್ತೆಯ ಟೋಲ್ ಜಾಗ ಈಗ ಕೆರೆಯಾಗಿದೆ. ಮುಖ್ಯಮಂತ್ರಿಗಳು ಕೂಡಲೇ ಈ ವಿಚಾರದಲ್ಲಿ ಕ್ರಮಕೈಗೊಳ್ಳಬೇಕು. ರಸ್ತೆ ನಿರ್ಮಾಣ ಎಂದರೆ ಜಲ್ಲಿ, ಟಾರು ಅಥವಾ ಕಾಂಕ್ರೀಟ್ ಹಾಕಿ ಹಣ ಪಡೆಯುವುದಲ್ಲ. ಮಳೆ ಬಂದಾಗ ನೀರು ಹೇಗೆ ಹೋಗಬೇಕು, ಎಲ್ಲಿ ಕಾಲುವೆ ತೆಗೆಯಬೇಕು ಎಂದು ಯೋಜನೆ ರೂಪಿಸುವುದು ಸರ್ಕಾರ ಹಾಗೂ ಇಂಜಿನಿಯರ್‌ಗಳ ಕರ್ತವ್ಯ.

ರಾಷ್ಟ್ರೀಯ ಹೆದ್ದಾರಿ ಸ್ಥಿತಿ ಹೀಗಾದರೆ ಹಳ್ಳಿ ರಸ್ತೆಗಳ ಪರಿಸ್ಥಿತಿ ಏನಾಗಬೇಕು. ಒಬ್ಬಿಬ್ಬರ ಪ್ರಾಣ ಹಾನಿಯಾಗಿರುವ ಮಾಹಿತಿ ಬಂದಿದ್ದು, ರಾಮನಗರ, ಚನ್ನಪಟ್ಟಣ, ಕನಕಪುರದ ಕೆಲವು ಭಾಗಗಳಿಗೆ ಹೋಗಿ ಪರಿಸ್ಥಿತಿ ಪರಿಶೀಲಿಸುತ್ತೇನೆ. ಅವರಿಗೆ ಧೈರ್ಯ ತುಂಬುತ್ತೇನೆ. ಸರ್ಕಾರದ ಮೇಲೆ ಒತ್ತಡ ಹಾಕುತ್ತೇನೆ.

ಈ ಸಮಯದಲ್ಲಿ ಆಡಳಿತ ವ್ಯವಸ್ಥೆ ಚುರುಕಾಗಿ ಕೆಲಸ ಮಾಡಬೇಕು. ಒಂದು ವಾರ ಅಥವಾ 10 ದಿನಗಳಲ್ಲಿ ಪರಿಹಾರ ನೀಡುತ್ತೇನೆ ಎಂದು ಹೇಳುವುದಲ್ಲ. ತಕ್ಷಣ ಸ್ಥಳದಲ್ಲೇ ಚೆಕ್ ಮೂಲಕ ಪರಿಹಾರ ನೀಡಲು ಸಮಸ್ಯೆ ಏನು? ಹಾನಿಗೆ ಒಳಗಾದವರನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕು. ಇಷ್ಟು ಮಳೆ ಬಂದು ಪ್ರವಾಹದ ಸ್ಥಿತಿ ನಿರ್ಮಾಣವಾದ ನಂತರ ಎಲ್ಲಾ ನೀರು ಸಮುದ್ರ ಸೇರುತ್ತಿದೆ. ಈ ನೀರನ್ನು ತಡೆಹಿಡಿದು ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ಮಾಡಿದೆವು. ಅತಿಯಾದ ಮಳೆಗೆ ಆಸ್ತಿಪಾಸ್ತಿಗಳು ನಷ್ಟವಾಗುತ್ತಿದೆ. ಹೀಗಾಗಿ ಸರ್ಕಾರ ಸಂತ್ರಸ್ತರ ನೆರವಿಗೆ ನಿಲ್ಲಬೇಕು. ತಗ್ಗು ಪ್ರದೇಶದಲ್ಲಿ ಇರುವ ಜನರಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಗಣೇಶೋತ್ಸವಕ್ಕೆ ಸುಪ್ರೀಂಕೋರ್ಟ್ ಬ್ರೇಕ್

ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠವು ಸಹಮತಕ್ಕೆ ಬರಲಿಲ್ಲ. ಮುಖ್ಯ ನ್ಯಾಯಮೂರ್ತಿ ಪೀಠಕ್ಕೆ ಶಿಫಾರಸು ಮಾಡಿತು. ಬಳಿಕ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಅವರು ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠ ರಚಿಸಿದರು. ಕರ್ನಾಟಕ ವಕ್ಫ್ ಮಂಡಳಿ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿ, ಈದ್ಗಾ ಮೈದಾನ ಮುಸ್ಲಿಮರಿಗೆ ಸೇರಿದ್ದು. ಇದೀಗ 200 ವರ್ಷಗಳ ಹಳೆಯ ಸಂಪ್ರದಾಯವನ್ನು ಬದಲಿಸುವುದು ಏಕೆ. ಈದ್ಗಾ ಮೈದಾನ ವಕ್ಫ್ ಮಂಡಳಿಯ ಆಸ್ತಿ. ರಾಜ್ಯ ಸರ್ಕಾರ ಇದೀಗ ಮಾಲೀಕತ್ವದ ಬಗ್ಗೆ ಪ್ರಶ್ನೆ ಮಾಡಿದೆ. ಗಣೇಶ ಉತ್ಸವಕ್ಕೆ ಅವಕಾಶ ನೀಡುವುದು ನಿಯಮಬಾಹಿರ ಎಂದು ವಾದಿಸಿದರು. ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿ, ಈ ಜಾಗ ರಾಜ್ಯ ಸರ್ಕಾರಕ್ಕೆ ಸೇರಿದ್ದು. ಸುಪ್ರೀಂಕೋರ್ಟ್ ಮುಂದೆ ಸಲ್ಲಿಕೆಯಾಗಿದ್ದು ತಡೆಯಾಜ್ಞೆ ಅರ್ಜಿ. ಮಾಲೀಕತ್ವ ನಿರ್ಧರಿಸುವ ಅರ್ಜಿಯಲ್ಲ ಎಂದರು.

'ಮೈದಾನದ ಮಾಲೀಕತ್ವ ಕಂದಾಯ ಇಲಾಖೆಗೆ ಸೇರಿದೆ ಎಂಬ ಸರ್ಕಾರದ ಆದೇಶವನ್ನು ಪ್ರಶ್ನಿಸಿ ವಕ್ಫ್ ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಮತ್ತು ಬೆಂಗಳೂರು ಜಿಲ್ಲೆ ವಕ್ಫ್ ಸಲಹಾ ಸಮಿತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ, ಆ.25ರಂದು ವಿಚಾರಣೆ ನಡೆಸಿ ಮಧ್ಯಂತರ ಆದೇಶ ಹೊರಡಿಸಿತ್ತು.

ಈದ್ಗಾ ಮೈದಾನದಲ್ಲಿ ಮುಸ್ಲಿಂ ಸಮುದಾಯದವರು ರಮ್ಜಾನ್ ಮತ್ತು ಬಕ್ರೀದ್ ದಿನದಂದು ಪ್ರಾರ್ಥನೆ ಸಲ್ಲಿಸಬಹುದು. ಈ ಎರಡು ದಿನಗಳನ್ನು ಹೊರತುಪಡಿಸಿ ಬೇರ‍್ಯಾವುದೇ ದಿನ ಪ್ರಾರ್ಥನೆಗೆ ಅವಕಾಶ ಇರುವುದಿಲ್ಲ. ಬಿಬಿಎಂಪಿ ಮತ್ತು ಸರ್ಕಾರ ಮೈದಾನದಲ್ಲಿ ಗಣರಾಜೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಗೆ ಅನುಮತಿ ನೀಡಬಹುದು. ಮೈದಾನವನ್ನು ಆಟದ ಬಳಕೆಗೆ ಮಾತ್ರವೇ ಸೀಮಿತಗೊಳಿಸಬೇಕು ಎಂದು ಏಕಸದಸ್ಯ ನ್ಯಾಯಪೀಠ ನಿರ್ದೇಶಿಸಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಲಿಸಿದ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಆಗಸ್ಟ್ 26ರಂದು ವಿಚಾರಣೆ ನಡೆಸಿತ್ತು.

ಏಕಸದಸ್ಯ ನ್ಯಾಯಪೀಠ ನೀಡಿರುವ ನಿರ್ದೇಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದಾಗ್ಯೂ, ಈದ್ಗಾ ಮೈದಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆ ಗಳನ್ನು ನಡೆಸಲು ಅನುಮತಿ ಕೋರಿ ಬೆಂಗಳೂರು ಜಿಲ್ಲಾಧಿಕಾರಿ ಸ್ವೀಕರಿಸಿರುವ ಮನವಿ ಪತ್ರಗಳನ್ನು ಇದೇ 31ರಿಂದ ಸೀಮಿತ ಅವಧಿಗೆ ಪರಿಗಣಿಸಿ ಸರ್ಕಾರ ಸೂಕ್ತ ಆದೇಶ ಹೊರಡಿಸಬಹುದು ಎಂದು ವಿಭಾಗೀಯ ನ್ಯಾಯಪೀಠ ಸ್ಪಷ್ಟಪಡಿಸಿತ್ತು. ಇದನ್ನು ಪ್ರಶ್ನಿಸಿ ಕರ್ನಾಟಕ ವಕ್ಫ್ ಮಂಡಳಿಯು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಮುರುಘಾ ಶ್ರೀಗಳ ವಿರುದ್ಧದ ಬಾಲಕಿಯರಿಗೆ ಲೈಂಗಿಕ ಕಿರುಕುಳ ಆರೋಪ ; ಪ್ರಕರಣದ ತನಿಖೆ ಸಂಬಂಧ

ವಿಶೇಷ ತನಿಖಾ ತಂಡ ರಚನೆಗೆ ದಸಂಸ ಒಕ್ಕೂಟ ಆಗ್ರಹ

ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದರೂ ಇನ್ನು ಕ್ರಮ ಜರುಗಿಸದಿರುವುದಕ್ಕೆ ಆಕ್ಷೇಪ



ಮೈಸೂರು,ಆ.30(ಪಿಎಂ)– ಚಿತ್ರದುರ್ಗದ ಮುರುಘಾ ಮಠದ ಶ್ರೀ ಡಾ.ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದರೂ ಅದರಂತೆ ಕಾನೂನು ಕ್ರಮಗಳನ್ನು ಜರುಗಿಸುತ್ತಿಲ್ಲ ಎಂದು ಆರೋಪಿಸಿರುವ ದಲಿತ ಸಂಘರ್ಷ ಸಮಿತಿ (ದಸಂಸ) ಒಕ್ಕೂಟ, ಪ್ರಕರಣದ ತನಿಖೆ ಸಂಬಂಧ ನಿವೃತ್ತ ನ್ಯಾಯಮೂರ್ತಿಗಳು, ಪ್ರಾಮಾಣಿಕ ತನಿಖಾಧಿಕಾರಿಗಳು, ಸಂಘ–ಸಂಸ್ಥೆಗಳನ್ನು ಒಳಗೊಂಡಂತೆ ಎಸ್‌ಐಟಿ (ವಿಶೇಷ ತನಿಖಾ ತಂಡ) ರಚಿಸಬೇಕೆಂದು ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿ 4 ದಿನ ಕಳೆದರೂ ಆರೋಪಿ ಸ್ಥಾನದಲ್ಲಿರುವ ಶ್ರೀಗಳನ್ನು ಬಂಧಿಸಿಲ್ಲ. ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಶ್ರೀಗಳ ಪರ ಹೇಳಿಕೆ ನೀಡುವ ಮೂಲಕ ಪ್ರಕರಣದ ದಿಕ್ಕು ತಪ್ಪಿಸಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಕೂಡ ಶ್ರೀಗಳ ಪರ ಮಾತನಾಡಿ ಕ್ಲೀನ್‌ಚಿಟ್ ನೀಡಿದ್ದಾರೆ. ಆರೋಪ–ಪ್ರತ್ಯಾರೋಪ ಏನೇ ಇದ್ದರೂ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಕಾರಣ ಮೊದಲು ಶ್ರೀಗಳನ್ನು ಬಂಧಿಸಬೇಕಿತ್ತು. ಕಾನೂನು ಮುಂದೆ ಎಲ್ಲರೂ ಸಮಾನರು. ಆದರೆ ಈ ಪ್ರಕರಣದಲ್ಲಿ ಮುಖ್ಯಮಂತ್ರಿಯಾದಿಯಾಗಿ ಎಲ್ಲರೂ ಶ್ರೀಗಳ ರಕ್ಷಣೆಗೆ ನಿಂತಂತಿದೆ ಎಂದು ದೂರಿದರು.

ಸಂಧಾನ ಮತ್ತು ಸಮರ–ಎರಡಕ್ಕೂ ಸಿದ್ಧ ಎಂದು ಶ್ರೀಗಳು ಹೇಳಿದ್ದಾರೆ. ಇವರು ಯಾರ ಬಳಿ ಸಂಧಾನ ಮಾಡಿಕೊಳ್ಳುತ್ತಾರೆ? ಯಾರ ವಿರುದ್ಧ ಸಮರ ನಡೆಸುತ್ತಾರೆ? ಅವರ ಮಠದ ಆಶ್ರಯದಲ್ಲಿದ್ದು ಓದುತ್ತಿದ್ದ ಬಾಲಕಿಯರಲ್ಲಿ ಒಬ್ಬ ಹೆಣ್ಣು ಮಗು ಮಾದಿಗ ಸಮುದಾಯಕ್ಕೆ ಸೇರಿದ್ದರೆ, ಮತ್ತೊಬ್ಬ ಹೆಣ್ಣು ಮಗಳು ಉಪ್ಪಾರ ಸಮುದಾಯಕ್ಕೆ ಸೇರಿದ ಅನಾಥ ಬಾಲಕಿ. ದಮನಿತ ಸಮುದಾಯಕ್ಕೆ ಸೇರಿದ ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಆರೋಪದಡಿ ದಾಖಲಾಗಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದೇ ಇರುವುದು ದುರಂತ ಎಂದು ಕಿಡಿಕಾರಿದರು.

ಚಿತ್ರದುರ್ಗ ಜಿಲ್ಲಾಡಳಿತದಿಂದ ಈ ಪ್ರಕರಣದಲ್ಲಿ ನ್ಯಾಯ ದೊರೆಯುವ ವಿಶ್ವಾಸ ಇಲ್ಲವಾಗುತ್ತಿದೆ. ಏಕೆಂದರೆ ಪೋಕ್ಸೋ ಕಾಯ್ದೆಯಡಿ ಕಾನೂನಾತ್ಮಕ ಕ್ರಮಗಳೇ ಜರುಗುತ್ತಿಲ್ಲ. ಆರೋಪಿ ಸ್ಥಾನದಲ್ಲಿರುವ ಶ್ರೀಗಳು ಹಾಗೂ ಅವರ ಭಕ್ತರು ಮಠದಲ್ಲಿ ಇರುವಾಗಲೇ ಬಾಲಕಿಯರನ್ನು ಸ್ಥಳ ಮಹಜರಿಗೆ ಮಠಕ್ಕೆ ಕರೆದೊಯ್ದಿದ್ದು, ಪೊಲೀಸರ ಈ ನಡೆ ಅನುಮಾನಾಸ್ಪದವಾಗಿದೆ ಎಂದು ಸಂದೇಹ ವ್ಯಕ್ತಪಡಿಸಿದರು.

ಈಗಲಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಆರೋಪಿ ಸ್ಥಾನದಲ್ಲಿರುವ ಶ್ರೀಗಳನ್ನು ಕೂಡಲೇ ಬಂಧಿಸಬೇಕು. ಎಲ್ಲಾ ಪಕ್ಷಗಳು ಹಾಗೂ ಜನಪ್ರತಿನಿಧಿಗಳು ಈ ವಿಚಾರದಲ್ಲಿ ಓಟಿನ ರಾಜಕಾರಣ ಮಾಡದೇ ಮಾತನಾಡಬೇಕು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಯಾವುದೇ ಪಕ್ಷವಾದರೂ ಸಂತ್ರಸ್ತರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಸಹಕಾರ ನೀಡಬೇಕು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಅತ್ಯಾಚಾರಿಗಳನ್ನು ಕಾಪಾಡುವುದು ಬಿಜೆಪಿಯವರ ಧ್ಯೇಯ: ಇಡೀ ಸರ್ಕಾರವೇ ಶ್ರೀಗಳ ರಕ್ಷಣೆಗೆ ನಿಂತಂತಿದೆ. ಬಲ್ಕೀಸ್ ಬಾನು ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಎಲ್ಲಾ 11 ಮಂದಿ ಅತ್ಯಾಚಾರಿಗಳನ್ನು ಗುಜರಾತ್ ಸರ್ಕಾರ ಬಿಡುಗಡೆ ಮಾಡಿದೆ. ಆದರೆ ಇವರು ಹೋರಾಟಗಾರರನ್ನು ಜೈಲಿಗೆ ಹಾಕುತ್ತಾರೆ. ಶ್ರೀಗಳ ವಿರುದ್ಧ ಷಡ್ಯಂತರ ನಡೆದಿದ್ದರೆ ಅದನ್ನು ಪ್ರತ್ಯೇಕ ಪ್ರಕರಣವಾಗಿ ಪರಿಗಣಿಸಲಿ ಎಂದರಲ್ಲದೆ, ಸಂತ್ರಸ್ತ ಬಾಲಕಿಯರನ್ನು ಬೇರೆ ಜಿಲ್ಲೆಗೆ ಸ್ಥಳಾಂತರಿಸಿ, ಅವರಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ದಸಂಸ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ಗೃಹ ಸಚಿವರು ಶ್ರೀಗಳ ವಿರುದ್ಧ ಷಡ್ಯಂತರ ನಡೆದಿದೆ ಎಂದು ಹೇಳಿಕೆ ನೀಡಿದ್ದಾರೆ. ಬಾಲಕಿಯರು ಶ್ರೀಗಳ ವಿರುದ್ಧ ಷಡ್ಯಂತರ ಮಾಡಲು ಸಾಧ್ಯವೇ? ಗೃಹ ಸಚಿವರು ಇಂತಹ ಮೂರ‍್ನಾಲ್ಕು ಪ್ರಕರಣಗಳಲ್ಲಿ ತನಿಖೆಯ ದಿಕ್ಕು ತಪ್ಪಿಸುವಂತೆ ಹೇಳಿಕೆ ನೀಡಿದ್ದಾರೆ. ಅವರು ನೈತಿಕ ಹೊಣೆ ಹೊತ್ತು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಬಾಲಕಿಯರ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ಆದರೆ ಶ್ರೀಗಳ ವೈದ್ಯಕೀಯ ಪರೀಕ್ಷೆಯನ್ನು ಇನ್ನೂ ನಡೆಸಿಲ್ಲ. ಪ್ರಕರಣವನ್ನು ರಾಜ್ಯ ಸರ್ಕಾರ ಹಗುರವಾಗಿ ಪರಿಗಣಿಸಿದರೆ ತೀವ್ರತರ ಚಳವಳಿ ಎದುರಿಸಬೇಕಾಗುತ್ತದೆ. ಹೋರಾಟಕ್ಕೆ ಸಂಬಂಧಿಸಿದಂತೆ ನಾಳೆ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸಭೆ ನಡೆಸಿ ಚರ್ಚಿಸಲಿದ್ದೇವೆ. ತಳ ಸಮುದಾಯದ ಜನಪ್ರತಿನಿಧಿಗಳು ಈ ವಿಚಾರದಲ್ಲಿ ಏನೂ ಮಾತನಾಡದೇ ಬಾಯಿಗೆ ಬೀಗ ಹಾಕಿಕೊಂಡವರಂತೆ ಮೌನಕ್ಕೆ ಶರಣಾಗಿದ್ದಾರೆ ಎಂದು ಕಿಡಿಕಾರಿದರು. ಒಕ್ಕೂಟದ ಮುಖಂಡರಾದ ಬೆಟ್ಟಯ್ಯಕೋಟೆ, ಶಂಭುಲಿಂಗಸ್ವಾಮಿ, ಮುನಿರಾಜು, ವಸಂತಾ ಹೊನ್ನೇನಹಳ್ಳಿ ಗೋಷ್ಠಿಯಲ್ಲಿದ್ದರು.

ಪೋಕ್ಸೋ ಕಾಯ್ದೆಯಡಿ ಹೆಚ್‌ಡಿಕೆ ವಿರುದ್ಧ ಪ್ರಕರಣ ದಾಖಲಾಗಲಿ!

'ನನಗೆ ಮೊದಲೇ ಗೊತ್ತಿತ್ತು. ಹಾಗಾಗಿ ಈ ಪ್ರಕರಣ ಅಚ್ಚರಿ ತಂದಿಲ್ಲ' ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಇದರ ಅರ್ಥವೇನು? ಪೋಕ್ಸೋ ಕಾಯ್ದೆ ಪ್ರಕಾರ ಹೀಗೆ ಗೊತ್ತಿದ್ದೂ ಸುಮ್ಮನೇ ಇದ್ದದ್ದೂ ಅಪರಾಧವೇ ಆಗುತ್ತದೆ. ಹಾಗಾಗಿ ಕುಮಾರಸ್ವಾಮಿಯವರ ಮೇಲೂ ಪ್ರಕರಣ ದಾಖಲಿಸಿ, ಅವರನ್ನೂ ತನಿಖೆ ನಡೆಸಬೇಕು.

-ಗುರುಪ್ರಸಾದ್ ಕೆರಗೋಡು

ವೀರಶೈವ ಲಿಂಗಾಯತ ಜಂಗಮರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದಂತೆ ಆಗ್ರಹಿಸಿ ಕದಸಂಸ ಪ್ರತಿಭಟನೆ

ಒಂದು ವೇಳೆ ನಿಯಮಾವಳಿ ಉಲ್ಲಂಘನೆಯಾದರೆ ಸಂಬಂಧಿಸಿದ ಅಧಿಕಾರಿಗಳ ವಜಾಕ್ಕೆ ಆಗ್ರಹ



ಮೈಸೂರು, ಆ.30(ಆರ್‌ಕೆಬಿ)– ವೀರಶೈವ ಲಿಂಗಾಯತ ಜಂಗಮರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಬಾರದು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕ ನೀಡಿರುವ ಕರೆಯ ಮೇರೆಗೆ ದಸಂಸ ಜಿಲ್ಲಾ ಘಟಕದ ಕಾರ್ಯಕರ್ತರು ಮಂಗಳವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕರ್ನಾಟಕದಲ್ಲಿ ಬೇಡ ಜಂಗಮ, ಬುಡ್ಡ ಜಂಗಮ ಜನಾಂಗಕ್ಕೂ, ಲಿಂಗಾಯತ ಉಪಜಾತಿಯಾದ ಜಂಗಮ ಜನಾಂಗಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಮಾನವಕುಲ ಶಾಸ್ತ್ರ ಸರ್ವೇಕ್ಷಣಾ ಸಂಸ್ಥೆ ವತಿಯಿಂದ ಪ್ರಕಟಿಸಲಾಗಿರುವ ವರದಿ ತಿಳಿಸುತ್ತದೆ. ಅದರ ಅನುಸಾರ ನಿಜವಾದ ಬೇಡ, ಬುಡ್ಡ ಜಂಗಮರು ಯಾರೆಂದು ಗುರುತಿಸಿ, ಅವರಿಗೆ ಜಾತಿ ದೃಢೀಕರಣ ಪತ್ರ ನೀಡಬೇಕು. ಒಂದು ವೇಳೆ ಅರ್ಹರಲ್ಲದವರಿಗೆ ಜಾತಿ ದೃಢೀಕರಣ ಪತ್ರ ನೀಡಿದರೆ ಅವರೇ ಸಂಪೂರ್ಣ ಹೊಣೆಗಾರರಾಗುತ್ತಾರೆ. ಅಂತಹ ಅಧಿಕಾರಿಗಳ ಮೇಲೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದೆಂದು ರಾಜ್ಯ ಸರ್ಕಾರದ 1995ರ ಜ.18ರ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ ಎಂದು ಪ್ರತಿಭಟನಾಕಾರರು ಸ್ಪಷ್ಟಪಡಿಸಿದರು.

ಪರಿಶಿಷ್ಟ ಜಾತಿ, ಪಂಗಡದ ಹೆಸರಿನಲ್ಲಿ ಈಗಾಗಲೇ ರಾಜ್ಯದಲ್ಲಿ 1.5 ಲಕ್ಷಕ್ಕೂ ಹೆಚ್ಚು ಜನ ನಕಲಿ ಬೇಡಜಂಗಮರ ಜಾತಿ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಸರ್ಕಾರಿ ನೌಕರಿ ಮತ್ತು ಸೌಲಭ್ಯಗಳ ಪಡೆದಿದ್ದಾರೆ. ಅನೇಕ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ವಿವಿಧ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ಪಡೆದಿದ್ದಾರೆ. ಆದ್ದರಿಂದ ಇಂತಹ ಸುಳ್ಳು ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು ಪ್ರತಿ ಜಿಲ್ಲೆಯಲ್ಲೂ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಬೆಂಗಳೂರಿನ ಅಖಿಲ ಕರ್ನಾಟಕ ಡಾ.ಅಂಬೇಡ್ಕರ್ ಬೇಡ ಜಂಗಮ ಪರಿಶಿಷ್ಟ ಜಾತಿ ರಕ್ಷಣಾ ವೇದಿಕೆ ಸಂಸ್ಥೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಈ ಸಂಸ್ಥೆಯು ವಿತರಿಸುವ ಬೇಡಜಂಗಮ ಜಾತಿ ಗುರುತಿನ ಚೀಟಿಗಳನ್ನು ಪರಿಗಣಿಸಿ ಜಾತಿ ಸಿಂಧುತ್ವ ಪ್ರಮಾಣಪತ್ರಗಳನ್ನು ಯಾವುದೇ ಕಾರಣಕ್ಕೂ ನೀಡಬಾರದು. ಒಂದು ವೇಳೆ ನಕಲಿ ಜಾತಿ ಪ್ರಮಾಣ ಪತ್ರ ನೀಡಿದ್ದು ಕಂಡು ಬಂದಲ್ಲಿ ಅಂತಹ ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಬೇಕು. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಶಿಕ್ಷಣ, ಉದ್ಯೋಗ ಇನ್ನಿತರ ಸೌಲಭ್ಯಗಳನ್ನು ಪಡೆದಿರುವವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಅದೇ ರೀತಿ ಸುಳ್ಳು ಜಾತಿ ಪ್ರಮಾಣಪತ್ರ ನೀಡುವ ಅಧಿಕಾರಿಗಳ ವಿರುದ್ಧ ಪರಿಶಿಷ್ಟ ಜಾತಿ, ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯಡಿ ಕೇಸು ದಾಖಲಿಸಿ ಜೈಲಿಗೆ ಕಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಉಗ್ರಪ್ಪ, ಕೃಷ್ಣಸ್ವಾಮಿ ರಾಚಪ್ಪ, ಸಂಘಟನಾ ಸಂಚಾಲಕ ಕೆ.ಆರ್.ನಗರ ಮಲ್ಲೇಶ್, ಅನಿಲ್‌ಕುಮಾರ್, ಪಿರಿಯಾಪಟ್ಟಣ ವೆಂಕಟೇಶ್ ಇನ್ನಿತರರು ಭಾಗವಹಿಸಿದ್ದರು.

ಮಹಿಳಾ ಪೌರಕಾರ್ಮಿಕರಿಗೆ ಬಾಗಿನ ಕೊಟ್ಟು ಗೌರಿ ಹಬ್ಬ ಆಚರಣೆ



ಮೈಸೂರು,ಆ.30(ಪಿಎಂ)– ಮೈಸೂರಿನ ಚಾಮುಂಡಿಪುರಂನ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಮೈಸೂರು ಮಹಾನಗರ ಪಾಲಿಕೆ ವಾರ್ಡ್ 55ರ ಸದಸ್ಯ ಮಾ.ವಿ.ರಾಮ್‌ಪ್ರಸಾದ್ 50 ಮಹಿಳಾ ಪೌರಕಾರ್ಮಿಕರಿಗೆ ಬಾಗಿನ, ಸೀರೆಗಳನ್ನು ಕೊಡುವ ಮೂಲಕ ಮಂಗಳವಾರ ಗೌರಿ ಹಬ್ಬ ಆಚರಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇಂದು ನಮ್ಮ ವಾರ್ಡಿನಲ್ಲಿ ಗೌರಿ–ಗಣೇಶ ಹಬ್ಬದ ಪ್ರಯುಕ್ತ ಮಹಿಳಾ ಪೌರಕಾರ್ಮಿಕರಿಗೆ ಬಾಗಿನ ಕೊಡುವ ಕಾರ್ಯಕ್ರಮ ಆಯೋಜಿಸಲಾಗಿದೆ. ಎಲ್ಲರೂ ಇಂದು ಗೌರಿ ಹಬ್ಬವನ್ನು ಆಚರಣೆ ಮಾಡುತ್ತಿದ್ದಾರೆ, ಸಂಭ್ರಮಿಸುತ್ತಿದ್ದಾರೆ. ಆದರೆ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯದ ಮೂಲಕ ದೇವರನ್ನು ಕಾಣುತ್ತಿದ್ದಾರೆ ಎಂದು ಹೇಳಿದರು.

ಆದ್ದರಿಂದ ನಾವು ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ಕೊಟ್ಟು ಸತ್ಕರಿಸುವ ಮೂಲಕ ನಮ್ಮೊಂದಿಗೆ ಸಮಾಜ ಇದೇ ಎಂಬ ಭಾವನೆ ಅವರಲ್ಲಿ ಮೂಡಿಸಲು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಕಳೆದ ಎರಡು ವರ್ಷಗಳಿಂದ ಕೋವಿಡ್ ಹಿನ್ನೆಲೆಯಲ್ಲಿ ಇಡೀ ದೇಶದಲ್ಲಿ ಸಂಭ್ರಮ ಇರಲಿಲ್ಲ. ಆದರೆ ಈಗ ಸೋಂಕು ದೂರವಾಗಿ ಹಬ್ಬ ಆಚರಿಸುವ ವಾತಾವರಣ ಸೃಷ್ಟಿಯಾಗಿದೆ. ದಸರಾ ಕೂಡ ಸಮೀಪಿಸುತ್ತಿದ್ದು, ಈ ಸಂದರ್ಭದಲ್ಲಿಯೂ ಪೌರಕಾರ್ಮಿಕರು ಹೆಚ್ಚಿನ ಶ್ರಮ ವಹಿಸಲಿದ್ದಾರೆ ಎಂದರು.

ಮುಖಂಡರಾದ ಸಂದೀಪ್ ಚಂದ್ರಶೇಖರ್, ವಿಕ್ರಮ್ ಅಯ್ಯಂಗಾರ್, ಗೋಕುಲ್, ಪುನೀತ್, ಅದ್ವೈತ, ಶಿವು, ಸಂತೋಷ್, ಧರ್ಮೇಂದ್ರ ದೇವೇಂದ್ರಸ್ವಾಮಿ, ಲಲಿತಾಂಬ, ಮಂಜುನಾಥ್, ಬಸವರಾಜು, ರಾಕೇಶ್, ಮಧು, ರಾಮಚಂದ್ರ ರೂಪೇಶ್, ಕೌಶಿಕ್ ಮತ್ತಿತರರು ಹಾಜರಿದ್ದರು.



ಮೈಸೂರು ದಸರಾ ಮಹೋತ್ಸವ-2022

ದಸರಾ ವಿಶೇಷ ಟೂರ್ ಪ್ಯಾಕೇಜ್

ನಾಳೆಯಿಂದ ಟಿಕೆಟ್ ಬುಕ್ಕಿಂಗ್, ಸೆ.5ರಿಂದ ಪ್ರವಾಸ ಆರಂಭ

ಎಸ್.ಟಿ.ರವಿಕುಮಾರ್



ಮೈಸೂರು, ಆ.30–ನಾಡಹಬ್ಬ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸರ್ವ ರೀತಿಯಲ್ಲಿ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೇ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC)ವು ಸಾಂಸ್ಕೃತಿಕ ನಗರಿ ಮೈಸೂರಿನಿಂದ ದಸರಾ ವಿಶೇಷ ಟೂರ್ ಪ್ಯಾಕೇಜ್‌ಗಳನ್ನು ಘೋಷಿಸಿದೆ.

ಸೆಪ್ಟೆಂಬರ್ 1 ರಿಂದ ಆನ್‌ಲೈನ್ ಮತ್ತು ಆಫ್‌ಲೈನ್‌ಗಳಲ್ಲಿ ವಿಶೇಷ ಟೂರ್ ಪ್ಯಾಕೇಜ್‌ಗಳಿಗೆ ಟಿಕೆಟ್ ಬುಕ್ಕಿಂಗ್ ಪ್ರಕ್ರಿಯೆ ಆರಂಭವಾಗಲಿದ್ದು, ಸೆಪ್ಟೆಂಬರ್ 5 ರಿಂದ ಮೈಸೂರು ಸುತ್ತಮುತ್ತಲಿನ ಪ್ರವಾಸಿ ತಾಣಗಳನ್ನು ವೀಕ್ಷಿಸಲು 13 ಪ್ಯಾಕೇಜ್‌ಗಳ ಪ್ರವಾಸ ಆರಂಭವಾಗಲಿವೆ. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಹೋಟೆಲ್ ಮಯೂರ ಹೊಯ್ಸಳ ಆವರಣದ ಕೆಎಸ್‌ಟಿಡಿಸಿ, ಮೈಸೂರು ಸಾರಿಗೆ ವಿಭಾಗದ ಬುಕ್ಕಿಂಗ್ ಕೌಂಟರ್, ಬೆಂಗಳೂರಿನ ಯಶವಂತಪುರದಲ್ಲಿರುವ ನಿಗಮದ ಕೇಂದ್ರ ಕಚೇರಿ ಬುಕ್ಕಿಂಗ್ ಕೌಂಟರ್, ಕೆಂಪೇಗೌಡ ಬಸ್ ಸ್ಟ್ಯಾಂಡ್ ಬುಕ್ಕಿಂಗ್ ಕೌಂಟರ್‌ಗಳಲ್ಲಿ ವಿಶೇಷ ಟೂರ್ ಪ್ಯಾಕೇಜ್‌ಗಳಿಗೆ ಟಿಕೆಟ್ ಬುಕ್ ಮಾಡಬಹುದಾಗಿದೆ.

ಆನ್‌ಲೈನ್ ಮೂಲಕ ww.kstdc.co.ನಲ್ಲಿ Tour Packages from Mysuru ಕ್ಲಿಕ್ ಮಾಡಿ ನಿಗಮದ ವೆಬ್‌ಸೈಟ್‌ನಿಂದಲೂ ಟಿಕೆಟ್ ಬುಕ್ ಮಾಡಬಹುದಾಗಿದ್ದು, ರೆಡ್ ಬಸ್ ಪೋರ್ಟಲ್, ಕೆಎಸ್‌ಆರ್‌ಟಿಸಿ ಅವತಾರ್ ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ ಅಧಿಕೃತ ಟ್ರಾವೆಲ್ ಏಜೆಂಟ್‌ಗಳ ಮೂಲಕವೂ ಮುಂಗಡ ಟಿಕೆಟ್ ಬುಕ್ಕಿಂಗ್ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಕೆಎಸ್‌ಟಿಡಿಸಿ ಮೈಸೂರು ಸಾರಿಗೆ ವಿಭಾಗದ ಕಚೇರಿ 0821–2423652, ಮೊಬೈಲ್ ಸಂಖ್ಯೆ 8970656400 ಅಥವಾ ಇ–ಮೇಲ್ ಐಡಿ mtw@karnatakaholidays.net ಅನ್ನು ಸಂಪರ್ಕಿಸಬಹುದಾಗಿದೆ.

ಪ್ರವಾಸ ಪ್ಯಾಕೇಜ್‌ಗಳು: ಮೈಸೂರಿನ ಜೆಎಲ್‌ಬಿ ರಸ್ತೆಯ ಹೋಟೆಲ್ ಮಯೂರ ಹೊಯ್ಸಳ ಆವರಣದಲ್ಲಿರುವ ಕೆಎಸ್‌ಟಿಡಿಸಿ ಮೈಸೂರು ಸಾರಿಗೆ ವಿಭಾಗದ ಕಚೇರಿ ಬಳಿಯಿಂದ ಹವಾನಿಯಂತ್ರಿತ ಬಸ್‌ಗಳು ಹೊರಡಲಿವೆ.

ಕ್ರ. ಸಂ.	ಪ್ರವಾಸ ಸ್ಥಳಗಳು	ಅವಧಿ	ದರ ರೂ.
1.	ಮೈಸೂರು ಅರಮನೆ, ಜಗನ್ಮೋಹನ ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಸೆಂಟ್ ಫಿಲೋಮಿನಾ ಚರ್ಚ್, ಶ್ರೀರಂಗಪಟ್ಟಣ	1 ದಿನ	440/–
2.	ಸೋಮನಾಥಪುರ, ತಲಕಾಡು, ಮುಡುಕುತೊರೆ ಬೆಟ್ಟ, ಶಿವನಸಮುದ್ರ (ಗಗನಚುಕ್ಕಿ, ಭರಚುಕ್ಕಿ ಜಲಪಾತ)	1 ದಿನ	550/–
3.	ಬೇಲೂರು, ಹಳೇಬೀಡು, ಶ್ರವಣಬೆಳಗೊಳ	1 ದಿನ	1,089/–
4.	ಬೈಲುಕುಪ್ಪೆ, ಗೋಲ್ಡನ್ ಟೆಂಪಲ್, ಕಾವೇರಿ ನಿಸರ್ಗ ಧಾಮ, ರಾಜಾಸೀಟ್, ಅಬ್ಬಿಫಾಲ್ಸ್, ದುಬಾರೆ ಆನೆ ಶಿಬಿರ	1 ದಿನ	979/–
5.	ಮೇಲುಕೋಟೆ, ಎಡಿಯೂರು, ಆದಿಚುಂಚನಗಿರಿ	1 ದಿನ	660/–
6.	ನಂಜನಗೂಡು, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿ ರಂಗನಬೆಟ್ಟ	1 ದಿನ	728/–
7.	ನಂಜನಗೂಡು, ಬಿಳಿಗಿರಿ ರಂಗನ ಬೆಟ್ಟ, ಮಲೈಮಹದೇಶ್ವರ ಬೆಟ್ಟ	1 ದಿನ	795/–
8.	ಬೈಲುಕುಪ್ಪೆ ಕಾವೇರಿ ನಿಸರ್ಗ ಧಾಮ, ಅಬ್ಬಿಫಾಲ್ಸ್, ರಾಜಾಸೀಟ್, ಭಾಗಮಂಡಲ, ತಲಕಾವೇರಿ, ದುಬಾರೆ ಆನೆ ಶಿಬಿರ	2 ದಿನಗಳು	2,860/–
9.	ಊಟಿ, ಲೇಕ್, ಬಟಾನಿಕಲ್ ಗಾರ್ಡನ್, ದೊಡ್ಡಬೆಟ್ಟ	2 ದಿನಗಳು	2,750/–
10.	ಶಿವಮೊಗ್ಗದ ಜೋಗ್ ಜಲಪಾತ, ಸಿಗಂಧೂರು ಶ್ರೀ ಚೌಡೇಶ್ವರಿ ದೇವಸ್ಥಾನ	3 ದಿನಗಳು	2,145/–
11.	ನಂಜನಗೂಡು, ಊಟಿ, ಕುನ್ನೂರು, ಕೊಡೈಕೆನಾಲ್	4 ದಿನಗಳು	5,075/–
12.	ತುಂಗಭದ್ರಾ ಡ್ಯಾಂ, ಹಂಪಿ, ಮಂತ್ರಾಲಯ	4 ದಿನಗಳು	4,382/–
13.	ಶಿವಮೊಗ್ಗದ ಜೋಗ್ ಜಲಪಾತ, ಗೋವಾ, ಗೋಕರ್ಣ	5 ದಿನಗಳು	6,350/–

5 ವರ್ಷ ಮೇಲ್ಪಟ್ಟವರಿಗೆ ಪ್ರವಾಸ ದರ ನಿಗದಿಪಡಿಸಲಾಗಿದ್ದು, ಪ್ರಯಾಣ ದರ ಮತ್ತು ವಾಸ್ತವ್ಯ ಮಾತ್ರ ಸೇರಿರುತ್ತದೆ. ಊಟ–ತಿಂಡಿ, ಪ್ರವಾಸಿ ತಾಣಗಳ ಪ್ರವೇಶ ಟಿಕೆಟ್ ದರಗಳನ್ನು ಪ್ರವಾಸಿಗರೇ ಭರಿಸಬೇಕಾಗುತ್ತದೆ ಎಂದು ಕೆಎಸ್‌ಟಿಡಿಸಿ ಮೈಸೂರು ಸಾರಿಗೆ ವಿಭಾಗ ಕಚೇರಿ ಸಹಾಯಕ ವ್ಯವಸ್ಥಾಪಕ ಚೇತನ್ ತಿಳಿಸಿದ್ದಾರೆ.

ನಿಗಮದ ಎಸಿ ಬಸ್‌ಗಳಲ್ಲಿ ಪ್ರವಾಸ ಪ್ಯಾಕೇಜ್ ಅನ್ವಯವಾಗಲಿದ್ದು, ಅಗತ್ಯ ಬಿದ್ದಲ್ಲಿ ಕೆಎಸ್‌ಆರ್‌ಟಿಸಿ ಎಸಿ ಬಸ್‌ಗಳನ್ನು ಬಾಡಿಗೆಗೆ ಪಡೆದು ಪ್ರವಾಸಿಗರಿಗೆ ಪ್ರವಾಸಿ ತಾಣಗಳನ್ನು ವೀಕ್ಷಿಸಲು ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಅಂಬಾರಿಗೆ ಉತ್ತಮ ಪ್ರತಿಕ್ರಿಯೆ: ಈಗಾಗಲೇ ಮೈಸೂರಿನ ಪಾರಂಪರಿಕ ಕಟ್ಟಡ, ಸ್ಮಾರಕಗಳನ್ನು ವೀಕ್ಷಿಸಲು ಕಾರ್ಯಾಚರಿಸುತ್ತಿರುವ ನಿಗಮದ ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳಿಗೆ ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಶನಿವಾರ, ಭಾನುವಾರ ಹಾಗೂ ರಜಾ ದಿನಗಳಂದು ಹೆಚ್ಚುವರಿ ಟ್ರಿಪ್‌ಗಳಾಗುತ್ತಿವೆ. ದಸರಾ ಮಹೋತ್ಸವದ ಸಂದರ್ಭ ವಿದ್ಯುದ್ದೀಪಾಲಂಕರ ವಿರುವುದರಿಂದ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಇದ್ದು, ಆ ವೇಳೆ ಹೆಚ್ಚುವರಿ ಬಸ್‌ಗಳನ್ನು ಬಳಸಿಕೊಳ್ಳಲಾಗುವುದು ಎಂದು ಚೇತನ್ ತಿಳಿಸಿದರು.

ಅರಮನೆ ಆವರಣದಲ್ಲಿ ಗಜಮಜ್ಜನ



ಗಜಪಡೆ ಹಿರಿಯಣ್ಣ ಅರ್ಜುನ ಆನೆಗೆ ಅರಮನೆ ಆವರಣದಲ್ಲಿ ಗಜಮಜ್ಜನ ಮಾಡಿಸುತ್ತಿರುವುದು
ಚಿತ್ರ: ಎಂ.ಎನ್.ಲಕ್ಷ್ಮಿನಾರಾಯಣ ಯಾದವ್


ಮತ್ತೆ ದಸರಾ ವಂಚಿತ ಮದವೇರಿದ 'ವಿಕ್ರಮ'!

- ವಿಕ್ರಮನ ಬದಲಿಗೆ ರಾಂಪುರ ಕ್ಯಾಂಪ್‌ನಿಂದ 'ಕುಂತಿ'ಗೆ ಅವಕಾಶ
- ಕಳೆದ ವರ್ಷವೂ ಮದದಿಂದಾಗಿ ಅರಮನೆ ಕ್ಯಾಂಪ್‌ನಲ್ಲೇ ಉಳಿಯಬೇಕಾಯಿತು

ಮೈಸೂರು, ಆ.30(ಎಂಟಿವೈ)– ದಸರಾ ಮಹೋತ್ಸವದಲ್ಲಿ ಹಲವು ವರ್ಷಗಳಿಂದ ಪಟ್ಟದ ಆನೆಯ ಪಟ್ಟ ಕಟ್ಟಿಕೊಂಡು ಅರಮನೆಯಲ್ಲಿ ರಾಜಮನೆತನದವರ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಂಡು ಪ್ರಶಂಸೆಗೆ ಪಾತ್ರವಾಗುತ್ತಿದ್ದ 'ವಿಕ್ರಮ' ಸತತ ಎರಡನೇ ಬಾರಿಯೂ 'ಮದ'ದ ಕಾರಣ ಜಂಬೂಸವಾರಿಯಿಂದ ದೂರ ಉಳಿಯುತ್ತಿದ್ದು, ಅದರ ಬದಲಿಗೆ ಇದೇ ಮೊದಲ ಬಾರಿಗೆ 36 ವರ್ಷದ 'ಕುಂತಿ'ಯನ್ನು ಕರೆತರಲಾಗುತ್ತಿದೆ.

ಸ್ವಭಾವ, ದಂತ, ಸೊಂಡಿಲು ಹಾಗೂ ಮುಖ ಭಾವದ ಲಕ್ಷಣದಿಂದಾಗಿ ರಾಜಮನೆತನದವರ ಒಪ್ಪಿಗೆ ಮೇರೆಗೆ ವಿಕ್ರಮನನ್ನು ಹಲವು ವರ್ಷಗಳಿಂದ ಪಟ್ಟದ ಆನೆಯಾಗಿ ಪರಿಗಣಿಸಲಾಗಿತ್ತು. ದುಬಾರೆ ಆನೆ ಕ್ಯಾಂಪ್‌ನ 59 ವರ್ಷದ ವಿಕ್ರಮ ರಾಜಮನೆತನದವರು ಮಾತ್ರವಲ್ಲದೆ, ಅರಣ್ಯ ಇಲಾಖೆ ಸಿಬ್ಬಂದಿಯ ಮನಸ್ಸನ್ನು ಗೆದ್ದಿತ್ತು. ಇತರೆ ಆನೆಗಳಿಗೆ 2–3 ತಿಂಗಳಲ್ಲೇ ಮದ ಇಳಿದರೂ, ವಿಕ್ರಮನಿಗೆ ಮಾತ್ರ ಸುದೀರ್ಘ ಮದದ ಲಕ್ಷಣ ಕಂಡು ಬರುತ್ತಿದ್ದು, ಅರಣ್ಯ ಇಲಾಖಾ ಸಿಬ್ಬಂದಿಯನ್ನು ಚಿಂತೆಗೀಡು ಮಾಡುತ್ತಿದೆ. ಕಳೆದ ವರ್ಷವೂ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ವಿಕ್ರಮನಿಗೆ 'ಮದ' ಇಳಿಸಲು ಎಲ್ಲಾ ಪ್ರಯತ್ನ ಮಾಡಲಾಗಿತ್ತು. ಆದರೆ ಯಾವುದೂ ಫಲ ನೀಡದೆ ಕೊನೆಗೆ ಅರಮನೆ ಆವರಣದ ಕ್ಯಾಂಪ್‌ನಲ್ಲೇ ವಿಕ್ರಮನನ್ನು ಕಟ್ಟಿಹಾಕಲಾಗಿತ್ತು.

ಈ ಸಾಲಿನ ದಸರಾ ಗಜಪಡೆಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದ ವಿಕ್ರಮ ಈಗಲೂ ಮದವೇರಿರುವುದರಿಂದ ಎರಡನೇ ತಂಡದಲ್ಲಿ ಕರೆತರಲು ನಿರ್ಧರಿಸಲಾಗಿತ್ತು. ದುಬಾರೆ ಕ್ಯಾಂಪ್‌ನಲ್ಲಿಯೇ ಇರುವ ವಿಕ್ರಮನ ಸ್ಥಿತಿಯಲ್ಲಿ ಯಾವ ಸುಧಾರಣೆ ಕಂಡುಬಾರದ ಹಿನ್ನೆಲೆಯಲ್ಲಿ ವಿಕ್ರಮನನ್ನು, ಇಂದು ಮೇಲಾಧಿಕಾರಿಗಳ ಅನುಮತಿ ಪಡೆದು ಕೈಬಿಟ್ಟು, ಮೀಸಲು ಆನೆ ಕುಂತಿಯನ್ನು ಬಂಡೀಪುರದ ರಾಂಪುರದಿಂದ ಕರೆತರಲಾಗುತ್ತಿದೆ. ಸೆ.7ರಂದು ಎರಡನೇ ತಂಡದಲ್ಲಿ ಒಟ್ಟು ನಾಲ್ಕು ಆನೆ ಆಗಮಿಸಲಿದ್ದು, ಅದರಲ್ಲಿ ಕುಂತಿಯೂ ಇರಲಿದೆ. ಮಹೇಂದ್ರ, ಪಾರ್ಥಸಾರಥಿ ಹಾಗೂ ಕುಂತಿ ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿವೆ.



ಮದವೇರಿದ ಕಾರಣ 'ವಿಕ್ರಮ' ಔಟ್

> ದಸರಾ ಗಜಪಡೆಯಲ್ಲಿ ಆಯ್ಕೆ ಮಾಡಲಾಗಿದ್ದ 14 ಆನೆಗಳಲ್ಲಿ ವಿಕ್ರಮನೂ ಇದ್ದ. ಮದ ಏರಿದ್ದರಿಂದ ಅದನ್ನು ಎರಡನೇ ತಂಡದಲ್ಲಿ ಕರೆತರಲು ಉದ್ದೇಶಿಸಲಾಗಿತ್ತು. ಆದರೆ, ಇವತ್ತಿನವರೆಗೂ ಅವನ ಸ್ಥಿತಿ ಸುಧಾರಣೆ ಆಗದೇ ಇರುವ ಕಾರಣ 2ನೇ ತಂಡದಿಂದಲೂ ಕೈಬಿಟ್ಟು, ಹೊಸ ಆನೆ ಕುಂತಿಯನ್ನು ಕರೆತರಲಾಗುತ್ತಿದೆ. – ಡಾ.ವಿ.ಕರಿಕಾಳನ್, ಡಿಸಿಎಫ್

ಗಣೇಶ ಚತುರ್ಥಿ, ದಸರಾ ಹಿನ್ನೆಲೆ: ಮೈಸೂರಲ್ಲಿ ಪೊಲೀಸರ ಪಥ ಸಂಚಲನ

'ನಿಮ್ಮೊಂದಿಗೆ ನಾವಿದ್ದೇವೆ...': ಅಭಯ ಸಂದೇಶ ರವಾನೆ

ಮೈಸೂರು, ಆ.30(ಆರ್‌ಕೆ)– ಮೈಸೂರಿನ ಎನ್.ಆರ್., ಮಂಡಿ ಮೊಹಲ್ಲಾ, ಉದಯಗಿರಿ ಭಾಗಗಳಲ್ಲಿ ಪಥ ಸಂಚಲನ (ರೂಟ್ ಮಾರ್ಚ್) ನಡೆಸಿದ ಪೊಲೀಸರು, 'ನಿಮ್ಮೊಂದಿಗೆ ನಾವಿದ್ದೇವೆ' ಎಂದು ಸಾರ್ವಜನಿಕರಿಗೆ ಅಭಯ ಸಂದೇಶ ರವಾನಿಸಿದರು.

ಗಣೇಶ ಚತುರ್ಥಿ ಹಾಗೂ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಗಣಪತಿ ಪ್ರತಿಷ್ಠಾಪನೆ, ಮೆರವಣಿಗೆ, ವಿಸರ್ಜನೆ ಹಾಗೂ ವಿಜಯದಶಮಿ ಮೆರವಣಿಗೆ ವೇಳೆ ಶಾಂತಿ–ಸುವ್ಯವಸ್ಥೆ ಕಾಪಾಡುವುದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸುವ ದೃಷ್ಟಿಯಿಂದ ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸಲು ಪೊಲೀಸರು ಇಂದು ಸಂಜೆ 4 ರಿಂದ 6.30 ಗಂಟೆವರೆಗೆ ಪಥ ಸಂಚಲನ ನಡೆಸಿದರು.

ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರ ನಿರ್ದೇಶನದಂತೆ ಡಿಸಿಪಿ ಪ್ರದೀಪ್ ಗುಂಟಿ ಅವರ ನೇತೃತ್ವದಲ್ಲಿ ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಹಾಗೂ ಎನ್.ಆರ್.ಉಪ ವಿಭಾಗದ ಎಸಿಪಿ ಎಂ.ಶಿವಶಂಕರ್ ಅವರ ಮೇಲ್ವಿಚಾರಣೆಯೊಂದಿಗೆ ನಡೆದ ಮಾರ್ಗ ಪಥ ಸಂಚಲನದಲ್ಲಿ ಸಿಟಿ ಸಿವಿಲ್, ಕೆಎಸ್‌ಆರ್‌ಪಿ, ಸಿಎಆರ್ ತುಕಡಿ ಮತ್ತು ಹೋಂಗಾರ್ಡ್ ಸಿಬ್ಬಂದಿ ಪಾಲ್ಗೊಂಡಿದ್ದರು. ಕ್ಯಾತಮಾರನಹಳ್ಳಿ ಟೆಂಟ್ ಬಳಿಯಿಂದ ಆರಂಭವಾದ ಪಥ ಸಂಚಲನವು, ಹರಿಶ್ಚಂದ್ರ ಘಾಟ್ ರಸ್ತೆ, ಕೆ.ಎನ್.ಪುರ, ಗೌಸಿಯಾನಗರ, ಉದಯಗಿರಿ ಮುಖ್ಯ ರಸ್ತೆ, ಕೂಬಾ ಮಸೀದಿ ರಸ್ತೆ, ಮಹದೇವಪುರ ರೋಡ್‌ನಲ್ಲಿ ಅಂತ್ಯಗೊಂಡಿತು. ಮತ್ತೊಂದೆಡೆ ತಿಲಕ್ ನಗರದ ಈದ್ಗಾ ಮೈದಾನದಿಂದ ಆರಂಭವಾಗಿ ಕೈಲಾಸಪುರಂ, ಪುಲಿಕೇಶಿ ರಸ್ತೆ, ಫೌಂಟೇನ್ ಸರ್ಕಲ್, ಶಿವಾಜಿ ರೋಡ್, ರಾಜೇಂದ್ರ ನಗರ ಸರ್ಕಲ್, ಕುರಿ ಮಂಡಿ ಸರ್ಕಲ್, ಕೆಸರೆ ಮುಖ್ಯ ರಸ್ತೆಗಳಲ್ಲಿ ಸಾಗಿದ ಪಥ ಸಂಚಲನವು ಆರ್.ಎಸ್.ನಾಯ್ಡು ನಗರದಲ್ಲಿ ಅಂತ್ಯಗೊಂಡಿತು. ಎಸಿಪಿ, ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಪ್ರೊಬೇಷನರಿ ಸಬ್ ಇನ್ಸ್‌ಪೆಕ್ಟರ್‌ಗಳೂ ಸೇರಿದಂತೆ ನೂರಾರು ಪೊಲೀಸ್ ಸಿಬ್ಬಂದಿ ಪಥ ಸಂಚಲನದಲ್ಲಿ ಭಾಗವಹಿಸಿದ್ದರು.



ದಸರೆಗೆ ಅರಮನೆ ಆವರಣದಲ್ಲಿ ಭರದ ಸಿದ್ಧತೆ

- ಅರಮನೆ ದೀಪಾಲಂಕಾರಕ್ಕೆ 25 ಸಾವಿರ ಹೊಸ ಬಲ್ಬ್ ಅಳವಡಿಕೆ
- ಅರಮನೆ ಆವರಣದ ಉದ್ಯಾನದಲ್ಲಿ ಅಲಂಕಾರಿಕ ವಿದ್ಯುತ್ ಕಂಬ
- ಎತ್ತರದ 25 ಫೈವ್‌ಲೈಟ್ ಕಂಬಗಳಲ್ಲಿ ದುರಸ್ತಿ ಕಾರ್ಯ



ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಆ.30–ವಿದ್ಯುತ್ ಹೊಂಬೆಳಕಿನಿಂದ ಕಂಗೊಳಿಸುವ ಐತಿಹಾಸಿಕ ಅಂಬಾವಿಲಾಸ ಅರಮನೆಯ ಸೊಬಗಿಗೆ ಪೂರಕವಾಗಿ ಇಲ್ಲಿನ ಆವರಣವೂ ಬೆಳಕಿನಿಂದ ಕಂಗೊಳಿಸಲಿದ್ದು, ಈ ನಿಟ್ಟಿನಲ್ಲಿ ಸಿದ್ಧತಾ ಕಾರ್ಯ ಭರದಿಂದ ಸಾಗಿದೆ.

ಕೊರೊನಾ ಕರಿನೆರಳಿನಿಂದ ಕಳೆದೆರಡು ವರ್ಷ ಸರಳವಾಗಿ ಆಚರಿಸಲಾದ ನಾಡಹಬ್ಬ ದಸರಾವನ್ನು ಈ ಭಾರಿ ವೈಭವದಿಂದ ಸವಿಯಬೇಕೆಂಬ ನಿಟ್ಟಿನಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಮೈಸೂರಿನ ಪ್ರಮುಖ ರಸ್ತೆಗಳು, ವೃತ್ತ, ಜಂಕ್ಷನ್‌ಗಳು ಸೇರಿದಂತೆ ಈ ಬಾರಿ 110–120 ಕಿ.ಮೀ. ವಿದ್ಯುತ್ ದೀಪಾಲಂಕಾರ ಮಾಡಲು ತೀರ್ಮಾನಿಸಲಾಗಿದೆ. ಅಲ್ಲದೆ ವಿಶೇಷ ಮೆರಗು ನೀಡುವ ವಿದ್ಯುತ್ ದೀಪಾಲಂಕೃತ ಆಕೃತಿಗಳನ್ನು ಅಳವಡಿಸುವ ಚಿಂತನೆ ನಡೆದಿದೆ. ಹಾಗೆಯೇ ಅಂಬಾವಿಲಾಸ ಅರಮನೆಯ ವಿದ್ಯುತ್ ದೀಪಗಳ ದುರಸ್ತಿ ಜೊತೆಗೆ ಈ ಬಾರಿ ಆಕರ್ಷಕ ರೀತಿಯಲ್ಲಿ ವ್ಯವಸ್ಥೆಗೊಳಿಸುವ ಕಾರ್ಯ ವೇಗವಾಗಿ ಸಾಗುತ್ತಿದೆ.

ಎರಡು ವರ್ಷ ಅರಮನೆ ಅಂಗಳಕ್ಕಷ್ಟೇ ದಸರಾ ಸಂಭ್ರಮ ಸೀಮಿತವಾಗಿತ್ತು ಆಗಲೂ ಅರಮನೆ ವಿದ್ಯುತ್ ದೀಪಾಲಂಕಾರ ದುರಸ್ತಿ ಮಾಡಲಾಗಿತ್ತಾದರೂ ಅರಮನೆ ಆವರಣದ ವಿದ್ಯುತ್ ದೀಪಗಳ ಬಗ್ಗೆ ಗಮನಹರಿಸಿರಲಿಲ್ಲ. ಅರಮನೆ ಸುತ್ತಲಿನ ವಿದ್ಯುತ್ ಕಂಬಗಳು, ಉದ್ಯಾನಗಳ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಸರಿಪಡಿಸುವ ಗೋಜಿಗೆ ಹೋಗಿರಲಿಲ್ಲ. ಆದರೆ ಈ ಬಾರಿ ವಿಜೃಂಭಣೆ ದಸರಾ ನಡೆಯಲಿರುವ ಹಿನ್ನೆಲೆಯಲ್ಲಿ ಅರಮನೆ ಅಂಗಳಕ್ಕೂ ಹೊಸ ಮೆರಗು ನೀಡಲಾಗುತ್ತಿದೆ. ಅರಮನೆಯ ಇಡೀ ಆವರಣದಲ್ಲಿ ವಿದ್ಯುತ್ ಬೆಳಕಿನ ಬೆಳದಿಂಗಳ ಸೃಷ್ಟಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ.

25 ಸಾವಿರ ಬಲ್ಬ್ ಬದಲು: ಇಂಡೋ–ಸಾರ್ಸೆನಿಕ್ ಶೈಲಿಯ ಅಂಬಾವಿಲಾಸ ಅರಮನೆಯನ್ನು 1 ಲಕ್ಷಕ್ಕೂ ಹೆಚ್ಚು ಬಲ್ಬ್‌ಗಳಿಂದ ಅಲಂಕರಿಸಲಾಗಿದೆ. ಆಗಾಗ್ಗೆ ನಿರ್ವಹಣೆ ಮಾಡಿದರೂ ಗಾಳಿ, ಮಳೆ ಹೊಡೆತ, ಪಕ್ಷಿಗಳು ಕುಳಿತುಕೊಳ್ಳುವುದು



ಇನ್ನಿತರ ಕಾರಣಗಳಿಂದ ಪ್ರತಿ ವರ್ಷ 20–25 ಸಾವಿರ ಬಲ್ಬ್‌ಗಳು ಹಾಳಾಗುತ್ತವೆ. ಈ ಬಾರಿಯೂ ಸರಿಸುಮಾರು ಹಿಂದಿನಷ್ಟೇ ಬಲ್ಬ್‌ಗಳು ಕೆಟ್ಟು ಹೋಗಿವೆ. ಸದ್ಯ ಅರಮನೆ ಸೇರಿದಂತೆ ಜಯಮಾರ್ತಾಂಡ, ಜಯರಾಮ–ಬಲರಾಮ, ಬ್ರಹ್ಮಪುರಿ, ಕರಿಕಲ್ಲು ತೊಟ್ಟಿ, ವರಹಾ ದ್ವಾರದ ಕಮಾನುಗಳಲ್ಲಿ ಹಾಳಾಗಿರುವ ಬಲ್ಬ್‌ಗಳನ್ನು ತೆರವು ಮಾಡಿ, ಹೊಸ ಬಲ್ಬ್‌ಗಳನ್ನು ಅಳವಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಅಲಂಕಾರಿಕಾ ವಿದ್ಯುತ್ ಕಂಬ: ಅರಮನೆ ಆವರಣದ ಜಯಮಾರ್ತಾಂಡ ದ್ವಾರದ ರಸ್ತೆಯ ಎರಡು ಬದಿಯಲ್ಲಿರುವ ಪಾರ್ಕ್, ಭುವನೇಶ್ವರಿ ದೇವಾಲಯದ ಹಾಗೂ ವರಹಾಸ್ವಾಮಿ ದೇವಾಲಯದ ಎದುರಿನ ಉದ್ಯಾನಗಳಲ್ಲಿ ಮೂರು ಅಡಿ ಎತ್ತರದ 160ಕ್ಕೂ ಹೆಚ್ಚು ಅಲಂಕಾರಿಕ ವಿದ್ಯುತ್ ಕಂಬಗಳನ್ನು



ಅಳವಡಿಸಲಾಗಿದೆ. ಇದರಲ್ಲಿ 30–40 ಕಂಬಗಳು ಹಾನಿಯಾಗಿದ್ದು, ಅವುಗಳನ್ನು ಬದಲಿಸುವ ಕಾರ್ಯ ನಡೆದಿದೆ. ಅರಮನೆ ಆವರಣದ ವಿವಿಧೆಡೆ 40 ಅಡಿ ಎತ್ತರದ 25 ಫೈವ್‌ಲೈಟ್ ವಿದ್ಯುತ್ ಕಂಬಗಳಿವೆ. ಒಂದು ಕಂಬದಲ್ಲಿ ಅತ್ಯಾಕರ್ಷಕವಾದ ಐದು ಬಲ್ಬ್‌ಗಳಿದ್ದು, ಕೆಟ್ಟಿರುವುದನ್ನು ದುರಸ್ತಿ ಮಾಡಲಾಗುತ್ತಿದೆ. ಇದಕ್ಕಾಗಿ ಕಾಲಾವದಿ ನಿರ್ಮಿಸಲಾಗಿದ್ದು, ಎಲೆಕ್ಟ್ರಿಷಿಯನ್‌ಗಳು ದುರಸ್ತಿ ಕಾರ್ಯದಲ್ಲಿ ತೊಡಗಿದ್ದಾರೆ.

ಭರದ ಸಿದ್ಧತೆ: ಈ ಸಂಬಂಧ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಅರಮನೆ ಆವರಣದಲ್ಲಿ ದಸರಾ ದೀಪಾಲಂಕಾರಕ್ಕೆ ಸಿದ್ಧತಾ ಕಾರ್ಯ ಆರಂಭಿಸಲಾಗಿದೆ. ಅರಮನೆ ಹಾಗೂ ಎಲ್ಲಾ ಪ್ರವೇಶ ದ್ವಾರಗಳಲ್ಲಿನ ವಿದ್ಯುತ್ ಬಲ್ಬ್‌ಗಳ ಸ್ಥಿತಿಗತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ. 20–25 ಸಾವಿರ ಬಲ್ಬ್‌ಗಳು ಕೆಟ್ಟಿರಬಹುದು ಎಂದು ಅಂದಾಜಿಸಲಾಗಿದ್ದು ಪರಿಶೀಲನೆ ಬಳಿಕ ನಿಖರವಾಗಿ ತಿಳಿಯಲಿದೆ. ಕೆಟ್ಟಿರುವ ಬಲ್ಬ್‌ಗಳನ್ನು ತೆರವು ಮಾಡಿ ಅದೇ ವೇಳೆ ಹೊಸ ಬಲ್ಬ್‌ಗಳನ್ನು ಅಳವಡಿಸಲಾಗುತ್ತದೆ. ಅರಮನೆಯ ಮೇಲೆ 147 ಅಡಿ ಎತ್ತರದಲ್ಲಿರುವ ಕೆಂಪು ದೀಪದ ಗುಮ್ಮಟದವರೆಗೂ ಬಲ್ಬ್‌ಗಳನ್ನು ಪರಿಶೀಲಿಸಬೇಕಿದ್ದು, ಅದಕ್ಕಾಗಿ ಕ್ರೇನ್‌ಗಳನ್ನು ಬಳಸಬೇಕಾಗುತ್ತದೆ. ಇದು ಕಷ್ಟಸಾಧ್ಯವಾದರೂ ಎಲೆಕ್ಟ್ರಿಷಿಯನ್ ವಿಭಾಗ ಅತ್ಯಂತ ಜಾಗರೂಕತೆಯಿಂದ ಕೆಲಸ ನಿರ್ವಹಿಸಲಿದೆ ಎಂದು ತಿಳಿಸಿದರು. ಅರಮನೆ ದೀಪಾಲಂಕಾರದ ಮೆರಗಿಗೆ ಪೂರಕವಾಗಿ ಆವರಣವನ್ನೂ ಸಜ್ಜುಗೊಳಿಸಲಾಗುವುದು. ಅರಮನೆ ಆವರಣದ ರಸ್ತೆ ಇಕ್ಕೆಲಗಳಲ್ಲಿರುವ ಆಕರ್ಷಕ ವಿದ್ಯುತ್ ಕಂಬಗಳು, ಫೈವ್‌ಲೈಟ್ಸ್, ಉದ್ಯಾನದಲ್ಲಿರುವ ಅಲಂಕಾರಿಕಾ ಕಂಬಗಳ ಪರಿಶೀಲನೆ ಕಾರ್ಯವೂ ಭರದಿಂದ ಸಾಗಿದೆ. ಸಂಪೂರ್ಣ ಹಾಳಾಗಿದ್ದಲ್ಲಿ ಅವುಗಳನ್ನು ಬದಲಿಸಲಾಗುವುದು. ಸುಸ್ಥಿತಿಯಲ್ಲಿದ್ದರೆ ಬಣ್ಣ ಲೇಪನ ಮಾಡಲಾಗುತ್ತದೆ. ಅರಮನೆಯ ಹೊರಭಾಗ ಮಾತ್ರವಲ್ಲದೇ ಒಳಪ್ರಾಂಗಣದ ವಿದ್ಯುತ್ ದೀಪಗಳನ್ನೂ ಪರಿಶೀಲಿಸಲಾಗುತ್ತಿದೆ. ದರ್ಬಾರ್ ಹಾಲ್, ಕಲ್ಯಾಣ ಮಂಟಪ ಮತ್ತು ಖಾಸಗಿ ದರ್ಬಾರ್ ಹಾಲ್‌ನಲ್ಲಿರುವ ಕಣ್ಮನ ಸೆಳೆಯುವ ಸ್ಕ್ಯಾಫೋಲ್ಡಿಂಗ್ (ದೀಪಗಳ ಗೊಂಚಲು)ನಲ್ಲಿ ಕೆಟ್ಟಿರುವ ಬಲ್ಬ್ ಬದಲಿಸಲಾಗುತ್ತಿದೆ. ಈ ಬಾರಿ ವಿಜೃಂಭಣೆಯಿಂದ ದಸರಾ ಆಚರಿಸುತ್ತಿರುವುದರಿಂದ ಅರಮನೆ ಹಾಗೂ ಆವರಣವನ್ನು ಸಿಂಗರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದೇವೆ ಎಂದರು.



ಮೈಸೂರು ಮಿತ್ರ ಬುಧವಾರ 31 ಆಗಸ್ಟ್ 2022

ಶಾಸಕರ ಇಚ್ಛಾಶಕ್ತಿಯಿಂದ ನಂ.ಗೂಡು ಸಮಗ್ರ ಅಭಿವೃದ್ಧಿ

ತಾಲೂಕು ಬಿಜೆಪಿ ಅಧ್ಯಕ್ಷ ಮಹೇಶ್



ನಂಜನಗೂಡು, ಆ.30– ನುಗು ಏತ ನೀರಾವರಿ ಯೋಜನೆ ಹಾಗೂ ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ಬೆಳ್ಳಿರಥ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಲು ಶಾಸಕ ಬಿ.ಹರ್ಷವರ್ಧನ್ ಅವರ ಇಚ್ಛಾಶಕ್ತಿಯೇ ಕಾರಣ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಹೊರಳವಾಡಿ ಪಿ.ಮಹೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮುಖಂಡರು ಎಸ್ಸಿ, ಎಸ್ಟಿ ವಿಶೇಷ ಘಟಕ ಯೋಜನೆ, ಶಾಸಕರ ಪ್ರದೇಶಾಭಿವೃದ್ಧಿ ಬಿಟ್ಟು ಹೊಸ ಯೋಜನೆ ತಂದಿಲ್ಲ. ನುಗು ಏತ ನೀರಾವರಿ ಯೋಜನೆ ಸಮ್ಮಿಶ್ರ ಸರ್ಕಾರದ ಕೊಡುಗೆ. ಇದರಲ್ಲಿ ಶಾಸಕರ ಶ್ರಮವಿಲ್ಲ ಎಂದು ಆರೋಪಿಸಿದ್ದಾರೆ. ನಂಜನಗೂಡಿನಲ್ಲಿ ಕಳೆದ 4 ವರ್ಷಗಳಿಂದ ಶಾಸಕರ ಅಭಿವೃದ್ಧಿಯಿಂದಾಗಿ ಮಾತಿಲ್ಲದೆ ಇದ್ದಿದ್ದರಿಂದಾಗಿ ಕ್ಷೇತ್ರದಲ್ಲಿ ವಿರೋಧ ಪಕ್ಷ ಇಲ್ಲವೆಂದೇ ನಾವು ಭಾವಿಸಿದ್ದೆವು. ಈಗಲಾದರೂ ನಿದ್ರೆಯಿಂದ ಎಚ್ಚೆತ್ತು ನಾವಿದ್ದೇವೆಂದು ಹೇಳಿಕೆ ನೀಡಿರುವುದು ಸಂತೋಷದ ವಿಚಾರ. ವಿರೋಧ ಪಕ್ಷದವರು ಶಾಸಕ ಬಿ.ಹರ್ಷವರ್ಧನ್ ಅಭಿವೃದ್ಧಿ ಕಾರ್ಯ ಸಹಿಸದೆ ಚುನಾವಣೆ ಹತ್ತಿರ ಬಂತೆಂದು ಬಾಯಿ ಚಪಲಕ್ಕೆ ಆಧಾರ ರಹಿತ ಆರೋಪ ಮಾಡುತ್ತಿರುವುದು ಅವರಿಗೆ ಶೋಭೆ ತರುವುದಿಲ್ಲ ಎಂದರು.

ಸುತ್ತೂರು ಜಾತ್ರೆಯಲ್ಲಿ ಶಾಸಕ ಬಿ.ಹರ್ಷವರ್ಧನ್ ಅವರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಮೂಲಕ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಹೇಳಿಸಿ ನುಗು ಏತ ನೀರಾವರಿ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಿದರು. ಆದರೆ ಯೋಜನೆಗೆ ಬಿಡುಗಡೆಯಾಗಿದ್ದ ಅನುದಾನ ವಾಪಸ್ ಪಡೆದಿದ್ದರು. ಶಾಸಕರ ಇಚ್ಛಾಶಕ್ತಿ, ಭಗೀರಥ ಪ್ರಯತ್ನದಿಂದಾಗಿ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅವರ ಮನವೊಲಿಸಿ ಯೋಜನೆಗೆ ಅನುದಾನ ಬಿಡುಗಡೆಗೊಳಿಸಿದರು. ಈಗಿನ ಸಿಎಂ ಬಸವರಾಜ ಬೊಮ್ಮಾಯಿ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆ ಆಗಿದೆ. ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ಇಷ್ಟು ವರ್ಷವಾದರೂ ಬೆಳ್ಳಿರಥ ನಿರ್ಮಾಣ ಸಾಧ್ಯವಾಗಿರಲಿಲ್ಲ. ಆದರೆ ಶಾಸಕರಿಂದ ಅದು ಕಾರ್ಯರೂಪಕ್ಕೆ ಬರುತ್ತಿದೆ. ಶಾಸಕ ಹರ್ಷವರ್ಧನ್ ಅವರಿಗಿರುವ ಬದ್ಧತೆ ಹಾಗೂ ಇಚ್ಛಾಶಕ್ತಿಯಿಂದ ಕ್ಷೇತ್ರ ಅಭಿವೃದ್ಧಿಯಾಗುತ್ತಿದೆ ಎಂಬುದನ್ನು ಕಾಂಗ್ರೆಸ್ ನಾಯಕರು ಅರಿಯಬೇಕು ಎಂದರು.

ಶಾಸಕರು ತಮ್ಮ ಅಧಿಕಾರವಧಿಯಲ್ಲಿ ಕೋವಿಡ್, ಪ್ರವಾಹದ ಪರಿಸ್ಥಿತಿ ನಡುವೆಯೂ ಕ್ಷೇತ್ರಕ್ಕೆ 600 ಕೋಟಿ ಅನುದಾನ ತಂದು ಎಸ್ಸಿ, ಎಸ್ಟಿ ಬೀದಿಗಳು ಸೇರಿದಂತೆ ಸಾಮಾನ್ಯ ಬೀದಿಗಳಲ್ಲೂ ಚರಂಡಿ, ಸಿಸಿ ರಸ್ತೆಗಳನ್ನು ನಿರ್ಮಿಸಿದ್ದಾರೆ. 134 ನೂತನ ಶಾಲಾ ಕಟ್ಟಡ ನಿರ್ಮಾಣ ಮಾಡಿದ್ದಾರೆ. ದೊಡ್ಡಕವಲಂದೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಮರು ಪೈಪ್‌ಲೈನ್‌ಗಾಗಿ 8 ಕೋಟಿ, ಬಸವ ಭವನಕ್ಕೆ 2.5 ಕೋಟಿ, ರಾಘವೇಂದ್ರಸ್ವಾಮಿ ಪಂಚಬೃಂದಾವನ, ತಡೆಗೋಡೆಗೆ 2 ಕೋಟಿ, ಬಸವ ಪುತ್ಥಳಿಗೆ 1 ಕೋಟಿ ಅನುದಾನ ತಂದು ಹಲವು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಆರ್.ಧ್ರುವನಾರಾಯಣ್ ಹಾಗೂ ಡಾ.ಹೆಚ್.ಸಿ.ಮಹದೇವಪ್ಪ ಬಣ ರಾಜಕೀಯ ನಡೆಯುತ್ತಿದೆ. ಮೊದಲು ನಿಮ್ಮ ಮನೆ ಸರಿಮಾಡಿಕೊಳ್ಳಿ ಎಂದು ಟಾಂಗ್ ನೀಡಿದರು.

ಗೋಷ್ಠಿಯಲ್ಲಿ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿಸುಬ್ಬಣ್ಣ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಇದ್ದರು.

ಸರಗೂರಲ್ಲಿ ಶ್ರದ್ಧಾಭಕ್ತಿಯ ಸ್ವರ್ಣಗೌರಿ ವ್ರತ



ಸರಗೂರು, ಆ.30– ಪಟ್ಟಣದಲ್ಲಿ ಮಂಗಳವಾರ ಗೃಹಿಣಿಯರು ಶ್ರದ್ಧಾಭಕ್ತಿಯಿಂದ ಸ್ವರ್ಣಗೌರಿ ವ್ರತ ಆಚರಿಸಿದರು. ಮುಂಜಾನೆಯೇ ಗೃಹಿಣಿಯರು, ಮಕ್ಕಳು ಹೊಸಬಟ್ಟೆ ಧರಿಸಿ ಕಪಿಲಾ ನದಿಗೆ ತೆರಳಿ ಗಂಗಾಪೂಜೆ ನೆರವೇರಿಸಿದರು. ಬಳಿಕ ಪೂರ್ಣ ಕುಂಭ ಕಳಸದೊಂದಿಗೆ ಮೆರವಣಿಗೆಯಲ್ಲಿ ಪಟ್ಟಣದ ಶ್ರೀಬಸವೇಶ್ವರಸ್ವಾಮಿ ದೇವಸ್ಥಾನಕ್ಕೆ ಆಗಮಿಸಿ ವಿಶೇಷವಾಗಿ ಅಲಂಕೃತಗೊಂಡ ಮಂಟಪದಲ್ಲಿ ಗಂಗೆಯನ್ನಿಟ್ಟು, ಗೌರಿಯನ್ನು ಪ್ರತಿಷ್ಠಾಪಿಸಿದರು. ನಂತರ ದೇವರನ್ನು ವಿವಿಧ ಹೂಗಳಿಂದ ಅಲಂಕರಿಸಿ ತಮ್ಮ ಮನೆಗಳಿಂದ ತಂದ ಬಾಗಿನಗಳನ್ನು ಅರ್ಪಿಸಿ ಪೂಜಾ ಕೈಂಕರ್ಯಗಳನ್ನು ನಡೆಸಿದರು. ಅಲ್ಲದೇ ಗೌರಿ ಜಪ ಮಾಡುವ ಮೂಲಕ ವ್ರತ ನಡೆಸಿ ಭಕ್ತಿಗೀತೆಗಳನ್ನು ಹಾಡಿದರು. ನಂತರ ಗೌರಮ್ಮನಿಗೆ ಮಹಾಮಂಗಳಾರತಿ ಮಾಡಿದ ಗೃಹಿಣಿಯರು ಪ್ರಸಾದ ವಿನಿಯೋಗ ಮಾಡಿದರು. ಒಬ್ಬರಿಗೊಬ್ಬರು ಅರಿಶಿನ ಕುಂಕುಮ ನೀಡಿ ಬಾಗಿನ ಬದಲಾಯಿಸಿಕೊಂಡರು. ಮಕ್ಕಳು ಸಹ ಪೂಜಾ ಕಾರ್ಯದಲ್ಲಿ ಭಾಗವಹಿಸಿದ್ದರು.

ಈ ವೇಳೆ ಪುರೋಹಿತರಾದ ರವಿಶಾಸ್ತ್ರಿ, ವಿರೂಪಾಕ್ಷ ಪೂಜೆ ಕೈಂಕರ್ಯದ ನೇತೃತ್ವ ವಹಿಸಿದ್ದರು. ವೀರಶೈವ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಉಪಾಧ್ಯಕ್ಷ ಶರಣುಬನ್ನಿ ನಾಗರಾಜು, ಕಾರ್ಯದರ್ಶಿ ಲೋಕೇಶ್, ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಸಮಾಜದ ಬಂಧುಗಳು ಭಾಗವಹಿಸಿದ್ದರು.

ಗೌರಿ–ಗಣೇಶ ಹಬ್ಬದ ಹಿನ್ನೆಲೆ ಸಾರ್ವಜನಿಕ ಸಭೆ

ಇಲಾಖೆ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ: ಡಿವೈಎಸ್ಪಿ ಗೋವಿಂದರಾಜು



ತಿ.ನರಸೀಪುರ, ಆ.30– ಪೊಲೀಸ್ ಇಲಾಖೆಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಗೌರಿ–ಗಣೇಶ ಹಬ್ಬ ಆಚರಿಸುವಂತೆ ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದರಾಜು ತಿಳಿಸಿದರು.

ಗೌರಿ–ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಪೊಲೀಸ್ ಠಾಣೆ ಮುಂಭಾಗ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಗೌರಿ–ಗಣೇಶ ಮೂರ್ತಿ ಪ್ರತಿಷ್ಠಾಪಿಸುವವರು ಕಡ್ಡಾಯವಾಗಿ ಮಾಹಿತಿ ನೀಡಿ ಅನುಮತಿ ಪಡೆದಿರಬೇಕು. ಡಿಜೆ ನಿಷೇಧಿಸಲಾಗಿದ್ದು, ಪೊಲೀಸರಿಗೆ ಗೊತ್ತಾಗುವುದಿಲ್ಲ ಎಂದು ಡಿಜೆ ಹಾಕುವುದು. ಮದ್ಯಪಾನ ಮಾಡಿ ಕುಣಿಯುವುದು ಸೂಕ್ತವಲ್ಲ. ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು. ಒಬ್ಬರಿಂದ ತೊಂದರೆಯಾದರೆ ಇಡೀ ಬಡಾವಣೆಗೆ ತೊಂದರೆಯಾಗುತ್ತದೆ. ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಎಚ್ಚರಿಕೆ ವಹಿಸಿ ಕುಟುಂಬ ಸಮೇತರಾಗಿ ಹಬ್ಬ ಆಚರಿಸಿ. ಅಹಿತಕರ ಘಟನೆ ನಡೆದಲ್ಲಿ ನಿಮಗೂ ನಮಗೂ ತೊಂದರೆಯಾಗುತ್ತದೆ. ಯಾವುದೇ ತೊಂದರೆ ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ಅಥವಾ 112ಗೆ ಕರೆ ಮಾಡಿ ಮಾಹಿತಿ ನೀಡಿದರೆ ತಕ್ಷಣ ಪೊಲೀಸರು ಸ್ಥಳಕ್ಕೆ ಬರುತ್ತಾರೆ ಎಂದರು.

ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಎನ್.ಜಿ.ಕೃಷ್ಣಪ್ಪ ಮಾತನಾಡಿ, ಯುವಕರು ಗಣಪತಿ ಹಬ್ಬದ ಹೆಸರಲ್ಲಿ ಅನಗತ್ಯ ಸಮಸ್ಯೆಗಳನ್ನು ತಂದುಕೊಳ್ಳಬೇಡಿ. ಚೆನ್ನಾಗಿ ಅಧ್ಯಯನ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಇಲಾಖೆ ನಿಯಮಗಳನ್ನು ಪಾಲಿಸಿ ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಣೆ ಮಾಡಬೇಕು. ಪೊಲೀಸರ ಅಗತ್ಯವಿದ್ದಲ್ಲಿ ಮಾಹಿತಿ ನೀಡುವಂತೆ ತಿಳಿಸಿದರು.

ಸಭೆಯಲ್ಲಿ ಎಸ್ಐ ತಿರುಮಲೇಶ್, ಪುರಸಭಾಧ್ಯಕ್ಷ ಎಸ್.ಮದನ್ ರಾಜ್, ಸದಸ್ಯರಾದ ಬಾದಾಮಿ ಮಂಜು, ಕಿರಣ್, ಹಿರಿಯ ಮುಖಂಡ ಪಿ.ಸ್ವಾಮಿನಾಥಗೌಡ, ಬೆನಕನಹಳ್ಳಿ ಗಂಗಾಧರ್, ರವಿ, ಕರಿಯಪ್ಪ, ಸುಬ್ರಹ್ಮಣ್ಯ, ಲಕ್ಷ್ಮಣ, ಕಿರಗಸೂರು ಮಹದೇವಸ್ವಾಮಿ, ಸಿದ್ದರಾಜು ಸೇರಿದಂತೆ ಮುಖಂಡರು ಹಾಜರಿದ್ದರು.



ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಯುವ ಮುಖಂಡ ಹಾಗೂ ವಸತಿ ಯೋಜನೆ ಜಾಗೃತ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಅವರ ಹುಟ್ಟುಹಬ್ಬವನ್ನು ಮಂಗಳವಾರ ರಾತ್ರಿ ಅದ್ಧೂರಿಯಾಗಿ ಆಚರಿಸಲಾಯಿತು. ಈ ವೇಳೆ ಪಟ್ಟಣದ 22ನೇ ವಾರ್ಡ್ ಸದಸ್ಯ ಬಾದಾಮಿ ಮಂಜು ಅಭಿನಂದಿಸಿದರು.



ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಸರ್ಕಾರಿ ಪದವಿಪೂರ್ವ ಕಾಲೇಜು ಹಾಗೂ ಪ್ರೌಢಶಾಲೆಯಲ್ಲಿ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಸಾಹಿತಿ ಡಾ.ಕಿರಣ್ ಸಿಡ್ಲೇಹಳ್ಳಿ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ದುಶ್ಚಟಗಳ ಬಗ್ಗೆ ಅರಿವು ಮೂಡಿಸಿದರು. ಈ ವೇಳೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಯೋಜನಾಧಿಕಾರಿ ಶಶಿಧರ್, ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್, ಉಪನ್ಯಾಸಕ ರಾಜಣ್ಣ, ಕೃಷ್ಣಮೂರ್ತಿ ಇತರರಿದ್ದರು.



ಬೈಲುಕುಪ್ಪೆಯಲ್ಲಿ ನೂತನ ಟಿಬೆಟಿಯನ್ ಮ್ಯೂಸಿಯಂ ಅನ್ನು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಉದ್ಘಾಟಿಸಿದರು. ಈ ವೇಳೆ ದೋರ್ಜಿ ಟಿಡಿಎಲ್ ಪ್ರತಿನಿಧಿ ಲೋಬ್ಸಾಂಗ್ ಯೆಶಿ, ಲುಗ್ಸಾಮ್ ಪ್ರತಿನಿಧಿ ಜಿಗ್ಮೆ ತ್ಸುಲ್ಟ್ರಿಮ್, ಚುಫ್ ಪ್ರತಿನಿಧಿ ಬೆಂಗಳೂರು ಚೋಫೆಲ್ ತುಪ್ಟೆನ್, ಟಿಬೆಟಿಯನ್ ಸಂಸತ್ತಿನ ಸದಸ್ಯ ಮತ್ತು ಶಿಬಿರದ ನಾಯಕರು ಮತ್ತು ಎನ್‌ಜಿಓಗಳು, ಗ್ರಾಮಲೆಕ್ಕಿಗ ನವೀನ್ ಕುಮಾರ್ ಸೇರಿದಂತೆ ಮತ್ತಿತರರಿದ್ದರು.

ಸ್ವಾತಂತ್ರ್ಯಕ್ಕಾಗಿ ಜೀವನ ಮುಡುಪಾಗಿಟ್ಟ ಸಾವರ್ಕರ್

ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಬಣ್ಣನೆ



ಪಿರಿಯಾಪಟ್ಟಣ, ಆ.30– ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ವೀರ ಸಾವರ್ಕರ್ ಸ್ವಾತಂತ್ರ್ಯ ಹೋರಾಟ ಹಾಗೂ ಹಿಂದುತ್ವದ ಬಗ್ಗೆ ತೆಗೆದುಕೊಂಡ ನಿಲುವು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿದಾಯಕ ಎಂದು ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಬಣ್ಣಿಸಿದರು.

ಪಟ್ಟಣದ ಬಸವೇಶ್ವರ ಸರ್ಕಲ್‌ನಲ್ಲಿ ವೀರ ಸಾವರ್ಕರ್ ರಥಯಾತ್ರೆ ಬರಮಾಡಿಕೊಂಡು ಮಾತನಾಡಿದ ಅವರು, ಬಾಲ್ಯದಲ್ಲೇ ಹೋರಾಟದ ಮನೋಭಾವ ಹೊಂದಿದ್ದ ಸಾವರ್ಕರ್ ಸ್ವದೇಶಿ ಚಳವಳಿಗಳಲ್ಲಿ ಭಾಗವಹಿಸುವ ಮೂಲಕ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರು. ಹಿಂದೂ ಮಹಾಸಭಾ, ಹಿಂದೂ ರಾಷ್ಟ್ರೀಯ ರಾಷ್ಟ್ರೀಯತವಾದಿ ಸಂಘಟನೆ ಸೇರಿದಂತೆ ಅನೇಕ ಹಿಂದೂಪರ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಅವರ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಾವರ್ಕರ್ ಅವರನ್ನು ಬ್ರಿಟಿಷರು ಸುಮಾರು 50 ವರ್ಷಗಳ ಕಾಲ ಜೈಲಿನಲ್ಲಿಟ್ಟಿದ್ದರು. ಇಂತಹ ಮಹಾನ್ ನಾಯಕನ ಜೀವನ ಚರಿತ್ರೆ ಅರಿಯದ ಕಾಂಗ್ರೆಸ್ ಮುಖಂಡರು ಸಾವರ್ಕರ್ ಸ್ವಾತಂತ್ರ್ಯ ಹೋರಾಟಗಾರರೇ ಅಲ್ಲ ಎಂದು ಬಿಂಬಿಸಿ ರಾಜಕೀಯ ಲಾಭ ಪಡೆದುಕೊಳ್ಳಲು ಯತ್ನಿಸಿದ್ದು, ನಿಜಕ್ಕೂ ದುರ್ದೈವವೇ ಸರಿ. ಮುಂದಿನ ದಿನಗಳಲ್ಲಿ ಹಿಂದೂಪರ ಸಂಘಟನೆಗಳು ಹಾಗೂ ಬಿಜೆಪಿ ಕಾರ್ಯಕರ್ತರು ಸಾವರ್ಕರ್ ಜೀವನ ಚರಿತ್ರೆ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಈ ವೇಳೆ ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ಮಾಜಿ ಶಾಸಕ ಎಸ್. ಸಿ.ಬಸವರಾಜು, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ಪ್ರಧಾನ ಕಾರ್ಯದರ್ಶಿ ನಳಿನಿಗೌಡ, ಮುಖಂಡರಾದ ವಿಕ್ರಂರಾಜ್, ವೀರಭದ್ರ, ಆರ್.ಟಿ.ಸತೀಶ್, ಸಂಜಯ್ ಶರ್ಮಾ, ರವಿ, ಪಿ.ಜೆ.ವೀರಭದ್ರ, ರವಿ, ಟಿ.ರಮೇಶ್, ಅನಿಲ್ ಸೇರಿದಂತೆ ನೂರಾರು ಮುಖಂಡರಿದ್ದರು.

ಹಿರೀಕ್ಯಾತನಹಳ್ಳಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹಿರೀಕ್ಯಾತನಹಳ್ಳಿ, ಆ.30– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮಂಜುನಾಥ್, ಉಪಾಧ್ಯಕ್ಷರಾಗಿ ಚಿಕ್ಕಸುಂದರಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷೆ ಜ್ಯೋತಿ ಆಂತರಿಕ ಒಪ್ಪಂದದಂತೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಹಿರಿಯ ನಿರೀಕ್ಷಕ ಸೈಯದ್ ಉಸ್ಮ ಕಾರ್ಯ ನಿರ್ವಹಿಸಿದರು. ಸಹಾಯಕರಾಗಿ ಸಂಘದ ಮೇಲ್ವಿಚಾರಕ ಜಿ.ಕುಮಾರ್ ಕರ್ತವ್ಯ ನಿರ್ವಹಿಸಿದರು.

ಈ ವೇಳೆ ನಿರ್ದೇಶಕರಾದ ಮಾಯಪ್ಪ, ಮಹೇಶ್, ಮಹದೇವ್, ಜ್ಯೋತಿ, ಅಶೋಕ, ಬಸಮ್ಮ, ವಸಂತಮ್ಮ, ಗೌರಮ್ಮ, ಕೃಷ್ಣೇಗೌಡ, ಗ್ರಾಮದ ಮುಖಂಡರಾದ ಜವರೇಗೌಡ, ಪಾಪೇಗೌಡ ಎಚ್.ಆರ್. ಸುರೇಶ್, ಶಿವಪ್ಪ ಶ್ರೀಧರ್, ಉದಯ್ ಕುಮಾರ್, ಪ್ರಕಾಶ್, ಸುರೇಶ ನಾಯಕ, ರಮೇಶ್, ಕಾಳೇಗೌಡ, ಮಂಜು, ಸಂಘದ ಸಿಇಓ ಶ್ರೀನಿವಾಸ್, ಸಹಾಯಕ ಸುನೀಲ್ ಹಾಜರಿದ್ದರು.

ಇಂದಿನಿಂದ ತಿ.ನರಸೀಪುರದಲ್ಲಿ ಅದ್ಧೂರಿ ಶ್ರೀ ಗಣಪತಿ ಮಹೋತ್ಸವ

ಗೌರಿ-ಗಣೇಶ ಹಬ್ಬದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ



ತಿ.ನರಸೀಪುರ, ಆ.30– ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಆ.31ರಿಂದ ಸೆ.8ರವರೆಗೆ ಶ್ರೀಗಣಪತಿ ಮಹೋತ್ಸವ ಹಮ್ಮಿಕೊಳ್ಳಲಾಗಿದ್ದು, ಗೌರಿ–ಗಣೇಶ ಹಬ್ಬದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಖಾಸಗಿ ಬಸ್ ಮಾಲೀಕರ ಸಹಕಾರದೊಂದಿಗೆ ಖಾಸಗಿ ಬಸ್ ಏಜೆಂಟರ ಸಂಘದಿಂದ ಹಮ್ಮಿಕೊಂಡಿರುವ ಶ್ರೀಗಣಪತಿ ಮಹೋತ್ಸವ ಆ.31ರ ಬುಧವಾರ(ಇಂದು) ಸಂಜೆ 6ಗಂಟೆಗೆ ಗೌರಿ ಗಣೇಶ ಪ್ರತಿಷ್ಠಾಪನೆಯೊಂದಿಗೆ ವಿಧ್ಯುಕ್ತವಾಗಿ ಆರಂಭಗೊಳ್ಳಲಿದೆ. ಸೆ.1ರ ಸಂಜೆ 6 ಗಂಟೆಗೆ ಶಿಕ್ಷಕ ಬಸವರಾಜು ತಂಡದಿಂದ ಸುಗಮ ಸಂಗೀತ ಮತ್ತು ಹಳೆಯ ಕನ್ನಡ ಚಲನಚಿತ್ರ ಗೀತೆ ಗಾಯನ. ಸೆ.2ರ ಸಂಜೆ 6 ಗಂಟೆಗೆ ಬದನವಾಳು ಶಿವಕುಮಾರ್ ಶಾಸ್ತ್ರಿ ತಂಡದಿಂದ ಹರಿಕಥೆ, ಸೆ.3ರ ಸಂಜೆ 6 ಗಂಟೆಗೆ ಶಾರದಾ ನೃತ್ಯ ತಂಡದಿಂದ ಡ್ಯಾನ್ಸ್ ಕಾರ್ಯಕ್ರಮ ನಡೆಯಲಿದೆ.

ಸೆ.4ರ ಸಂಜೆ 6 ಗಂಟೆಗೆ ಫ್ರೆಂಡ್ಸ್ ಮೆಲೋಡಿಸ್ ತಂಡದಿಂದ ಆರ್ಕೆಸ್ಟ್ರಾ. ಸೆ.5ರ ಸಂಜೆ 6 ಗಂಟೆಗೆ ಕೊಳತ್ತೂರು ಪಿ.ಮಹದೇವಸ್ವಾಮಿ ತಂಡದಿಂದ ಸುಗಮ ಸಂಗೀತ, ಜಾನಪದ ಗೀತೆ, ಭಕ್ತಿಗೀತೆ ಹಾಗೂ ಭಾವಗೀತೆ ಗಾಯನ ಆಯೋಜಿಸಲಾಗಿದೆ. ಸೆ.6ರ ಸಂಜೆ 6 ಗಂಟೆಗೆ ಶ್ರೀರಾಮ ಮಂದಿರ ಭಜನಾ ಸೇವಾ ಸಂಘ, ಆಲಗೂಡು ಶಿವನಂಜಣ್ಣ ತಂಡದಿಂದ ಭಜನಾ ಕಾರ್ಯಕ್ರಮ. ಸೆ.7ರ ಸಂಜೆ 6 ಗಂಟೆಗೆ ಶ್ರೀಮಹದೇಶ್ವರ ಬಸ್ ಮಾಲೀಕ ಕೆ.ವಜ್ರೇಗೌಡರ ಅಧ್ಯಕ್ಷತೆಯಲ್ಲಿ ಡಾ.ವಿಷ್ಣುವರ್ಧನ್ ತಂಡದಿಂದ ಆರ್ಕೆಸ್ಟ್ರಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸೆ.8ರಂದು ಸಂಜೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾತಂಡದೊಂದಿಗೆ ಶ್ರೀಗೌರಿ ಗಣೇಶ ಮೂರ್ತಿಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಜೋಡಿ ರಸ್ತೆಗಳ ಮೂಲಕ ಶ್ರೀರಾಘವೇಂದ್ರಸ್ವಾಮಿ ಮಠ ಹಳೆ ತಿರುಮಕೂಡಲು ಮಾರ್ಗವಾಗಿ ಕಾವೇರಿ, ಕಪಿಲ ಹಾಗೂ ಸ್ಫಟಿಕ ಸರೋವರ ನದಿಗಳ ತ್ರಿವೇಣಿ ಸಂಗಮದಲ್ಲಿ ವಿಸರ್ಜನೆ ಮಾಡಲಾಗುವುದು ಎಂದು ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆಸ್ಕ್ ಕಚೇರಿಯಲ್ಲೂ ಸಂಭ್ರಮ: ಪ್ರತಿ ವರ್ಷದಂತೆ ಈ ಬಾರಿಯೂ ಪಟ್ಟಣದ ಶ್ರೀಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಚೇರಿ ಆವರಣದಲ್ಲೂ ಸಿಬ್ಬಂದಿ ಹಾಗೂ ನೌಕರರು ಜಂಟಿಯಾಗಿ ಶ್ರೀಗೌರಿ ಗಣೇಶ ಹಬ್ಬ ಆಚರಿಸುತ್ತಿದ್ದು, ಪ್ರತಿಷ್ಠಾಪನೆಗೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸೀತಾರಾಮಂ (ತೆ): ಬೆ.10.20ಕ್ಕೆ, ವಿಕಿಪೀಡಿಯ (ಕ): ಮ.1.30ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಸಂ.4.10ಕ್ಕೆ, ಗಾಳಿಪಟ –2 (ಕ): ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಲವ್ 360 (ಕ): ಬೆ.10.20ಕ್ಕೆ, ಡೈರಿ (ತ): ಮ.1.05ಕ್ಕೆ, ಡ್ರ್ಯಾಗನ್ ಬಾಲ್ ಸೂಪರ್ (ಜ): ಮ.3.40ಕ್ಕೆ, ರಾ.7.50ಕ್ಕೆ, ಡ್ರ್ಯಾಗನ್ ಬಾಲ್ ಸೂಪರ್ (ಇಂ): ಸಂ.5.45ಕ್ಕೆ, ತೀರುಪ್ಪು (ಮ): ರಾ.10ಕ್ಕೆ.
ಸ್ಕ್ರೀನ್ 3	ಶಿವ 143 (ಕ): ಬೆ.10.20ಕ್ಕೆ, ಸಂ.4ಕ್ಕೆ, ಡೊಳ್ಳು (ಕ): ಮ.1.25ಕ್ಕೆ, ಲೈಗರ್ (ಕ): ರಾ.7.10ಕ್ಕೆ, ಲೈಗರ್ (ಹಿಂ): ರಾ.10.05ಕ್ಕೆ.
ಸ್ಕ್ರೀನ್ 4	ಲೈಗರ್ (ತೆ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಲೈಗರ್ (ತೆ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಲೈಗರ್ (ತೆ): ಬೆ.10.50ಕ್ಕೆ, ಮ.1.45ಕ್ಕೆ, ಕೌಟಿಲ್ಯ (ಕ): ಸಂ.4.40ಕ್ಕೆ, ಲೈಗರ್ (ಹಿಂ): ರಾ.7.35ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಗಾಳಿಪಟ 2 (ಕ): ಬೆ.10.30ಕ್ಕೆ, ಶಿವ 143 (ಕ): ಮ.1.35ಕ್ಕೆ, ರಾ.7.20ಕ್ಕೆ, ವಿಕಿಪೀಡಿಯಾ (ಕ): ಸಂ.4.35ಕ್ಕೆ, ಡೈರಿ (ತ): ರಾ.10.20ಕ್ಕೆ.
ಸ್ಕ್ರೀನ್ 4	ಲವ್ 360 (ಕ): ಬೆ.11ಕ್ಕೆ, ಗಾಳಿಪಟ 2 (ಕ): ಮ.1.40ಕ್ಕೆ, ರಾ.7.05ಕ್ಕೆ, ಡೊಳ್ಳು (ಕ): ಸಂ.4.45ಕ್ಕೆ, ಸೀತಾರಾಮಂ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ 360 (ಕ): ಬೆ.11ಕ್ಕೆ, ಲೈಗರ್ (ಕ): ಮ.1.45ಕ್ಕೆ, ಸಂ.6.45ಕ್ಕೆ, ಡೊಳ್ಳು (ಕ): ಸಂ.4.30ಕ್ಕೆ, ಲೈಗರ್ (ತೆ): ರಾ.9.30ಕ್ಕೆ.
ಸ್ಕ್ರೀನ್ 2	ಲೈಗರ್ (ತೆ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.15ಕ್ಕೆ, ಲವ್ 360 (ಕ): ಸಂ.4.30ಕ್ಕೆ, ಸೊಲೊಮಂತೆ ತೇನಿಚಕಲ್ (ಮ): ರಾ.9.15ಕ್ಕೆ.
ಸ್ಕ್ರೀನ್ 3	ಗಾಳಿಪಟ–2 (ಕ): ಬೆ.10.30ಕ್ಕೆ, ಮ.1.30ಕ್ಕೆ, ಸಂ.4.35ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಲೈಗರ್ (ತೆ): ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ಗಾಳಿಪಟ–2 (ಕ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಬೆ.9.10ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ರವಿ ಬೋಪಣ್ಣ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ಮ.3.50ಕ್ಕೆ, ರಾ.10.10ಕ್ಕೆ, ವಿರುಮನ್ (ತ): ಬೆ.9.30ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ಥಲ್ಲುಮಾಲ (ಮ): ಸಂ.4.10ಕ್ಕೆ, ಮಾಚೆರ್ಲಾ ನಿಯೋಜಕ ವರ್ಗಂ (ತೆ): ರಾ.9.40ಕ್ಕೆ, ಕಾರ್ತಿಕೇಯ–2(ತೆ): ಮ.12.20ಕ್ಕೆ, ರಕ್ಷಾಬಂಧನ್ (ಹಿಂ): ಬೆ.10.25ಕ್ಕೆ, ಮ.1.40ಕ್ಕೆ, ಸಂ.4.20ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.8.50ಕ್ಕೆ, ಮ.12.15ಕ್ಕೆ, ಮ.12.55ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಲೈಗರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲೈಗರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶಿವ 1, 4, 3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೋಬ್ರಾ (ತ)	4 ಪ್ರದರ್ಶನಗಳು
ಸಂಗಂ	
ಲೈಗರ್ (ತೆ)	4 ಪ್ರದರ್ಶನಗಳು
ಲಿಡೋ	
ವಿಕಿಪೀಡಿಯಾ (ಕ)	2 ಪ್ರದರ್ಶನಗಳು
ಡೈರಿ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಗಾಳಿಪಟ –2(ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಕೋಬ್ರಾ (ತ)	4 ಪ್ರದರ್ಶನಗಳು

ಹುಣಸೂರಲ್ಲಿ ಕವಿತೆ ರಚನೆ, ಕಥಾ ಸ್ಪರ್ಧೆ



ಹುಣಸೂರು, ಆ.30– ಪ್ರಾಸವೇ ಕವಿತೆ ಅಲ್ಲ, ಕುಟುಂಬದ ನೋವು–ನಲಿವುಗಳು, ಸಮಾಜದ ಆಗುಹೋಗುಗಳು, ರಾಜಕೀಯ ದೊಂಬರಾಟ, ಪ್ರಸ್ತುತ ವಿದ್ಯಮಾನಗಳು ಕವಿತೆ ರಚನೆಯಲ್ಲಿ ಸಮ್ಮಿಲನಗೊಂಡಾಗ ಮಾತ್ರ ಕವಿತೆ ಅರ್ಥಪೂರ್ಣ ಎಂದು ಅಕ್ಷರ ಚಪ್ಪರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ ಸಹ ಕಾರ್ಯದರ್ಶಿ ದೀಕ್ಷಿತ್ ನಾಯರ್ ಅಭಿಪ್ರಾಯಪಟ್ಟರು.

ನಗರದ ಮಹಿಳಾ ಸರ್ಕಾರಿ ಕಾಲೇಜಿನ ಕನ್ನಡ ವಿಭಾಗ, ಅಕ್ಷರ ಚಪ್ಪರ ಸಂಸ್ಥೆ ಸಹಯೋಗದಲ್ಲಿ ನಡೆದ ಕವಿತೆ ರಚನೆ ಮತ್ತು ಕಥಾ ಸ್ಪರ್ಧೆಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರಲ್ಲೂ ಕವಿ ಮತ್ತು ಕವಿತ್ವದ ಶಕ್ತಿ ಇರುತ್ತದೆ. ಕನ್ನಡದಲ್ಲಿ ಒಳ್ಳೆಯ ಕವಿಗಳ ಕೊರತೆ ಇದೆ. ಕವಿ ಕೇವಲ ಶೃಂಗಾರ ಕಾವ್ಯ ರಚನೆಗೆ ಸೀಮಿತವಾಗಬಾರದು. ಸಮಾಜದ ಸ್ವಾಸ್ಥ್ಯಕ್ಕೆ ಸ್ಪಂದಿಸುವಂತಿರಬೇಕು. ಅದನ್ನು ಹೊರತರುವಲ್ಲಿ ಪ್ರಯತ್ನ ಪಡಬೇಕು. ಉದಯೋನ್ಮುಖ ಬರಹಗಾರರು ಬರೆದ ಕವನಗಳನ್ನು ಹಿರಿಯ ಸಾಹಿತಿಗಳಿಗೆ ತೋರಿಸುವ ಮೊದಲು ಆತ್ಮೀಯರಿಗೆ ತೋರಿಸಿದಾಗ ಬರೆಯಲು ಉತ್ಸಾಹ ತುಂಬುತ್ತಾರೆ. ಅಕ್ಷರ ಚಪ್ಪರ ವೇದಿಕೆ ಯುವ ಉದಯೋನ್ಮುಖ ಕವಿ ಕಥೆಗಾರರಿಗೆ ಉತ್ತಮ ವೇದಿಕೆಯಾಗಿದ್ದು, ಕಾಲೇಜುಗಳಲ್ಲಿ ಇಂತಹ ಕಮ್ಮಟ ನಡೆಸಲಾಗುತ್ತಿದೆ ಎಂದರು.

ಅಕ್ಷರ ಚಪ್ಪರ ಸಂಸ್ಥೆಯ ಅಕ್ಷತಾ ಭಟ್, ವಿದ್ಯಾರ್ಥಿಗಳಾದ ವೀಣಾ, ಪ್ರತಿಭಾ, ಆನಂದ ಮಾತನಾಡಿದರು. ಕಾರ್ಯಕ್ರಮವನ್ನು ಸಿಡಿಸಿ ಕಾರ್ಯಾಧ್ಯಕ್ಷ ನಟರಾಜ್ ಉದ್ಘಾಟಿಸಿದರು. ಪ್ರಾಂಶುಪಾಲ ಜ್ಞಾನಪ್ರಕಾಶ ಅಧ್ಯಕ್ಷತೆ ವಹಿಸಿದ್ದರು. ತಾವು ರಚಿಸಿದ್ದ ಕವನವನ್ನು ವಿದ್ಯಾರ್ಥಿಗಳು ವಾಚಿಸಿದರು. ಹಿರಿಯ ಸಾಹಿತಿ ಪದ್ಮನಾಭ, ಕನ್ನಡ ವಿಭಾಗದ ಮುಖ್ಯಸ್ಥ ಬಸವಲಿಂಗಸ್ವಾಮಿ, ಪ್ರಾಧ್ಯಾಪಕರಾದ ಡಾ.ನಂಜುಂಡಸ್ವಾಮಿ, ಮಂಜುನಾಥ್, ಶ್ರೀನಿವಾಸ್, ಹನುಮಂತಪ್ಪ, ಮನೋಜ್, ಸುಜಿತ್ ಗ್ರಂಥಪಾಲಕ ಡಾ.ಕರುಣಾಕರ್ ಉಪಸ್ಥಿತರಿದ್ದರು.

ಸ್ಪರ್ಧಾ ವಿಜೇತರು: ಕವನ ರಚನೆ ಸ್ಪರ್ಧೆ; ಪ್ರಚಿತಾ (ಪ್ರಥಮ), ಸೌಂದರ್ಯ (ದ್ವಿತೀಯ), ಕವನ (ತೃತೀಯ) ಹಾಗೂ ಕಥಾ ರಚನೆ ಸ್ಪರ್ಧೆಯಲ್ಲಿ ಭವ್ಯ(ಪ್ರಥಮ) ಪ್ರಚಿತಾ (ದ್ವಿತೀಯ), ಇಂದುಶ್ರೀ (ತೃತೀಯ) ಬಹುಮಾನ ಪಡೆದರು.

ಶ್ರೀರಾಮುಲು ನಾಯ್ಡು ನಿಧನ



ಹುಣಸೂರು, ಆ.30– ನಗರದ ಮಾರಿಗುಡಿ ಬೀದಿ ನಿವಾಸಿ ಶ್ರೀರಾಮುಲು ನಾಯ್ಡು (84) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ನೆರವೇರಲಿದೆ.